ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೪ ಡಿಸೆಂಬರ್-೨೦೧೩ ಸಂಚಿಕೆ-೫



ಮಂಗಳಯಾನ ಮತ್ತು ಭೂಯಾನ

ಜನಪದ ವಿಚಾರದಲ್ಲಿ

ಡಿಸೆಂಬರ್ - ೨೦೧೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್ – ೨೦೧೩
ಸಂಪುಟ – ೧೪
ಸಂಚಿಕೆ – ೫

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ಲೊಳಲೊಟ್ಟೆ

ಲೊಳಲೊಟ್ಟೆ , ಎಲ್ಲಾ ಲೊಳಲೊಟ್ಟೆ

ಆನೆ ಕುದುರೆ ಒಂಟೆ ಲೊಳಲೊಟ್ಟೆ, ಬಹು
ಸೇನೆ ಭಂಡಾರವು ಲೊಳಲೊಟ್ಟೆ
ಮಾನಿನಿಯರ ಸಂಗ ಲೊಳಲೊಟ್ಟೆ,
ದೊಡ್ಡ ಕ್ಷೋಣೀಶನೆಂಬುದು ಲೊಳಲೊಟ್ಟೆ

ಮುತ್ತು ಮಾಣಿಕ್ಯ ಲೊಳಲೊಟ್ಟೆ, ಚಿನ್ನ
ಛತ್ರ ಚಾಮರ ಧ್ವಜ ಲೊಳಲೊಟ್ಟೆ
ಸುತ್ತಗಲ ಕೋಟೆ ಲೊಳಲೊಟ್ಟೆ
ಮತ್ತೆ ಉತ್ತಮ ಪ್ರಭುತ್ವ ಲೊಳಲೊಟ್ಟೆ

ಕಂಟಕರೆಂಬೋರು ಲೊಳಲೊಟ್ಟೆ, ನಿನ್ನ
ನೆಂಟರು ಇಷ್ಟರು ಲೊಳಲೊಟ್ಟೆ
ಉಂಟಾದ ಗುಣನಿಧಿ ಪುರಂದರವಿಠಲನ
ಬಂಟನಾಗದವ ಲೊಳಲೊಟ್ಟೆ

– *ಪುರಂದರದಾಸರು*

ವಿಚಾರ ದೀಪ್ತಿ

ಕೊನೆಯದಾಗಿ ನಾನು ನಿಮಗೆ ಹೇಳುವುದೊಂದಿದೆ. ಸಾಮಾನ್ಯವಾಗಿ ನೀವು ಒಂದು 'ಪಕ್ಷ'. ರಾಜಕೀಯದಲ್ಲೇನೋ ಹೌದು. ಒಂದು ಪಕ್ಷ ಕಟ್ಟಿದ್ದೀರಿ. ಸಮಾಜವಾದಿ ಪಕ್ಷ ಅಂತ ಇಟ್ಟುಕೊಳ್ಳೋಣ. ಕಾಂಗ್ರೆಸ್ ಪಕ್ಷಕ್ಕೆ ನೀವು ವಿರೊಧಿಗಳು. ಸಮಾಜವಾದಿ ಪಕ್ಷ ಏನು ಧ್ಯೇಯಗಳನ್ನು ಇಟ್ಟುಕೊಂಡಿದೆಯೋ ಅದೇ ಧ್ಯೇಯಕ್ಕೊಸ್ಕರವಾಗಿ ಕಾಂಗ್ರೆಸ್‌ನವರೇನಾದರೂ ಮಾಡಿದರೆ ಅದನ್ನು ವಿರೊಧಿಸುತ್ತೀರಿ. ಏಕೆಂದರೆ, ವಿರೋಧಪಕ್ಷದವರು ಏನು ಮಾಡಿದರೂ ಅದನ್ನು ವಿರೋಧಿಸಲೇಬೇಕು ಅಂತ. 'ಅಲ್ಲಯ್ಯ' ನೀವೇನು ಮಾಡಬೇಕು ಅಂತ ಇದ್ದೀರೋ ಅದನ್ನೆ ತಾನೇ ಅವರೂ ಮಾಡುತ್ತಿರುವುದು. ಅದನ್ನು ಸಪೋರ್ಟ್ ಮಾಡಿ ಎಂದರೆ, ಆಗುವುದಿಲ್ಲ. ವಿರೊಧಪಕ್ಷವನ್ನು ಬೀಳಿಸಲೇ ಬೇಕಷ್ಟೆ! ನೀವು ಮಾತ್ರ ಆ ಕೆಲಸಕ್ಕೆ ಹೋಗಬೇಡಿ. ನೀವು ಒಪ್ಪಿರುವ ತತ್ವಗಳನ್ನು ಲೋಕಕ್ಕೆ ಒಳ್ಳೆಯದು ಮಾಡುವ ಯಾರೇ ಮಾಡಿದರೂ ನೀವು ಅದಕ್ಕೆ ಬೆಂಬಲ ಕೊಡಬೇಕು, ಸಹಕರಿಸಬೇಕು. ನೀವು ಒಪ್ಪಿರುವ ತತ್ವಗಳನ್ನೆ ಆಚರಿಸಹೊರುಡುವವರನ್ನು ವಿರೋಧಿಗಳೆಂದು ಹೇಳುವುದು ಅವಿವೇಕ. ಒಳ್ಳೆಯ ಕೆಲಸ ಎಲ್ಲಿ ನಡೆಯುತ್ತದೆಯೋ ಅದನ್ನು ನೀವು ಒಪ್ಪಿಕೊಳ್ಳಬೇಕು. ಬೆಂಬಲಕೊಡಬೇಕು. ಅದನ್ನು ಪ್ರಚೋದಿಸಬೇಕು. ಪ್ರಚಾರಮಾಡಬೇಕು. ಯಾವುದನ್ನೂ ವಿರೊಧಪಕ್ಷವೆಂದು ಮಾಡಿಕೊಳ್ಳಬೇಡಿ. ಅದು ವಿರೋಧ ತತ್ವಕ್ಕೆ ಮಾತ್ರ ಸೀಮಿತವಾಗಿರಲಿ ಅಷ್ಟೆ. ವಿರೋಧ ತತ್ವವನ್ನು ವಿರೋಧಿಸಿ.

ಈಗ ಅಕ್ಷರ ಪ್ರಚಾರ ಇದೆ. ಬ್ರಾಹ್ಮಣ ಅಕ್ಷರ ಪ್ರಚಾರ ಮಾಡುತ್ತಿದ್ದಾನೆಂದು ಅದಕ್ಕೆ ವಿರೋಧವಾಗಿ ಹೋಗುತ್ತೀರಾ? ಅಕ್ಷರ ಪ್ರಚಾರ ಮಾಡುವುದು ಮುಖ್ಯ. ಬ್ರಾಹ್ಮಣನಾದರೂ ಮಾಡಲಿ, ಮುಸಲ್ಮಾನನಾದರೂ ಮಾಡಲಿ, ಯಾರಾದರೂ ಮಾಡಲಿ, ಅಂತಹುದನ್ನೆಲ್ಲಾ ನೀವು ವಿರೋಧಿಸಬಾರದು. ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಎಲ್ಲೆಲ್ಲಿ ಒಳ್ಳೆಯ ಕೆಲಸ ನಡೆಯುತ್ತಾಯಿದೆಯೋ ಯಾವ ಪಕ್ಷದಿಂದ ನಡೆಯುತ್ತಾಯಿದೆಯೋ ಅದಕ್ಕೆಲ್ಲಾ ನಿಮ್ಮ ಬೆಂಬಲ ಇರಬೇಕು. ಏಕೆಂದರೆ ನೀವು ಎಲ್ಲವನ್ನೂ ವಿರೋಧಿಸುವ ಮತ್ತೊಂದು ವಿರೋಧಪಕ್ಷವಾಗಿ ಉಳಿಯಬಾರದು. Get away from this negative attitude. ಯಾವಾಗಲೂ ಸೃಜನ ಕಾರ್ಯ, ಸೃಷ್ಟಿಕಾರ್ಯ ವಿಧ್ಯುಕ್ತವಾಗಿ ನಡೆಯಲಿ; ಬರಿಯ ನಿಷೇಧ ಅನಾವಶ್ಯಕ.

ನಾನು ಎಷ್ಟು ಹೊತ್ತು ಮಾತನಾಡಿದೆನೋ ದೇವರಿಗೇ ಗೊತ್ತು; ಇಷ್ಟನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಅಂದರೆ ನಾನು ನಿಮ್ಮನ್ನು ಒಲಿಸಿಕೊಳ್ಳಬೇಕು ಅಂತ ಯೋಚನೆ ಮಾಡಿಲ್ಲ. ನನಗೆ ಸರಿ ಎಂದು ತೋರಿದ್ದನ್ನು ಹೇಳಿದ್ದೇನೆ. ಈ ದ್ವೇಷ ಈ ಅಸೂಯೆ ಇಂಥದನ್ನೆಲ್ಲ ಬಿಟ್ಟು, ಒಳ್ಳೆಯದು ಎಲ್ಲೆಲ್ಲಿ ನಡೆಯುತ್ತಿದೆಯೋ ಅದಕ್ಕೆ ಸಹಾಯಮಾಡುವ ರೀತಿಯಲ್ಲಿ ಮಾಡಿ, ಬರೆಯಿರಿ, ಪಕ್ಷಗಿಕ್ಷ ಅಂತಹದನ್ನೆಲ್ಲ ಯೋಚನೆ ಮಾಡಬೇಡಿ. ಇಷ್ಟನ್ನು ಹೇಳಿ ಮುಗಿಸುತ್ತೇನೆ.

– ***ಕುವೆಂಪು*** (೨೦-೪-೧೯೭೪)

ಮಂಗಳಯಾನ ಮತ್ತು ಭೂಯಾನ

- ಸುರೇಂದ್ರ ಕೌಲಗಿ

ನವೆಂಬರ್ ೫, ೨೦೧೩ ಆಧುನಿಕ ಭಾರತದ ವೈಜ್ಞಾನಿಕ ಇತಿಹಾಸದಲ್ಲಿ ಐತಿಹಾಸಿಕ ದಿನ. ಆ ದಿನದಂದು ಭಾರತ ಮಂಗಳ ಗ್ರಹದತ್ತ ವಿ.ಪಿ.ಎಸ್.ಎಲ್.ವಿ.೨೫ ಆಕಾಶ ನೌಕೆಯನ್ನು ಅಂತರಿಕ್ಷಕ್ಕೆ ಚಿಮ್ಮಿಸಿತು. ಅದರೊಂದಿಗೆ ಭಾರತ ಈ ಸಾಧನೆಯಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದು ತನ್ನ ಹಿರಿಮೆ-ಗರಿಮೆಗಳೆರಡನ್ನು ಹೆಚ್ಚಿಸಿಕೊಂಡಿತು. ಭಾರತೀಯರೆಲ್ಲರೂ ತಮ್ಮ ದೇಶದ ಯುವ ವಿಜ್ಞಾನಿಗಳ ಮಹಾ ಸಾಧನೆ ಬಗ್ಗೆ ಹೆಮ್ಮೆಪಟ್ಟರು ಮತ್ತು ಸಂತೋಷಪಟ್ಟರು. ಮುಂದಿನ ದಿನಗಳಲ್ಲಿ ಅಂದರೆ ೨೦೧೪ರ ಸೆಪ್ಟಂಬರ್ ಸುಮಾರಿಗೆ ಮಂಗಳ ಗ್ರಹದ ಪಥಕ್ಕೆ ಸೇರಲಿದೆ. ಈ ಮಂಗಳಯಾನ ಯಶಸ್ವಿಯಾಗಲೆಂದು ಹಾರೈಸೋಣ ಮತ್ತು ವಿಜ್ಞಾನಿಗಳನ್ನು ಅಭಿನಂದಿಸೋಣ.

ವಿಜ್ಞಾನಿಗಳಲ್ಲದ ಜನಸಾಮಾನ್ಯರಾದ ನಾವು ಭೂಯಾನ ಪ್ರಾರಂಭಿಸೋಣ. ಮಂಗಳಯಾನದ ಬಾಹ್ಯಾಕಾಶ ನೌಕೆ ಅಂತರಿಕ್ಷಕ್ಕೆ ಚಿಮ್ಮುವ ಸಮಯದಲ್ಲಿಯೇ ಫಿಲಿಫೈನ್ಸ್ ದೇಶವು ಇದುವರೆಗೂ ಜಗತ್ತು ಕಂಡರಿಯದ ಹಾಗೂ ಅನುಭವಿಸಿದ ಮಹಾನ 'ಹೈಯಾನ್' ಎಂಬ ಸುಂಟರಗಾಳಿಗೆ ತುತ್ತಾಗಿ ಇತ್ತೀಚಿಗಿನ ವರದಿಯ ಪ್ರಕಾರ ಹತ್ತ ಸಾವಿರ ಜನ ಸತ್ತಿದ್ದಾರೆ ಮತ್ತು ಮನೆಮಠಗಳನ್ನು ಕಳೆದುಕೊಂಡಿದ್ದಾರೆ; ಹಸಿವಿನಿಂದ ಬಳಲುತ್ತಿದ್ದಾರೆ, ಹೊಟ್ಟೆಗಾಗಿ ಅಲೆಯುತ್ತಿದ್ದಾರೆ. ಇದಕ್ಕೂ ಮೊದಲು ಚೀಣಾದೇಶದಲ್ಲಿ ದಟ್ಟವಾದ ಹಾಗು ಉಸಿರುಗಟ್ಟುವಂಥ ಮಂಜು ಬಿದ್ದಿತ್ತು. ಈ ವರ್ಷ ಜೂನ್ ತಿಂಗಳಿನಲ್ಲಿ ಉತ್ತರಾಖಂಡದಲ್ಲಿ ಜಲಪ್ರಳಯವಾಯಿತು. ಜಲಪ್ರಳಯದ ಕಾರಣದಿಂದ ಲಕ್ಷಾಂತರ ಜನ ಮನೆಮಠ ಕಳೆದುಕೊಂಡು ಅನಾಥರಾದರು. ಮತ್ತು ಇತ್ತೀಚಿಗೆ ಒರಿಸ್ಸಾ, ಆಂಧ್ರಪ್ರದೇಶದಲ್ಲಿ ಫೈಲೀನ್ ಚಂಡಮಾರುತ ಬೀಸಿತು. ಇಂಥ ಪ್ರಾಕೃತಿಕ ವಿಕೋಪಗಳಲ್ಲದೆ ದೇಶಾದ್ಯಂತ ನೂರಾರು ಬಗೆಯ ಅಪಘಾತಗಳು ಸಂಭವಿಸಿ ಜನಗಳು ಸಾಯುತ್ತಲಿದ್ದಾರೆ. ಭೂಮಿಯ ಮೇಲಿನ ಎಲ್ಲ ದೇಶಗಳಲ್ಲಿ ನೂರಾರು ಪ್ರಕಾರದ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಪರಿಸರಾತ್ಮಕ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ನೂರಾರು ಸಮಸ್ಯೆಗಳಿವೆ. ಮತಾಂಧತೆ ಭಯೋತ್ಪಾದಕತೆಯಂಥ ಸಮಸ್ಯೆಗಳು ಸಮಾಜವನ್ನು ಕಿತ್ತುತಿನ್ನುತ್ತಿವೆ. ಜನಸಂಖ್ಯೆಯೂ ಬೆಳೆಯುತ್ತಿದೆ. ಇನ್ನು ಹದಿನೈದು ವರ್ಷಗಳಲ್ಲಿ ಭೂಮಿಯ ಮೇಲೆ ೬೦೦ ಕೋಟಿ ಜನ ಗಿಜಿಗುಡುತ್ತಾರೆ. ಪ್ರತಿವರ್ಷ ೫.೫೦೦ ಶತಕೋಟಿ ರೂಪಾಯಿ ಮೌಲ್ಯದ ಶಸ್ತ್ರಾಸ್ತ್ರಗಳು ತಯಾರಾಗುತ್ತಿವೆ. ಇದಕ್ಕಾಗಿ ಭೂಮಿಯ ಅಮೂಲ್ಯ

ಸಂಪನ್ಮೂಲಗಳ ವಿನಿಯೋಗವಾಗುತ್ತಿದೆ. ವಾತಾವರಣದ ಒಝೋನ್ ವಲಯ ಛಿದ್ರವಾಗುತ್ತಿದೆ. ಹುಳಿಮಳೆ ಸುರಿಯಲಾರಂಭಿಸಿದೆ. ಮರುಭೂಮಿ ವಿಸ್ತರಿಸುತ್ತಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ ಮೌಲ್ಯಗಳು ನಾಮಾವಶೇಷವಾಗುತ್ತಿವೆ. ಮನುಷ್ಯ-ಮನುಷ್ಯರಲ್ಲಿ ನಂಬಿಕೆ ವಿಶ್ವಾಸ ಮಾಯವಾಗುತ್ತಿದೆ. ಹಣದ ದುರಾಸೆಯೆಂಬ ರೋಗಾಣು ಪ್ರಪಂಚವನ್ನು ಕಾಡುತ್ತಿದೆ. ಮಾನವ ಬಾಂಬ್‌ಗಳ ಮೂಲಕ ಜನಸಾಮಾನ್ಯರ ಹತ್ಯೆ ಅವ್ಯಾಹತವಾಗಿ ನಡೆದಿದೆ. ಇಸ್ರೇಲ್ ಮತ್ತು ಪ್ಯಾಲೇಸ್ಟೇನ್ ಮಧ್ಯದ ಜನಾಂಗೀಯ ಘರ್ಷಣೆ ಉಲ್ಬಣಗೊಳ್ಳುತ್ತಲೇ ಇದೆ. ಭಾರತ ಮತ್ತು ಪಾಕ್ ಮಧ್ಯೆ ಕಾಶ್ಮೀರದಿಂದಾಗಿ ಉಂಟಾಗಿರುವ ವಿವಾದ ಆರು ದಶಕಗಳಿಂದಲೂ ಇನ್ನೂ ಜ್ವಲಂತವಾಗಿಯೇಯಿದೆ. ಚೀನಾದಿಂದ ಭಾರತದ ಗಡಿ ಉಲ್ಲಂಘನೆ ಆಗುತ್ತಲೇ ಇದೆ. ಉತ್ತರ ಮತ್ತು ದಕ್ಷಿಣ ಕೊರಿಯಾ ಮಧ್ಯೆ ವೈಮನಸ್ಸು ತಾಂಡವವಾಡುತ್ತಿದೆ. ಶ್ರೀಲಂಕಾದಲ್ಲಿ ತಮಿಳಿರ ಮೇಲೆ ಜನಾಂಗೀಯ ಅತ್ಯಾಚಾರ ನಡೆಯುತ್ತಲೇ ಇದೆ. ಇನ್ನು ಹವಾಮಾನದ ವೈಪರಿತ್ಯದ ಕಾರಣದಿಂದಾಗಿ ಜಾಗತಿಕ ಕೃಷಿ ಜೀವನದಲ್ಲಿ ಬಹಳಷ್ಟು ಏರುಪೇರಾಗಿ ರೈತರ ಜೀವನ ದುರ್ಭರವಾಗಿದೆ. ಅಂಟಾರ್ಟಿಕಾದಲ್ಲಿಯ ಹಿಮಗಡ್ಡೆಗಳು ಕರಗುತ್ತಲಿವೆ. ಅದರ ಕಾರಣದಿಂದಾಗಿ ೨೦೧೩ರ ಮಾರ್ಚ್ ತಿಂಗಳಲ್ಲಿ ಸಮುದ್ರದ ಮಟ್ಟ ದಾಖಲೆ ಪ್ರಮಾಣದಲ್ಲಿ ಏರಿದೆ. ಪ್ರತಿವರ್ಷ ೩.೨ ಮಿಲಿ ಮೀಟರ್ ಸಮುದ್ರದ ಸಾಧಾರಣ ಏರಿಕೆಯಿದೆ. ಇದು ಕಳೆದ ೨೦ನೇ ಶತಮಾನದ ಕೊನೆಯಲ್ಲಿ ಇದ್ದ ೧.೬ ಮಿಲಿಮೀಟರ್‌ಗಿಂತ ಎರಡು ಪಟ್ಟು ಹೆಚ್ಚಾಗಿದೆ. 'ಹೈಯಾನ್' ನಂಥ ಬಿರುಗಾಳಿ ಭವಿಷ್ಯದಲ್ಲಿ ಇನ್ನು ಹೆಚ್ಚು ಶಕ್ತಿದಾಯಕ ಮತ್ತು ಹೆಚ್ಚು ಹೆಚ್ಚಾಗಿ ಸಂಭವಿಸುವುದೆಂದು ವಿಜ್ಞಾನಿಗಳು ಊಹಿಸಿದ್ದಾರೆ. ಈ ಮಾತನ್ನು ಜಾಗತಿಕ ಹವಾಮಾನ ಸಂಸ್ಥೆ ಭೂಮಿಯ ಮೇಲಿನ ಹವಾಮಾನ ಕುರಿತಾದ ತನ್ನ ಮಧ್ಯಂತರ ವರದಿಯಲ್ಲಿ ತಿಳಿಸಿದೆ. ಆ ಕಾರಣದಿಂದಾಗಿ ಸಮುದ್ರ ತೀರದ ಅನೇಕ ನಗರಗಳು ಸಮುದ್ರದ ಪಾಲಾಗುವ ಭೀತಿ ಇದೆ. ಅನೇಕ ನಡುಗಡ್ಡೆಗಳು ಸಮುದ್ರದಲ್ಲಿ ಮುಳುಗಲಿವೆ. ಹೀಗೆ ದೇಶದ ಮಟ್ಟದಲ್ಲಿಯೂ ಜಾಗತಿಕ ಮಟ್ಟದಲ್ಲಿಯೂ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿಲಿರುವ ಸಂದರ್ಭದಲ್ಲಿ ಮಂಗಳಯಾನದಂಥ ವೈಜ್ಞಾನಿಕ ಕಸರತ್ತುಗಳ ಔಚಿತ್ಯವೇನು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಭೂಯಾನ ಮಾಡಿದರೆ ಭೂಮಿಯ ಮೇಲಿರುವ ಜೀವಕೋಟಿಯ ಕಷ್ಟಗಳ ಮತ್ತು ಸಮಸ್ಯೆಗಳ ಅನಂತವಾದ ಸರಮಾಲೆಯೇ ಬಿಚ್ಚುತ್ತಾಹೋಗುವುದು ಮತ್ತು ಪ್ರಕೃತಿ ಅಥವಾ ನಿಸರ್ಗ ಎಷ್ಟು ಬಗೆಯಾಗಿ ನಾಶಹೊಂದುತ್ತಲಿದೆ ಎಂಬುದು ಗೊತ್ತಾಗುತ್ತದೆ. ಆಕಾಶವೇ ಕಾಗದವಾಗಿ, ಸಮುದ್ರವೇ ಶಾಯಿಯಾಗಿ, ಬ್ರಹ್ಮನೇ ಲಿಪಿಕಾರನಾಗಿ ಬರೆದರೂ ಇಂಥ ಕಷ್ಟಗಳ ಪಟ್ಟಿಯನ್ನು ಅಂತಿಮಗೊಳಿಸಲಾರ. ಪ್ರತಿಯೊಂದು ಸೂರ್ಯೋದಯದೊಂದಿಗೆ ಮಾನವ ನಿರ್ಮಿತ ಸಮಸ್ಯೆಗಳು ಹುಟ್ಟುತ್ತಲೇ ಇರುತ್ತವೆ. ವರ್ತಮಾನದ ಬ್ರಹ್ಮಾಂಡದಲ್ಲಿ ಇರುವುದೊಂದೇ ಭೂಮಿ ಮತ್ತು

ಸಕಲ ಜೀವರಾಶಿಗಳಲ್ಲಿ ಶ್ರೇಷ್ಠನಾದ ಮಾನವನಿರುವುದೂ ಇರುವುದೊಂದೇ ಈ ಭೂಮಿಯ ಮೇಲೆ.

ಮಾನವಜೀವಿ ಮನುಷ್ಯನಾಗಿ ಜೀವತಳೆಯುವುದು ಒಂದೇ ಬಾರಿ. ಅವನಿಗೆ ಪುನರ್ಜನ್ಮ ಇದೆಯೇ ಇಲ್ಲವೇ ಎಂಬುದನ್ನು ಯಾರೂ ತಿಳಿಯರು. ಆತ್ಮ ಅವಿನಾಶ ಮತ್ತು ಅದು ನಿರಂತರ ಚಲಿಸುವಂಥದ್ದು ಎಂದು ಒಪ್ಪುವುದಾದರೆ ಮನುಷ್ಯ ಮುಂದಿನ ಜನ್ಮದಲ್ಲಿ ಯಾವುದೋ ಒಂದು ಜಂತುವಾಗಿ, ಪ್ರಾಣಿಯಾಗಿ ಹುಟ್ಟಬಹುದು. ಒಂದೇಸಲ ಮಾನವ ಜನ್ಮ ಪಡೆದ ಮನುಷ್ಯ ಈ ಭೂಮಿಯ ಮೇಲೆ ಇರುವಷ್ಟು ಕಾಲ ನೆಮ್ಮದಿಯಿಂದ ಇದ್ದು ಅಮೃತತ್ವವನ್ನು ಪಡೆಯಲು ಪ್ರಯತ್ನಿಸಬೇಕು.

ಆದ್ದರಿಂದ ಅಂತರಿಕ್ಷ ಶೋಧನೆಗಾಗಿ ಎಷ್ಟೊಂದು ವೈಜ್ಞಾನಿಕ ಕಸರತ್ತು ನಡೆಯುತ್ತಿದೆಯೋ ಅದಕ್ಕೂ ಹೆಚ್ಚಿನ ಕಸರತ್ತು ಭೂಮಿಯ ಮೇಲಿರುವ ಮಾನವ ಜನಾಂಗದ ಆತ್ಮಿಕ ಮತ್ತು ಭೌತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ಮಾನವನ ನೆಮ್ಮದಿಯ ಜೀನವಕ್ಕಾಗಿ ಹಾಗೂ ಪ್ರಕೃತಿಯ ಉಳಿವಿಗಾಗಿ ಕಸರತ್ತು ಮಾಡಬೇಕಿದೆ. ಆದರೆ ಈಗ ಕೈಗೊಳ್ಳಲಾಗಿರುವ ಮಂಗಳಯಾನ ಅಂಥ ಯಾವ ಮಹೋದ್ದೇಶವನ್ನೂ ಇಟ್ಟುಕೊಂಡಿರುವಂತೆ ಕಾಣುತ್ತಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಮಂಗಳಯಾನದ ಉದ್ದೇಶಗಳು ಈ ರೀತಿ ಇವೆ:-

೧. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತವು ಸಾಧಿಸಿರುವ ಸಾಧನೆಯನ್ನು ವಿಶ್ವಕ್ಕೆ ಸಾರುವುದು;

೨. ಮಂಗಳ ಗ್ರಹದ ಬಗ್ಗೆ ಮೌಲಿಕ ಸಂಶೋಧನೆ ನಡೆಸುವುದು;

೩. ಅಲ್ಲಿ ಜೀವಿಗಳ ಇರುವಿಕೆಗೆ ಅಗತ್ಯವಾದ ಮಿಥೇನ್ ಅನಿಲದ ಕುರುಹು ಇದೆಯೇ ಎಂಬುದು.

ಮೇಲ್ಕಾಣಿಸಿದ ಈ ಮೂರು ಉದ್ದೇಶಗಳು ಈ ಮೊದಲು ವಿವರಿಸಲಾಗಿರುವ ಭೂಮಿಯ ಮೇಲಿನ ಯಾವ ಒಂದು ಸಮಸ್ಯೆಗೂ ಪರಿಹಾರ ಒದಗಿಸಲಾರವು.

ಭೂಮಿಯ ಮೇಲೆ ೩.೭೦ಕೋಟಿ ವರ್ಷಗಳಿಂದ ಜೀವ ಅಸ್ತಿತ್ವದಲ್ಲಿದೆ. ಮತ್ತು ೪೬೦ ಕೋಟಿ ವರ್ಷಗಳಿಂದ ಈ ಭೂಮಿ ಅಂತರಿಕ್ಷದಲ್ಲಿ ಸುತ್ತುತ್ತಿದೆ. ಭೂಮಿಯ ಈ ದೀರ್ಘಕಾಲದ ಅಸ್ತಿತ್ವ ನಮಗೆ ಅರ್ಥವಾಗಲೆಂದು ಅದಕ್ಕೆ ೪೬ ವರ್ಷಗಳಾಗಿವೆ ಎಂದು ಊಹಿಸೋಣ. ಮೊದಲ ಏಳು ವರ್ಷ ಹೇಗೆ ಕಳೆಯಿತು ಎಂಬುದು ಯಾರಿಗೂ ಗೊತ್ತಿಲ್ಲ. ಭೂಮಿಯ ೪೨ನೇ ವಯಸ್ಸಿನಲ್ಲಿ ಮೊಟ್ಟಮೊದಲ ಬಾರಿಗೆ ಹೂ ಅರಳಲು ಪ್ರಾರಂಭವಾಯಿತು. ಅದರ ೪೫ನೇ ವರ್ಷದಲ್ಲಿ ಡೈನೋಸಾರ್ ಎಂಬ ದೈತ್ಯ ಪ್ರಾಣಿಗಳು ಅವತರಿಸಿ ಗತಿಸಿದವು. ಎಂಟು ತಿಂಗಳ ಹಿಂದೆ ಸಸ್ತನಿಗಳು ಹುಟ್ಟಿ ಬಂದವು. ಕಳೆದ ವಾರವಷ್ಟೇ ಮನುಷ್ಯರನ್ನು ಹೋಲುವ ಕಪಿಗಳು ಮನುಷ್ಯರಾಗಿ ಮರದಿಂದ ಕೆಳಗಿಳಿದವು.

ನಾಲ್ಕು ತಾಸುಗಳ ಹಿಂದಷ್ಟೇ ಆಧುನಿಕ ಮಾನವ ಅವತರಿಸಿದ. ಒಂದು ತಾಸಿನ ಹಿಂದೆ ಬೇಸಾಯ ಮಾಡುವುದನ್ನು ಕಲಿತ. ಔದ್ಯಮಿಕ ಕ್ರಾಂತಿಯಾಗಿ ಒಂದು ನಿಮಿಷವಾಯಿತಷ್ಟೆ. ಸುಂದರ ಸ್ವರ್ಗವಾಗಿದ್ದ ಈ ಭೂಮಿಯನ್ನು ಕೇವಲ ಕಳೆದ ಐವತ್ತ ಸೆಕೆಂಡುಗಳಲ್ಲಿ ಆತ ತಿಪ್ಪೆ, ಚರಂಡಿಗಳ ನರಕವನ್ನಾಗಿ ಮಾಡಿದ. ತನ್ನವರ ಸಂಖ್ಯೆಯನ್ನು ನೂರು ಪಟ್ಟು ಹೆಚ್ಚಿಸಿಕೊಂಡು ಐನೂರಕ್ಕೂ ಜಾತಿಯ ಪ್ರಾಣಿಪಕ್ಷಿಗಳ ಸಂಕುಲವನ್ನು ನಾಶಗೊಳಿಸಿ ಬಿಟ್ಟ. ಭೂಮಿ ಶೇಖರಿಸಿಟ್ಟ ಖನಿಜ, ಇಂಧನಗಳ ಬಹುಪಾಲನ್ನೆಲ್ಲ ಹತ್ತು ಸೆಕೆಂಡುಗಳಲ್ಲಿ ನುಂಗಿ ವಾಂತಿ ಮಾಡಿ ಎಲ್ಲ ಯುದ್ಧಗಳನ್ನು ಕೊನೆಗಾಣಿಸುವ ಅಂತಿಮ ಯುದ್ಧಕ್ಕೆ ಸಿದ್ಧನಾಗಿ ಅಣ್ವಸ್ತ್ರಗಳ ರಾಶಿ ಹೇರಿಕೊಂಡು ಅಟ್ಟಹಾಸಗೈದ. ಇಡೀ ಸೂರ್ಯಮಂಡಲದಲ್ಲೇ ಏಕೈಕ ಜೀವವಾಹಿನಿಯಾದ ಈ ಭೂಮಿಗೆ ತಾನೇ ಬ್ರಹ್ಮನೆಂದು ಭ್ರಮಿಸಿ ಎಲ್ಲವನ್ನೂ ಹೊಸಕಿ ಹಾಕುವ ಭಸ್ಮಾಸುರನಾಗಿ ಕೈಯೆತ್ತಿ ನಿಂತ ಮಾನವ. ಹೀಗೆಂದು ಬಣ್ಣಿಸುತ್ತಾರೆ ಪರಿಸರ ವಿಜ್ಞಾನಿ ನಾಗೇಶ್ ಹೆಗಡೆಯವರು ತಮ್ಮ 'ಇರುವುದೊಂದೇ ಭೂಮಿ' ಎಂಬ ಪುಸ್ತಕದಲ್ಲಿ. ಮಾನವನಿಗೆ ಭಸ್ಮಾಸುರನ ದೈತ್ಯ ಶಕ್ತಿ ಬಂದದು ಅವನು ಕಂಡುಹಿಡಿದ ವಿಜ್ಞಾನ ಮತ್ತು ತಂತ್ರಜ್ಞಾನದಿಂದಾಗಿ. ಈಗಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಜ್ಞಾನ ಸಾಲದೆಂಬಂತೆ ಇನ್ನೂ ಹೆಚ್ಚಿನ ವಿಜ್ಞಾನ ಮತ್ತು ತಂತ್ರಜ್ಞಾನದ ಶೋಧನೆಗಾಗಿ ಮಾನವ ಪ್ರಯತ್ನ ಮಾಡುತ್ತಲೇ ಇದ್ದಾನೆ. ಇಂಥ ಪ್ರಯತ್ನಕ್ಕೆ ಕೊನೆ ಮೊದಲಿಲ್ಲವೇನೊ ಎಂದೆನಿಸುತ್ತದೆ. ಇಸ್ರೋದ ವಿಜ್ಞಾನಿಗಳು ಒಂದೆಡೆ ಹೀಗೆ ಹೇಳುತ್ತಾರೆ:– "ಯಾವ ಪ್ರಯೋಜನಕ್ಕಾಗಿ ಹಕ್ಕಿಗಳು ಉಲಿಯುತ್ತವೆ ಎಂದು ನಾವು ಪ್ರಶ್ನಿಸುವುದಿಲ್ಲ. ಏಕೆಂದರೆ ಹಾಡುವುದು ಅವುಗಳ ಧರ್ಮ. ಇದೇ ರೀತಿ ಮನುಷ್ಯನ ಮನಸ್ಸು ಯಾಕೆ ವಿಶ್ವರಹಸ್ಯಗಳ ಆಳವನ್ನು ಶೋಧಿಸುವ ಶ್ರಮವಹಿಸುತ್ತದೆ ಎಂದು ಪ್ರಶ್ನಿಸಲಾಗದು. ಪ್ರಕೃತಿಯಲ್ಲಿನ ವೈಚಿತ್ರ್ಯಗಳು ಮತ್ತು ಅಗಾಧ ವಿಶ್ವದ ಗರ್ಭದಲ್ಲಿ ಹುದುಗಿರುವ ಜ್ಞಾನ ಭಂಡಾರಗಳು ಮಾನವನ ಚಿಂತನೆಗೆ ನಿರಂತರವಾಗಿ ಪೋಷಣೆ ನೀಡುತ್ತಿವೆ. ಈ ವೈಚಿತ್ರ್ಯಗಳ ಅಧ್ಯಯನ ಬಹಳ ಕ್ಲಿಷ್ಟ ಮತ್ತು ಮನುಕುಲಕ್ಕೆ ದೊಡ್ಡ ಸವಾಲು.

ಮೇಲ್ಕಾಣಿಸಿದ ಮಾತುಗಳು ಶೋಧನಾ ಮನೋಭಾವದ ಮಾನವನಿಗೆ ಅನ್ವಯಿಸುತ್ತದೆಯಾದರೂ ಬ್ರಹ್ಮಾಂಡಲ್ಲಿ ಮತ್ತು ಜೀವಿಗಳ ಅಸ್ತಿತ್ವದ ಬಗ್ಗೆ ಅಧ್ಯಯನ ಮಾಡುತ್ತಾ ಹೋಗುವುದರಲ್ಲಿ ಏನು ಅರ್ಥವಿದೆ ಎಂಬುದು ಅರ್ಥವಾಗುತ್ತಿಲ್ಲ. ಏಕೆಂದರೆ ನಾಸಾದ ಕೆಪ್ಲರ್ ಅಂತರಿಕ್ಷ ನೌಕೆ ಕಳುಹಿಸಿದ ಮಾಹಿತಿಯನ್ನು ವಿಶ್ಲೇಷಿಸಲಾಗಿ ತಿಳಿದು ಬಂದ ಸಂಗತಿಯೇನೆಂದರೆ ಆಕಾಶಗಂಗೆಯಲ್ಲಿ ನಮ್ಮ ಭೂಮಿ ಸದೃಶವಾದ ನಲವತ್ತು ಬಿಲಿಯನ್ ವಾಸಯೋಗ್ಯವಾದ ಗ್ರಹಗಳಿವೆ. ಆಕಾಶದ ಒಂದು ಭಾಗದಲ್ಲಿ ಆಕಾಶಗಂಗೆ ಇದೆ, ಇನ್ನೊಂದು ಭಾಗ ಖಾಲಿಯಿದೆ. ಕೋಟ್ಯಾಂತರ ಗೋಲಗಳ ನಡುವೆ ಒಂದು ಸೂರ್ಯ. ಅಗಾಧವಾದ ಗೋಲಗಳ ಮಧ್ಯೆ ಮನುಷ್ಯ ಒಂದು ಹುಲ್ಲುಕಡ್ಡಿಯೂ ಅಲ್ಲ. ಅವನ ಸುತ್ತಲೂ ಭೂಮಿ

ಸುತ್ತುತ್ತಿದೆ. ಆ ಭೂಮಿಯ ಮೇಲೆ ಅಸಂಖ್ಯ ಚತುರ್ವಿಧ ಪ್ರಾಣಿಗಳಿವೆ. ಸುಮಾರು ೨೦ ರಿಂದ ೨೫ ಲಕ್ಷ ಪ್ರಕಾರದ ಜೀವಿಗಳಿವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ನಮ್ಮ ಪುರಾಣಗಳು ೮೪ ಲಕ್ಷ ಯೋನಿಗಳಿವೆ ಎಂದು ಹೇಳಿದೆ. ಎಲ್ಲ ಕೋಟಿ, ಲಕ್ಷಗಳ ಲೆಕ್ಕದಲ್ಲೇ, ಸಾವಿರಗಳ ಭಾಷೆಯೇ ಇಲ್ಲ. ಇಷ್ಟು ದೊಡ್ಡ ವಿಶ್ವದಲ್ಲಿ ವ್ಯಕ್ತಿಯದು ಏನೇನೂ ಲೆಕ್ಕವಿಲ್ಲ ಎಂದೆನ್ನುತ್ತಾರೆ, ವಿನೋಬಾ.

ಈ ಎಲ್ಲ ಗ್ರಹಗಳನ್ನು ಸಂಶೋಧನೆಯ ಗುರಿಯನ್ನಾಗಿಟ್ಟುಕೊಳ್ಳುವುದಾದರೆ ಅದೊಂದು ಅನಂತಕಾಲದ ಮತ್ತು ಅಂತ್ಯವಿಲ್ಲದ ವೈಜ್ಞಾನಿಕ ಕಸರತ್ತಾಗುತ್ತದೆಯೇ ವಿನಃ ಸಧ್ಯ ಭೂಮಿಯ ಮೇಲಿರುವ ಮಾನವ ಕುಲಕ್ಕೆ ಆಗಬಹುದಾದ ಲಾಭಾಂಶಗಳನ್ನು ಬಿಟ್ಟರೆ ಇನ್ನು ಹೆಚ್ಚು ಭಾಗ ಕೇವಲ ಮಾನವನ ಬುದ್ಧಿಶಕ್ತಿಯ ಪ್ರಶಂಸೆಗೆ ಮಾತ್ರ ಸೀಮಿತವಾಗುತ್ತದೆ. ಏಕೆಂದರೆ ವೈಜ್ಞಾನಿಕ ನೀತಿ ನಿರಪೇಕ್ಷವಾದದ್ದು. ಅದು ನೈತಿಕವೂ ಅಲ್ಲ, ಅನೈತಿಕವೂ ಅಲ್ಲ.

ಮಂಗಳಯಾನದಂಥ ಬಾಹ್ಯಾಕಾಶ ನೌಕೆಗಳು ಮಾಡುವ ಮತ್ತು ನೌಕೆಗಳ ನಿರ್ಮಾಣ ಕಾರ್ಯದಲ್ಲಿ ಉತ್ಪನ್ನವಾಗುವ ವಿವಿಧ ಪ್ರಕಾರದ ವೈಜ್ಞಾನಿಕ ಶೋಧಗಳು ಮಾನವನಿಗೆ ಉಪಯೋಗವಾಗಬಹುದಾದರೂ ಈ ವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಉತ್ಪನ್ನವಾಗಿರುವ ವಿವಿಧ ಬಗೆಯ ಚಿಕ್ಕ ಚಿಕ್ಕ ಶಸ್ತ್ರಾಸ್ತ್ರಗಳಿಂದ ವರ್ತಮಾನದ ಮಾನವ ಕುಲ ಕಷ್ಟ ನಷ್ಟಗಳನ್ನು ಅನುಭವಿಸುತ್ತಿದೆ. ಎ.ಕೆ.೪೭, ಟೈಂಬಾಂಬ್, ಬಂದೂಕು, ನೆಲಬಾಂಬ್, ಪಿಸ್ತೂಲು, ಲಾಂಗ್‌ಗಳು, ಲಾಠಿ ಮುಂತಾದ ಭಯಾನಕ ಶಸ್ತ್ರಗಳು ನಿರ್ಮಾಣವಾಗಿವೆಯಲ್ಲ ಅದಕ್ಕೆ ಯಾರು ಹೊಣೆ? ಅಂತೆಯೇ ಅಣುಬಾಂಬ್, ಹೈಡ್ರೋಜನ್ ಬಾಂಬ್‌ಗಳಂಥ ಭಯಾನಕ ಅಸ್ತ್ರಗಳ ನಿರ್ಮಾಣಕ್ಕೆ ನೂರು ಕಿಲೋಮೀಟರ್‌ನಿಂದ ಸಾವಿರಾರು ಕಿಲೋಮೀಟರ್‌ವರೆಗೆ ಹಾರಿಸಲ್ಪಡುವ ಕ್ಷಿಪಣಿಗಳಿಗೆ ಯಾರು ಹೊಣೆ? ದೇಶ ದೇಶಗಳ ಮಧ್ಯ ಭಯಾನಕ ಶಸ್ತ್ರಾಸ್ತ್ರಗಳ ತಯಾರಿಕೆಯ ಪೈಪೋಟಿಗೆ ಯಾರು ಹೊಣೆ? ಇಲ್ಲಿ ವಿನೋಬಾರವರ ಈ ಮಾತನ್ನು ಗಮನಿಸಬಹುದಾಗಿದೆ. ಮತ್ತು ಆ ಮಾತನ್ನು ಇಂದಿನ ವೈಜ್ಞಾನಿಕ ಶೋಧನೆಗಳಿಗೆ ಅನ್ವಯಿಸಬಹುದಾಗಿದೆ. ಅವರು ಹೇಳುವುದೇನೆಂದರೆ, "ಇಂದು ಹಣಕ್ಕಾಗಿ ವಿಜ್ಞಾನದ ಮಾರಾಟವಾಗುತ್ತಿದೆ. ದೊಡ್ಡ ದೊಡ್ಡ ವಿಜ್ಞಾನಿಗಳು ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ತಯಾರಿಸುವುದಕ್ಕೆ ಮಹತ್ವ ಕೊಡುತ್ತಾರೆ. ಅವರು ಎಷ್ಟು ಬುದ್ಧಿವಂತರಾದರೂ ಹಣ ಕೊಟ್ಟು ಅವರನ್ನು ಕೊಳ್ಳಬಹುದು. ಇವರಿಗೆ ಹಣ ಸಿಕ್ಕರೆ ಸಾಕು ಯವ ಬಗೆಯ ಸಂಶೋಧನೆಗಳನ್ನು ಮಾಡಲು ಆಜ್ಞೆಯಾಗುವುದೋ ಆ ಬಗೆಯ ಸಂಶೋಧನೆ ಮಾಡಿ ಕೊಡುವುರು. ಇನ್ನು ಅದರಿಂದ ಜಗತ್ತಿಗೆ ಕಲ್ಯಾಣವಾದರೂ ಸರಿಯೇ, ವಿನಾಶವಾದರೂ ಸರಿಯೇ. ವಿಜ್ಞಾನಿಗಳು ತಮ್ಮನ್ನು ಯಾರ ಹಣಕ್ಕೂ ಮಾರಿಕೊಳ್ಳುವುದಿಲ್ಲ, ವಿಧ್ವಂಸಕ ಶಸ್ತ್ರಾಸ್ತ್ರಗಳ ಶೋಧನೆಯಲ್ಲಿ ಸಹಕರಿಸುವುದಿಲ್ಲ, ಸಂಹಾರ ಕಾರ್ಯದ ಯಾವುದೇ ಶೋಧನೆಯಲ್ಲಿ ತೊಡಗುವುದಿಲ್ಲವೆಂದು ಪಣತೊಟ್ಟರೆ ಜಗತ್ತು

ಉಳಿಯುವುದು. ಆದರೆ ಇಡೀ ಸಮಾಜ ಇಂಥ ವಿಚಾರವನ್ನು ಎತ್ತಿ ಹಿಡಿಯುವ ವರೆಗೂ ವಿಜ್ಞಾನಿಗಳಿಗೆ ಬುದ್ಧಿಬರದು. ಸಂಹಾರಕ್ಕಾಗಿ ಸಂಶೋಧನೆಯ ವೃತ್ತಿಯನ್ನು ಜನ ತಿರಸ್ಕಾರದಿಂದ ನೋಡಲು ಆರಂಭಿಸಿದರೆ ಆಗ ಅದು ನಿಂತು ಹೋದೀತು".

ಭೂಮಿಯ ಮೇಲಿರುವ ಪ್ರಾಕೃತಿಕ ಸಂಪನ್ಮೂಲಗಳನ್ನು ಉಪಯೋಗಿಸಿ ಮನುಷ್ಯನ ಮಾನಸಿಕ ಮತ್ತು ದೈಹಿಕ, ಆತ್ಮಿಕ ವಿಕಾಸಕ್ಕಾಗಿ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಸಂಶೋಧನೆ ಮಾಡಬೇಕಾದ ಕಾಲ ಇದೀಗ ಬಂದಿದೆ. ವಿಜ್ಞಾನ ಅತಿಯಾಗಿ ಬೆಳೆದಿರುವುದರಿಂದ ಆಗ ಬಹುದಾದ ವ್ಯಾಪಕ ಹಿಂಸೆಯನ್ನು ನಿಲ್ಲಿಸಬೇಕಾದ ಕೆಲಸವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಮಾಡಬೇಕಿದೆ. ಅಹಿಂಸೆಯನ್ನು ಬೆಳೆಸುವುದು ಹೇಗೆ ಎಂಬ ಗುರಿಯನ್ನಿಟ್ಟುಕೊಂಡು ಅವುಗಳ ಸಂಶೋಧನೆ ನಡೆಸಬೇಕಿದೆ. ವಿಜ್ಞಾನ ಮತ್ತು ಅಹಿಂಸೆ ಒಂದುಗೂಡಬೇಕು. ಅವೆರಡು ಜೊತೆಗೂಡಿದರೆ ಧರೆಯ ಮೇಲೆ ಸ್ವರ್ಗ ಇಳಿದು ಬಂದೀತು. ಇದಕ್ಕೆ ಬದಲಾಗಿ ವಿಜ್ಞಾನ ಮತ್ತು ಹಿಂಸೆ ಜೊತೆಗೂಡಿದರೆ ಜಗತ್ತಿನ ವಿನಾಶ ಖಂಡಿತ. ಜಗತ್ತಿನಲ್ಲಿ ಹಿಂಸೆ ಕೂಡದೆಂದಾದರೆ ವಿಜ್ಞಾನವನ್ನು ಮಾನವರು ಬೆಳಸಕೂಡದು. ಭೀಮ-ಜರಾಸಂಧರ ಕಾಳಗದಿಂದ ಜಗತ್ತಿಗೆ ಯಾವ ನಷ್ಟವೂ ಉಂಟಾಗಲಿಲ್ಲ. ಸಾಯಬೇಕಾದವನು ಸತ್ತನಷ್ಟೆ. ಆದರೆ ಈಗ ಹಾಗಲ್ಲ. ಇಂದು ಅಣ್ವಸ್ತ್ರಗಳು ಕೈಯಲ್ಲಿರುವುದರಿಂದ ಇಡೀ ಜಗತ್ತಿನ ಸಂಹಾರವಾಗಬಹುದು. ಆದ್ದರಿಂದ ವಿಜ್ಞಾನ ಮತ್ತು ಅಹಿಂಸೆ ಜೊತೆಗೂಡಬೇಕಾದುದು ಅಗತ್ಯ. ವಿಜ್ಞಾನಕ್ಕೆ ತಪ್ಪು ಮಾರ್ಗದರ್ಶನ ಸಿಕ್ಕರೆ ಅದು ನರಕದ ದಾರಿಯಾಗುವುದು. ಸರಿಯಾದ ಮಾರ್ಗದರ್ಶನ ಸಿಕ್ಕರೆ ಸ್ವರ್ಗಕ್ಕೆ ಕೊಂಡೊಯ್ಯಬಲ್ಲದು. ಆ ಸರಿಯಾದ ಮಾರ್ಗದರ್ಶನ ಆತ್ಮಜ್ಞಾನದಿಂದ ಮಾತ್ರ ಸಿಗಬಲ್ಲದು.

ಇರುವ ಈ ಒಂದೇ ಭೂಮಿ ಉಳಿವಿಗಾಗಿ ಇಂಗ್ಲೆಂಡ್‌ನಲ್ಲಿ ೧೯೮೫ರ ನವೆಂಬರ್‌ನಲ್ಲಿ ಪ್ರಾರಂಭವಾದ 'ಗ್ರೀನ್‌ಪೀಸ್' ಸಂಸ್ಥೆಯೊಂದನ್ನು ಭಾರತದಲ್ಲಿಯೂ ಪರಿಸರ ಪ್ರೇಮಿ ಮತ್ತು ಪರಿಸರ ನಿಷ್ಠರು ಸ್ಥಾಪಿಸಬೇಕು. ತನ್ಮೂಲಕ "ನಿಸರ್ಗದ ತೊಟ್ಟಿಲಲ್ಲಿ ದೇವರು ಮಾನವನನ್ನು ಸೃಷ್ಟಿಸಿದ, ಆದರೆ ಈ ಮಾನವ ತೊಟ್ಟಿಲನ್ನೇ ಚಿಂದಿ ಚಿಂದಿ ಮಾಡಿದ" ಎಂಬ ಸುಂದರಲಾಲ್ ಬಹುಗುಣರ ಈ ವಿಷಾದಯುಕ್ತ ಮಾತು ಸುಳ್ಳಾಗುವಂತೆ ಮಾಡುವ ಕೆಲಸವನ್ನು ಭೂಲೋಕ ಪ್ರಜೆಗಳಾದ ನಾವೆಲ್ಲರೂ ಪ್ರಯತ್ನಮಾಡೋಣ.

(ಗ್ರಂಥಋಣ : ನಾಗೇಶ್ ಹೆಗಡೆಯವರ 'ಇರುವುದೊಂದೇ ಭೂಮಿ' ಮತ್ತು ವಿನೋಬಾರ 'ಆತ್ಮಜ್ಞಾನ ವಿಜ್ಞಾನ'.)

* * *

ಸರ್ವೋದಯದಲ್ಲಿ ಸಾಧ್ಯ ಸಾಧನ ಸಂಬಂಧ

– *ವಿನೋಬಾ*

ಅನೇಕ ಸತ್ಪುರುಷರು ಒಳ್ಳೆಯ ದಾರಿಯಲ್ಲಿ ನಡೆಯುವ ಶಿಕ್ಷಣ ಕೊಟ್ಟಿದ್ದಾರೆ. ಆದರೆ ಒಳ್ಳೆಯದರಿಂದ ಒಳ್ಳೆಯದೇ ಆಗುತ್ತದೆ ಎಂಬ ಪೂರ್ಣ ವಿಶ್ವಾಸ ಮನುಷ್ಯನಿಗೆ ಬಂದಿಲ್ಲ. ಅವನು ಇನ್ನೂ ಪ್ರಯೋಗಮಾಡುತ್ತಲೇ ಇದ್ದಾನೆ. ಕೆಟ್ಟದ್ದನ್ನು ಬಿತ್ತುವುದರಿಂದ ಒಳ್ಳೆಯದು ಚಿಗುರುತ್ತದೆಯೇ ಎಂಬುದನ್ನು ಕಾದು ನೋಡುತ್ತಿದ್ದಾನೆ. ಬೇವು ಬಿತ್ತಿದರೆ ಮಾವು ಮತ್ತು ಮಾವು ಬಿತ್ತಿದರೆ ಬೇವು ಹುಟ್ಟುವುದಿಲ್ಲ ಎಂಬ ಬಗ್ಗೆ ಅವನ ಮನಸ್ಸಿನಲ್ಲಿ ಸಂಶಯ ಬರುವುದೇ ಇಲ್ಲ. ಬಹುಷಃ ಹಿಂದಿನ ಕಾಲದಲ್ಲಿಯೂ ಈ ಸಂಶಯ ಇದ್ದಿರಬಹುದು. ಆದರೆ ಇಂದು ಭೌತಿಕ ದೃಷ್ಟಿಯಲ್ಲಿ ಬೀಜವೆಂಥದೊ ಅಂಥ ಫಲವೆಂಬ ನ್ಯಾಯ ಅವನಿಗೆ ಒಪ್ಪಿಗೆಯಾಗಿದೆ. ಆದರೂ ಕೂಡ ನೈತಿಕ ದೃಷ್ಟಿಯಲ್ಲಿ ಈ ವರೆಗೂ ಅನ್ಯಾಯದ ವಿಷಯದಲ್ಲಿ ಸಂಶಯವಿದೆ. ಸಾಧಾರಣವಾಗಿ ಒಳ್ಳೆಯದರಿಂದ ಒಳ್ಳೆಯದಾಗುತ್ತದೆ ಎಂಬುದನ್ನು ಅರಿತಿದ್ದಾನೆ. ಆದರೆ ಸಾಮೂಹಿಕ ಒಳ್ಳೆಯತನ ಲಾಭದಾಯಕವಾಗಬಲ್ಲದು ಎಂಬ ನಿರ್ಣಯ ಅವನ ಬಳಿ ಇಲ್ಲ.

ಕೆಲವು ಜನರಿಗೆ ಸಾರ್ವಜನಿಕ ಹಿತ ಒಪ್ಪಿಗೆ ಇದೆ. ಆದರೆ ಸ್ವಂತ ಜೀವನದಲ್ಲಿ ಶುದ್ಧ ನೀತಿ ಅನುಸರಿಸಬೇಕು, ಅದರಿಂದ ಮೋಕ್ಷ ಪಡೆಯಬಹುದಾಗಿದೆ ಎಂದು ಅವರಿಗೆ ಅನಿಸುತ್ತದೆ. ಆದರೆ ಸಾಮಾಜಿಕ ಜೀವನದಲ್ಲಿ ಒಳ್ಳೆಯತನದ ಜೊತೆಗೆ ಕೆಟ್ಟತನದ ಸ್ವಲ್ಪ ಮಿಶ್ರಣಮಾಡದಿದ್ದರೆ ಕೆಲಸ ನಡೆಯುವುದಿಲ್ಲ ಹೀಗೆಂಬುದು ಅವರ ನಂಬಿಕೆ. ಗಾಂಧೀಜಿ ಇದನ್ನು ಎಂದೂ ಒಪ್ಪಲಿಲ್ಲ. ಸತ್ಯ, ಅಹಿಂಸೆ ಇತ್ಯಾದಿ ಮೂಲಭೂತ ಸಿದ್ಧಾಂತಗಳ ಅನುಷ್ಠಾನವನ್ನು ಸಾಮಾಜಿಕವಾಗಿ ನಮ್ಮಿಂದ ಮಾಡಿಸಿದರು. ಅದರ ಫಲಸ್ವರೂಪವಾಗಿ ಒಂದು ಪ್ರಕಾರದ ಸ್ವರಾಜ್ಯ ಕೂಡ ಪಡೆದಿದ್ದೇವೆ. ಸತ್ಯ ಮತ್ತು ಅಸತ್ಯದ ಮಿಶ್ರಣದ ಮೇಲೆ ಜಗತ್ತು ನಿಂತಿದೆ ಎಂಬ ವಿಚಾರವಿದೆ. ಅದಕ್ಕೆ ಆ ಸಿದ್ಧಾಂತಗಳು ಜವಾಬ್ದಾರಿಯಲ್ಲ. ಯಾವ ಯೋಗ್ಯತೆಯಂತೆ ನಮ್ಮ ಅನುಷ್ಠಾನವಿತ್ತೋ ಆ ಯೋಗ್ಯತೆಗೆ ಅನುಸಾರವಾಗಿ ನಮ್ಮ ಈ ಸ್ವರಾಜ್ಯವಿದೆ.

ಒಂದು ತ್ರಿಕೋನದಲ್ಲಿ ಯಾವ ಸಿದ್ಧಾಂತ ಸಿದ್ಧವಾಗಿರುತ್ತದೋ ಅದು ಎಲ್ಲಾ ತ್ರಿಕೋನಗಳಿಗೂ ಅನ್ವಯಿಸುತ್ತದೆ. ವ್ಯಕ್ತಿಗಾಗಿ ಒಂದು ವೇಳೆ ಶುದ್ಧ ನೀತಿ ಕಲ್ಯಾಣಕಾರಿ ಇರುವುದಾದರೆ ಸಮಾಜಕ್ಕೂ ಕೂಡ ಅದೇ ರೀತಿ ಕಲ್ಯಾಣಕಾರಿಯಾಗಬೇಕು.

ಕೆಲವು ಜನರ ಅನಿಸಿಕೆಯೇನೆಂದರೆ ಸತ್ಯದ ಒರೆಗಲ್ಲಿಗೆ ತಮ್ಮ ಉದ್ದೇಶ್ಯಗಳನ್ನು ಒರೆಹಚ್ಚಿದರೆ ಸಾಕು. ಆಮೇಲೆ ಸಾಧನ ಎಂಥದೇ ಆಗಿರಲಿ ನಡೆಯುವುದು. ಆದರೆ ಗಾಂಧೀಜಿ ಈ ವಿಚಾರದ ವಿರೋಧ ಯಾವಾಗಲೂ ಮಾಡಿದ್ದಾರೆ. ಸ್ವರಾಜ್ಯ ಸತ್ಯಮಯ ಸಾಧನಗಳಿಂದಲೇ ದೊರೆಯಲು ಸಾಧ್ಯವೆಂದು ಅವರು ಹೇಳುತ್ತಿದ್ದರು. ಶುದ್ಧ ಸಾಧನಗಳಿಂದ ಪ್ರಾಪ್ತವಾದ ಸ್ವರಾಜ್ಯವೇ ನಿಜ ಸ್ವರಾಜ್ಯವಾಗುತ್ತದೆ. ಸಾಧಕನು ಸಾಧ್ಯಕ್ಕಿಂತ ಸಾಧನದ ಬಗ್ಗೆಯೇ ಹೆಚ್ಚು ಯೋಚನೆ ಮಾಡಬೇಕು. ಎಲ್ಲಿ ಸಾಧನದ ಪರಕಾಷ್ಠತೆ ಇರುತ್ತದೊ ಅಲ್ಲಿಯೇ ಸಾಧ್ಯದ ದರ್ಶನವಾಗುತ್ತದೆ. ಆದ್ದರಿಂದ ಸಾಧ್ಯ ಮತ್ತು ಸಾಧನ ಭೇದ ಕೂಡ ಕಾಲ್ಪನಿಕ ಸಾಧನಗಳಿಂದ ಸಾಧ್ಯ ಈಡೇರುತ್ತದೆಂಬುದಷ್ಟೇ ಅಲ್ಲ ಅದರ ರೂಪ ಕೂಡ ಸಾಧನಗಳ ಮೇಲೆ ನಿರ್ಭರವಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರಿಗೂ ತನ್ನ ಉದ್ದೇಶ ಒಳ್ಳೆಯದೇ ಅನಿಸುತ್ತದೆ. ಆದ್ದರಿಂದ ಒಳ್ಳೆಯ ಉದ್ದೇಶ್ಯದ ಬಗ್ಗೆ ವಿಶೇಷ ಬೆಲೆ ಕೊಡುವುದಿಲ್ಲ. ಸಾಧ್ಯ ಮತ್ತು ಸಾಧನಗಳ ಮಧ್ಯೆ ವಿಸಂಗತಿ ಇರಕೂಡದು ಈ ವಿಚಾರ ಹೊಸದೇನಲ್ಲ. ಆದರೆ ಯಾವ ದೊಡ್ಡ ಪ್ರಮಾಣದಲ್ಲಿ ಅದರ ಪ್ರಯೋಗವನ್ನು ಗಾಂಧೀಜಿ ಹಿಂದೂಸ್ಥಾನದಲ್ಲಿ ಮಾಡಿದರೋ ಅದು ಉದಾಹರಣಾತೀತವಾಗಿದೆ.

ಇನ್ನು ಕೆಲವು ಜನ ಸತ್ಯವಂತಿಕೆ ಮತ್ತು ಒಳ್ಳೆಯತನದ ಆಗ್ರಹ ಮಾಡುವುದೇನೋ ಒಳ್ಳೆಯದು ಆದರೆ ಯಾವುದೇ ಪರಿಸ್ಥಿತಿಯಲ್ಲಿ ಕ್ರಿಯಾಶೀಲನಾಗಿರುವ ಮಹತ್ವ ಅಧಿಕ. ಒಳ್ಳೆಯತನ ನಡೆಸುವುದರ ಪ್ರಯತ್ನದಲ್ಲಿ ಕ್ರಿಯಾಶೀಲತೆಯಲ್ಲಿ ಅಡ್ಡಿಯುಂಟಾದರೆ ಒಳ್ಳೆಯತನದರ ಆಗ್ರಹ ಸಡಿಲುಮಾಡಿ ಆ ಆದರ್ಶದಿಂದ ಸ್ವಲ್ಪ ಕೆಳಗಿಳಿದು ಕ್ರಿಯಾಶೀಲರಾಗಿರಬೇಕು. ಯಾವುದೇ ಕಾರಣಕ್ಕೂ ನಿಷ್ಕ್ರಿಯರಾಗಕೂಡದು.

ನನ್ನ ಪ್ರಕಾರ ಇದೂ ಕೂಡ ಒಂದು ಮೋಹ. ಯಾವಾಗ ಜೈಲಿನಲ್ಲಿ ಹೆಚ್ಚು ದಿನ ಇರಬೇಕಾಗುತ್ತಿತ್ತೊ ಅದಕ್ಕೆ 'ಜೈಲಿನಲ್ಲಿ ಕೊಳೆಯುವುದು' ಎಂಬ ಹೆಸರನ್ನು ಕೊಡಲಾಗಿತ್ತು. ಶುದ್ಧ ಪುರುಷನ ನಿಷ್ಕ್ರಿಯತೆಯಲ್ಲೂ ಕೂಡ ಮಹಾನ್ ಶಕ್ತಿ ಅಡಗಿರುತ್ತದೆ ಎಂಬುದಾಗಿ ಗಾಂಧೀಜಿ ತಿಳಿ ಹೇಳುತ್ತಿದ್ದರು. ಗೀತಾ ತನ್ನ ಅನುಪಮ ಭಾಷೆಯಲ್ಲಿ ಇದನ್ನೆ 'ಅಕರ್ಮದಲ್ಲಿ ಕರ್ಮ' ಎಂದು ಹೇಳಿದೆ. ನಿಃಸ್ಸಂಶಯವಾಗಿಯೂ ಕ್ರಿಯಾಶೀಲತೆ ಮಹಾನ್, ಆದರೆ ಸತ್ಯವಂತಿಕೆ ಮತ್ತು ಒಳ್ಳೆಯತನ ಅದಕ್ಕೂ ಹೆಚ್ಚು.ಮಹಾನ್ ವಿಶೇಷ ಪರಿಸ್ಥಿತಿಯಲ್ಲಿ ನಿಷ್ಕ್ರಿಯವಾಗಿಕೂಡ ಇರಬಹುದಾಗಿದೆ. ಆದರೆ ಸತ್ಯವಂತಿಕೆಯನ್ನು ಮಾತ್ರ ಎಂದಿಗೂ ಬಿಡಲು ಸಾಧ್ಯವಿಲ್ಲ.

ಯಾರು ಕೆಲವರು ತಮ್ಮನ್ನು ವ್ಯವಹಾರವಾದಿಯೆಂದು ಕರೆದುಕೊಳ್ಳುತ್ತಾರೋ ಮತ್ತು ಸತ್ಯವಂತಿಕೆಯನ್ನು ಒಪ್ಪುತ್ತಾರೊ ಅವರು ಏಕಪಕ್ಷೀಯ ಸತ್ಯವಂತಿಕೆಯಲ್ಲಿ ಅಪಾಯ ಕಾಣುತ್ತಾರೆ. ಎದುರಿನವನು ಆ

ಸತ್ಯದ ಪ್ರಯೋಗ ಮಾಡುತ್ತಾನೆ. ನಾನೊಬ್ಬನೇ ಸತ್ಯ ಮತ್ತು ಅಹಿಂಸೆಯ ಮೇಲೆ ಬಿಗಿಯಾಗಿ ನಿಂತುಕೊಂಡರೆ ನನ್ನ ಹಾನಿಯಾಗುವುದೆಂದು ಹೇಳುತ್ತಾರೆ. ಈ ರೀತಿ ಹೇಳುವ ಜನ ವಾಸ್ತವದಲ್ಲಿ ಸತ್ಯವಂತಿಕೆಯ ಮೌಲ್ಯವನ್ನು ಅರಿಯರು. ಅರಿತಿದ್ದರೆ ಈ ಪ್ರಕಾರವಾಗಿ ವಾದ ಮಾಡುವುದಿಲ್ಲ. ನನ್ನ ಪ್ರತಿಪಕ್ಷದವನು ಹಸಿದವನಾಗಿದ್ದರೆ ನಾನು ಕೂಡ ಏಕೆ ತಿನ್ನಬೇಕು ಎಂಬಂಥ ವಾದ ಅವರು ಮಾಡುತ್ತಿರಲಿಲ್ಲ. ಯಾರು ತಿನ್ನುತ್ತಾರೆ ಅವರು ಶಕ್ತಿ ಪಡೆಯುತ್ತಾರೆ ಎಂಬುದು ಗೊತ್ತಿದೆ. ಪ್ರತಿಪಕ್ಷಿಯೊಂದಿಗೆ ಯಾವ ಸಂಬಂಧವೂ ಇಲ್ಲ. ಏಕಪಕ್ಷೀಯವಾಗಿ ತಿನ್ನುವುದಕ್ಕೆ ಒಪ್ಪಿಗೆ ಇದೆ. ಆದರೆ ಏಕಪಕ್ಷೀಯ ಸತ್ಯವಂತಿಕೆ ಬಗ್ಗೆ ಒಪ್ಪಿಗೆ ಇಲ್ಲ. ಇದರ ಅರ್ಥವೇನು? ಎದುರಿಗಿನವನು ಯಾವ ರೀತಿಯಾಗುತ್ತಾನೊ ಆ ರೀತಿಯಾಗುತ್ತೇನೆ. ಇದರ ಅರ್ಥವಿಷ್ಟೆ. ಎದುರಿಗಿನವನು ಯಾವ ರೀತಿ ನನ್ನನ್ನು ಕುಣಿಸುವನೊ ಆ ರೀತಿ ಕುಣಿಯುವೆನು. ಪ್ರಾರಂಭಿಸುವ ಶಕ್ತಿಯನ್ನು ನಾನು ಅವನ ಕೈಗೆ ಒಪ್ಪಿಸಿದೆ. ಇದು ಪುರುಷಾರ್ಥಹೀನ ವಿಚಾರ ಮತ್ತು ಅದರಿಂದ ಒಂದು ವಿಷಚಕ್ರ ಶುರುವಾಗುತ್ತದೆ. ದುರ್ಜನರ ಒಂದು ಕ್ರಿಯಾ ಪದ್ಧತಿ ಇದೆ. ಅದನ್ನು ಮುರಿಯಬೇಕಾದರೆ ಧೈರ್ಯ ಮಾಡಬೇಕಾಗುವುದು. ನಿಷ್ಠಾ ಪೂರ್ವಕವಾಗಿ ಪರಿಣಾಮದ ಲೆಕ್ಕಾಚಾರ ಮಾಡದೆ ಪ್ರೇಮ ಮಾಡಬೇಕು. ಉದಾರತೆ ತೋರಿಸಬೇಕು. ಸತ್ಯ, ಪ್ರೇಮ ಮತ್ತು ಸಜ್ಜನತೆ ಭಾವ ರೂಪ ವಸ್ತುಗಳು ಅಸತ್ಯಾದಿ ಅಭಾವ ರೂಪದ್ದಾಗಿವೆ. ಪ್ರಕಾಶ ಮತ್ತು ಅಂಧಕಾರದ ಜಗಳವಿದು. ಇದರಲ್ಲಿ ಪ್ರಕಾಶಕ್ಕೆ ಭಯವೆಂಥದ್ದು. ಇದು ನಾನು ತಿಳಿದಂತೆ, ಸತ್ಯಾಗ್ರಹದ ವಿಚಾರ ಸರಣಿ. ಇದರಲ್ಲಿಯೇ ಎಲ್ಲರ ಒಳ್ಳೆಯದಿದೆ. ಆದ್ದರಿಂದ ಇದನ್ನು ಸರ್ವೋದಯ ವಿಚಾರಸರಣಿಯೆಂಥಲೂ ಹೇಳುತ್ತಾರೆ.

ಸರ್ವೋದಯ ಸಮಾಜದ ಸ್ಥಾಪನೆ ಮಾಡುವುದಾದರೆ ಏನು ಮಾಡಬೇಕು? ನನ್ನಲ್ಲಿ ಒಂದು ವೇಳೆ ದ್ವೇಷವಿದ್ದರೆ, ಮತ್ಸರವಿದ್ದರೆ ಅವುಗಳನ್ನು ದೂರಮಾಡಿಬಿಡಬೇಕು. ಯಾರ ಬಗ್ಗೆ ಮತ್ಸರವಿದೆಯೋ ಅವನ ಬಳಿ ಹೋಗಿ ಸ್ನೇಹ ಮಾಡಿಕೊಳ್ಳಬೇಕು. ಈ ರೀತಿ ಸರ್ವೋದಯ ಸಮಾಜದ ಕೆಲಸ ವ್ಯಕ್ತಿಗತವಾಗಿ ಪ್ರಾರಂಭವಾಗುತ್ತದೆ. ನಂತರ ನಿಧಾನ ನಿಧಾನವಾಗಿ ನಾಲ್ಕೈದು ಮಿತ್ರರು ತಯಾರಾಗುತ್ತಾರೆ. ನಿಧಾನವಾಗಿ ಹಳ್ಳಿ ಸಿದ್ಧವಾಗುತ್ತದೆ. ನಂತರ ನಾಲ್ಕೈದು ಹಳ್ಳಿ ಸೇರಿ ಕೆಲಸಮಾಡಬಹುದು. ನಿಧಾನವಾಗಿ ಇಡೀ ವಿಶ್ವ ಮತ್ತು ಇಡೀ ಬ್ರಹ್ಮಾಂಡ ಕೂಡ ಸಂಘಟಿತವಾಗಬಹುದಾಗಿದೆ. ಆಗ ಈ ಸಂಘಟನೆ ಕೆಳಗಿನಿಂದ, ಒಳಗಿನಿಂದ ಮತ್ತು ಸ್ವಾಭಾವಿಕ ರೂಪದಲ್ಲಿ ಆಯಿತೆಂದು ಭಾವಿಸಲಾಗುವುದು. ನಾವು ಈ ರೀತಿಯ ಸ್ಥಿತಿಯನ್ನು ಕಾಯಂಗೊಳಿಸಬೇಕು. ಅದರಿಂದಾಗಿ ಸಮಾಜದ ಅಂತಃಶುದ್ಧಿಯಾಗುತ್ತದೆ. ಅಲ್ಲಲ್ಲಿ ರತ್ನಗಳು ಬಿದ್ದಿವೆ. ಅವನ್ನು ಒಂದು ಸೂತ್ರದಲ್ಲಿ ಕಟ್ಟಬೇಕು. ಮಾಲೆಗಾಗಿ ರತ್ನವಿರಬೇಕಾದುದು ಅಗತ್ಯ, ಸೂತ್ರವಲ್ಲ. ಆದ್ದರಿಂದ ಅಲ್ಲಲ್ಲಿ ಸರ್ವೋದಯ ಸಮಾಜದ ನಿರ್ಮಾಣಕ್ಕಾಗಿ ಜನ ಸಿದ್ಧವಾಗಬೇಕೆಂಬ ಚಿಂತೆ ಇರಬೇಕು.

ಸರ್ವೋದಯಕ್ಕಾಗಿ ನಮ್ಮೆಲ್ಲರಲ್ಲಿ ಸತ್ಯ, ಅಹಿಂಸೆಯ ಬಗ್ಗೆ ನಿಷ್ಠೆ ಬೆಳೆಯಬೇಕು. ನಮ್ಮ ಸ್ವಂತ ಮತ್ತು ಸಾಮಾಜಿಕ ಜೀವನದಲ್ಲಿ ಹಾಗೂ ವ್ಯಾಪಾರ-ಉದ್ಯೋಗ ಇತ್ಯಾದಿಗಳಲ್ಲಿ ಎಂದೂ ಅಸತ್ಯದ ಉಪಯೋಗ ಮಾಡಕೂಡದು. ಸಾಧ್ಯವಾದ ಮಟ್ಟಿಗೂ ಹಿಂಸೆಯ ಪ್ರವೇಶ ಇರದಿರಲಿ. ಈ ರೀತಿ ಪ್ರಯತ್ನ ಮಾಡಬೇಕು. ಸಮಾಜದ ಉತ್ಪನ್ನಕ್ಕಾಗಿ ಯಾವೆಲ್ಲ ರಚನಾತ್ಮಕ ಕಾರ್ಯಕ್ರಮಗಳಿವೆಯೋ ಅವುಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಮಾಡಬೇಕು. ವ್ಯಕ್ತಿಗತ ಮಟ್ಟದಲ್ಲಿ ಮಿತ್ರರನ್ನು ಜೊತೆಗೂಡಿಸಿಕೊಂಡು ರಚನಾತ್ಮಕ ಕಾರ್ಯ ಮಾಡಬೇಕು. ಅಗತ್ಯವಿದ್ದಲ್ಲಿ ಸ್ಥಳೀಯ ಸಂಸ್ಥೆ ಮಾಡಬೇಕು. ಇದರ ಹಿಂದೆ ಇರುವ ವಿಶಾಲದೃಷ್ಟಿಯ ಬಗ್ಗೆ ವಿಚಾರ ಮಾಡಬೇಕು ಮತ್ತು ಅದರದೇ ಜಪ ಮಾಡಬೇಕು.

ಪಾರತಂತ್ರ್ಯದ ಭಾರವನ್ನು ಹೋಗಲಾಡಿಸಲು ಒಂದು ಸಮಾನ ಗುರಿಯಿಂದ ಯಾವ ಪ್ರಕಾರ ಎಲ್ಲ ಜನರು ಒಟ್ಟು ಸೇರಿ ಕೆಲಸ ಮಾಡುತ್ತಿದ್ದರೊ ಅದೇ ರೀತಿ ಈಗ ಒಂದು ರಚನಾತ್ಮಕ ಧ್ಯೇಯಕ್ಕಾಗಿ ವಿಶ್ವ-ಮಂಗಳದ ಧ್ಯೇಯಕ್ಕಾಗಿ ನಾವು ಸಿದ್ಧರಾಗಬೇಕಿದೆ. ನನ್ನ ಇಡೀ ಮನನ, ಇಡೀ ಚಿಂತನೆ, ನಮ್ಮ ಆಚರಣೆ, ನಮ್ಮ ಇಡೀ ಸಾಹಿತ್ಯ ಈ ಧ್ಯೇಯದ ಸಿದ್ಧಿಗಾಗಿ ಪ್ರಯತ್ನಿಸಿದರೆ ಆಗ ಇದು ಸಿದ್ಧಿಸುವುದು. ಇದರಲ್ಲಿ ಕೊಂಚವೂ ಸಂಶಯವಿಲ್ಲ. ಏಕೆಂದರೆ ಇಂದು ಇಡೀ ಪ್ರಪಂಚ ಬಹಳ ಸಮೀಪ ಬಂದಿದೆ ಮತ್ತು ಪರಸ್ಪರರ ಮೇಲೆ ಅತೀ ಶೀಘ್ರ ಪರಿಣಾಮವಾಗುವ ಸ್ಥಿತಿ ಇದೆ.

"ಜಗತ್ತಿನಲ್ಲಿ ಹಿಂಸೆಯ ಗಾಳಿ ಬೀಸುತ್ತಿದೆ. ಹಿಂದೂಸ್ಥಾನ ಅದರಿಂದ ಹೇಗೆ ತಪ್ಪಿಸಿಕೊಳ್ಳುತ್ತದೆ?" ಎಂದು ಜನರು ನನ್ನನ್ನು ಕೇಳುತ್ತಾರೆ. ನಾನು ಅವರಿಗೆ ಹೇಳುವುದೇನೆಂದರೆ: "ಹಿಂದೂಸ್ಥಾನದಲ್ಲಿ ನಾವು ಅಹಿಂಸೆಯ ಗಾಳಿ ನಿರ್ಮಾಣ ಮಾಡುವೆವು; ಜಗತ್ತು ಹೇಗೆ ತಪ್ಪಿಸಿಕೊಳ್ಳುವುದು?" ನನ್ನ ಮೇಲೆ ಜಗತ್ತಿನ ಪ್ರಭಾವ ಬೀಳುತ್ತದೆ ಎಂದೆನ್ನುವವರಿಗೆ ನಾನು ಹೇಳುತ್ತೇನೆ, "ಏ ಪೆದ್ದ, ಜಗತ್ತಿನ ಪ್ರಭಾವ ನನ್ನ ಮೇಲೆ ಆಗುವುದಾದರೆ ನನ್ನ ಪ್ರಭಾವ ಕೂಡ ಜಗತ್ತಿನ ಮೇಲಾಗುವುದು ಇಷ್ಟು ಕೂಡ ನಿನಗೆ ತಿಳಿಯುವುದಿಲ್ಲವೇ?" ಈ ಜಗತ್ತಿನಲ್ಲಿ ಸತ್ವಗುಣದಲ್ಲಿ ಯಾವ ಶಕ್ತಿಯಿದೆಯೋ ಅದು ರಜೋಗುಣದಲ್ಲಾಗಲೀ ಅಥವಾ ತಮೋಗುಣದಲ್ಲಾಗಲೀ ಇರಲು ಸಾಧ್ಯವಿಲ್ಲ. ಯಾವುದರ ಶಕ್ತಿ ತತ್ವ ಅಧಿಷ್ಠಿತವಾಗಿದೆಯೋ ಅದರ ಪರಿಣಾಮ ಇಡೀ ಜಗತ್ತಿನ ಮೇಲಾಗುವುದು. ಸತ್ವಗುಣದಲ್ಲಿ ಬುದ್ಧಿಯಿದೆ. ಅದರಿಂದ ಹಿಂದೂಸ್ಥಾನ ಒಂದು ವೇಳೆ ಸತ್ವನಿಷ್ಠೆಯ ಸಂಕಲ್ಪ ಮಾಡಿದರೆ ಅದು ಶಕ್ತಿಶಾಲಿಯಾಗುವುದು. ಇಂದು ಜಗತ್ತು ಹಿಂಸೆಯಿಂದ ಎಷ್ಟೊಂದು ಪೀಡಿತವಾಗಿದೆಯೆಂದರೆ ಸತ್ವಗುಣದ ಅಧಿಷ್ಠಾನದ ಸಂಕಲ್ಪಕ್ಕಾಗಿ ವಿಚಾರವಂತರ ಮನಸ್ಸು ಅನುಕೂಲವಾಗಿದೆ. ಇಂಥ ಸ್ಥಿತಿಯಲ್ಲಿ ಹಿಂದೂಸ್ಥಾನದ ಸಂಕಲ್ಪ ಇಡೀ ಜಗತ್ತಿನಲ್ಲಿ ಹರಡಬಲ್ಲದು.

ಮಿತಿಯಿಲ್ಲದ ಹಣದ ದುರಾಸೆ ತಂದಿದೆ ದುರ್ಗತಿ

- ಸುಧಾಂಶು ಆರ್.ದಾಸ್

ಮಾನವನ ದುರಾಸೆ ಸರ್ವವ್ಯಾಪಿಯಾಗಿದೆ. ಜನರನ್ನು ಮತ್ತು ರಾಜಕಾರಣಿಗಳನ್ನು ಪ್ರಭಾವಿಸುತ್ತಾ ಹೋಗುತ್ತಿದೆ. ದೇವರ ಅತ್ಯಂತ ಸುಂದರ ಸೃಷ್ಟಿ ಭೂಮಿಯನ್ನು ನಾಶಗೊಳಿಸುವಂತ ಸೈತಾನನ ಉದ್ದೇಶವನ್ನು ಪ್ರೋತ್ಸಾಹಿಸುತ್ತಿದೆ.

ಮಾನವ ಇತಿಹಾಸದಲ್ಲಿ ಹೋಲಿಕೆ ಮಾಡಲಾಗದಂಥ ಐವತ್ತು ವರ್ಷಗಳ ಅವಧಿಯಲ್ಲಿ ಮಾನವರು ಸ್ವಾಭಾವಿಕವಾದ ಪರಿಸರ ಸಮತೋಲನವನ್ನು ಅತಿ ಶೀಘ್ರಗತಿಯಲ್ಲಿ ಮತ್ತು ವ್ಯಾಪಕವಾಗಿ ಬದಲಾಯಿಸಿದ್ದಾರೆ. ಇದನ್ನು ಹೇಳಿದವರು ಡಾಕ್ಟರ್ ಲೀ ಲಾಂಗ್ ಹುಕ್. ಇವರು ವಿಶ್ವ ಆರೋಗ್ಯ ಸಂಸ್ಥೆಯ ಮಾಜಿ ನಿರ್ದೇಶಕರು. ನಿಜಾಂಶವೇನೆಂದದರೆ ಪ್ರಾಕೃತಿಕ ಸಂಪತ್ತಿನ ಲೂಟಿ. ಆ ಲೂಟಿಯ ಕಾರಣದಿಂದ ಪ್ರಪಂಚದಾದ್ಯಂತ ಇರುವ ಕೋಟಿ ಕೋಟಿ ಜನರ ಜೀವನ ಘಾಸಿಗೊಂಡಿದೆ. ಕಾಂಗೋ ಎಂಬ ದೇಶದಲ್ಲಿ ಇರುವ ಚಿನ್ನದ ಗಣಿಗಳನ್ನು ಆಕ್ರಮಿಸಿಕೊಳ್ಳಲು ವಿದೇಶಿ ಕಂಪನಿಗಳು ಸ್ಥಳೀಯವಾಗಿ ಸಶಸ್ತ್ರ ದುಷ್ಟರ ಕೂಟಗಳನ್ನು ರಚಿಸಿಕೊಂಡಿವೆ. ಚಿನ್ನದ ಲೂಟಿ ಕಾಂಗೋದ ಆರ್ಥಿಕ ಸ್ಥಿತಿಯನ್ನು ಅಲ್ಲೋಲಕಲ್ಲೋಲ ಗೊಳಿಸಿದೆ. ಅಷ್ಟೇ ಅಲ್ಲದೆ ಆಂತರಿಕ ಕದನಗಳು ಉಂಟಾಗುವಂತೆ ಮಾಡಿದೆ. ಇಂಥ ಕದನಗಳಲ್ಲಿ ಸತ್ತವರ ಸಂಖ್ಯೆ ನಲವತ್ತು ಲಕ್ಷಕ್ಕೂ ಮೀರಿದೆ. ಜಾಗತೀಕರಣ, ವಾಸ್ತವಿಕವಾಗಿ ಸಂಘಟಿತ ಲೂಟಿಗಾರರಿಗೆ ಬಾಗಿಲು ತೆರೆಯುವಂತೆ ಮಾಡಿದೆ. ಅವರು ಬಡ ದೇಶಗಳ ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡಿಕೊಂಡು ಓಡಿಹೋಗುತ್ತಿವೆ. ಅವು ತಾವು ಮಾಡಿದ ಅಪಾರ ಪ್ರಮಾಣದ ಲೂಟಿಗೆ ಬದಲಾಗಿ ಯಕಶ್ಚಿತ್ ಅನ್ನುವಂಥ ದೇಣಿಗೆ ಕೊಡುತ್ತವೆ.

ಸುಮಾರು ಹನ್ನೆರಡು ಶತಮಾನಗಳಿಂದ ವೈವಿಧ್ಯಮಯ ಜೈವಿಕ ಕೃಷಿ ಜಗತ್ತಿನಾದ್ಯಂತ ಜನರ ಆಹಾರ ಭದ್ರತೆ ಪೌಷ್ಠಿಕತೆ, ಆರೋಗ್ಯ ಮತ್ತು ಜೀವನ ವಿಧಾನವನ್ನು ಒದಗಿಸುತ್ತ ಬಂದಿದೆ. ಆದರೆ ಜಗತ್ತು ವಿವಿಧ ಬಗೆಯ ಬೆಳೆಗಳ ಪ್ರಕಾರದಲ್ಲಿ ಶೇ.೯೦ರಷ್ಟು ಭಾಗ ಕಳೆದುಕೊಂಡಿದೆ. ಅಲ್ಲದೆ ಕಳೆದ ಶತಮಾನದಲ್ಲಿ ಆ ವೈಜ್ಞಾನಿಕ ರೀತಿಯಿಂದಾಗಿ ಜಗತ್ತಿನಲ್ಲಿರುವ ಅರ್ಧದಷ್ಟು ಸಾಕು ಪ್ರಾಣಿಗಳು ಕಳೆದು ಹೋಗಿವೆ. ಜಗತ್ತಿನ ಪ್ರಮುಖ ಹದಿನೇಳು ಮೀನು

ಸಂಗ್ರಹ ತಾಣಗಳಲ್ಲಿ ಮೀನಿನ ಸಂಖ್ಯೆ ತುಂಬ ಕಡಿಮೆಯಾಗಿದೆ. ದುರಾಸೆ ಚಿನ್ನದ ಮೊಟ್ಟೆಯಿಡುವ ಕೋಳಿಯನ್ನು ಕೊಲ್ಲುವಂತೆ ಮಾಡಿದೆ.

ಕಳೆದ ಎರಡು ದಶಕಗಳಲ್ಲಿ ಪರಿಸರಕ್ಕೆ ಅಪರಿಮಿತ ಮತ್ತು ಪುನಃ ಸೃಷ್ಟಿಸಲಾಗದಂಥ ಹಾನಿಯುಂಟುಮಾಡಿ ಶ್ರೀಮಂತಿಕೆಯನ್ನು ಬೆಳೆಸಿಕೊಳ್ಳಲಾಗಿದೆ. ಒಂದು ವೈಜ್ಞಾನಿಕ ಅಧ್ಯಯನದ ಪ್ರಕಾರ ಏಷಿಯಾದ ದಕ್ಷಿಣ ಭಾಗದ ಆಗಸದಲ್ಲಿ ಮೂರು ಕಿಲೋಮೀಟರ್ ಆಳವಿರುವಂಥ ದೊಡ್ಡ ಮೋಡವನ್ನು ಕಂಡುಹಿಡಿಯಲಾಗಿದೆ. ಆ ಮೋಡ ಬೂದಿ, ಆಸಿಡ್, ಅರಸೋಲ್ ಮತ್ತು ಇತರ ಅಪಾಯಕಾರಿ ಅಣುಗಳಿಂದ ರಚಿತವಾಗಿದೆ. ಈ ಮೋಡವನ್ನು ಆಸಿಯಾನ್ ಬ್ರೌನ್‌ಎಜ್ ಎಂದು ಕರೆಯಲಾಗಿದೆ. ಈ ಮೋಡ ವ್ಯವಸಾಯವನ್ನು ಮತ್ತು ವರ್ಷ ಋತುವನ್ನು ಬಹಳಷ್ಟು ಏರುಪೇರು ಮಾಡಿದೆ. ಅಲ್ಲದೆ ಈ ಪ್ರದೇಶದಲ್ಲಿಯ ಕೋಟ್ಯಾಂತರ ಜನರ ಜೀವನಕ್ಕೆ ಮತ್ತು ಬದುಕಿಗೆ ಆತಂಕವನ್ನುಂಟುಮಾಡಿದೆ. ಈ ದೊಡ್ಡ ಮೋಡ ಗಿಡಗಂಟೆಗಳ ಹಾಗೂ ಪ್ರಾಣಿಗಳ ದಹನಕ್ರಿಯೆಯಿಂದ ಉಂಟಾಗುವ ಹೊಗೆಯಿಂದಲೂ, ಕೈಗಾರಿಕೆಗಳ ಹಾಗೂ ಶಕ್ತಿ ಆಕರಗಳಿಂದ ಹೊರಸೂಸುವ ವಿಷಯುಕ್ತ ಕಣಗಳಿಂದ ಪುಷ್ಟಿಗೊಳ್ಳುತ್ತದೆ. ಪಳಯುಳಿಕೆಗಳ ಮತ್ತು ಗಿಡಗಂಟೆಗಳ ಹೊಗೆ ಒಟ್ಟು ಇಂಗಾಲದ ಡೈ ಆಕ್ಸೈಡ್ ಶೇ.೭೪ರಷ್ಟು ಆಗುತ್ತದೆ. ಮತ್ತು ಜಗತ್ತಿನಾದ್ಯಂತ ಇರುವ ಹಸಿರು ಮನೆಗಳಿಂದ ಹೊರಸೂಸುವ ಅನಿಲದ ಶೇ.೫೦ರಷ್ಟು ಆಗುತ್ತದೆ. ಜಗತ್ತಿನಲ್ಲಿ ಇಂಗಾಲಾಮ್ಲವನ್ನು ಹೊರಸೂಸುವ ದೇಶಗಳಲ್ಲಿ ಅಮೇರಿಕಾ ಮೊದಲನೆ ಸ್ಥಾನದಲ್ಲಿದೆ. ಗಂಡಾಂತರಗಳನ್ನು ಉಂಟುಮಾಡುವ ಮತ್ತು ಕೋಟ್ಯಾಂತರ ಜನರಿಗೆ ವಿಪತ್ತನ್ನು ತಂದೊಡ್ಡುವಂಥ ಆರ್ಥಿಕ ಮಾದರಿಯು ಈ ಜಗತ್ತಿನಲ್ಲಿ ಜೀವವು ತನ್ನ ಮೂಲ ರೂಪದಲ್ಲಿರಲು ನೋಡ ಬಯಸದ ನಕಾರಾತ್ಮಕ ಶಕ್ತಿಗಳ ಹುನ್ನಾರವಾಗಿದೆ.

ದುರಾಸೆಯಿಂದ ಕೂಡಿದ ಬಂಡವಾಳಶಾಹಿ ತನ್ನ ಉತ್ತುಂಗ ಸ್ಥಿತಿಯನ್ನು ತಲುಪಿದೆ. "ವಿಶ್ವದ ಮರುಭೂಮಿಯ ಹೊರನೋಟ" ಎಂಬ ವರದಿಯನ್ನು ವಿಶ್ವ ರಾಷ್ಟ್ರ ಸಂಸ್ಥೆ ಬಿಡುಗಡೆ ಮಾಡಿದೆ. ಇದರ ಸಂಕ್ಷಿಪ್ತ ಹೆಸರು ಯು.ಎನ್.ಇ.ಪಿ. ಈ ವರದಿಯ ಪ್ರಕಾರ ಒಂದು ವರ್ಷದಲ್ಲಿ ಹನ್ನೊಂದು ದಶಲಕ್ಷ ಮಕ್ಕಳು ನ್ಯುಮೋನಿಯಾ, ಡಯೇರಿಯಾ, ಮಲೇರಿಯಾ, ದಡಾರ, ಏಡ್ಸ್ ನಿಂದ ಸಾಯುತ್ತವೆ. ಇನ್ನೂರು ಕೋಟಿಗಿಂತ ಹೆಚ್ಚು ಜನರು ಪ್ರತಿವರ್ಷ ಆಪತ್ತುಗಳಿಂದ ಪೀಡಿತರಾಗುತ್ತಾರೆ. ವಿಶ್ವಸಂಸ್ಥೆಯ ಮಾನವ ಸಂಪನ್ಮೂಲ ವರದಿಯ ಪ್ರಕಾರ ಎಂಟು ಕೋಟಿ ಜನ ನಿರಕ್ಷರಸ್ಥರಾಗಿದ್ದಾರೆ. ಜಗತ್ತಿನ ೨.೬ ಕೋಟಿಯಷ್ಟು ಜನರು ಪ್ರಾಥಮಿಕ ಹಂತದ ಸ್ವಚ್ಛತಾ ವ್ಯವಸ್ಥೆಯನ್ನೂ ಹೊಂದಿರುವುದಿಲ್ಲ. ಹತ್ತು ಜನರಲ್ಲಿ ನಾಲ್ಕು ಜನಕ್ಕೆ

ಸಾಮಾನ್ಯವಾದ ಶೌಚಾಲಯವಿರುವುದಿಲ್ಲ. ಪ್ರತಿವರ್ಷ ೬ ದಶಲಕ್ಷ ಮಕ್ಕಳು ಐದುವರ್ಷದವರಾಗುವ ಮುನ್ನವೇ ಅಪೌಷ್ಠಿಕತೆಯಿಂದ ಸಾಯುತ್ತವೆ. ೨೧೦೦ರ ವೇಳೆಗೆ ಹವಾಮಾನ ವೈಪರಿತ್ಯದ ಕಾರಣದಿಂದಾಗಿ ಆಹಾರದ ಗಂಡಾಂತರವನ್ನು ಜಗತ್ತಿನ ಜನತೆ ಎದುರಿಸಬೇಕಾಗುತ್ತದೆ. ಹವಾಮಾನದಲ್ಲಿ ಶೀಘ್ರವಾಗಿ ಏರುತ್ತಿರುವ ಉಷ್ಣತೆಯ ಕಾರಣದಿಂದಾಗಿ ಉಷ್ಣವಲಯದ ಪ್ರದೇಶದಲ್ಲಿ ಕೃಷಿ ಉತ್ಪನ್ನ ಕಡಿಮೆಯಾಗುವುದು.

ವಿಶ್ವರಾಷ್ಟ್ರ ಸಂಸ್ಥೆಯ ಇತ್ತೀಚಿಗಿನ ವರದಿ ಪ್ರಕಾರ ಜಗತ್ತಿನ ಜನಸಂಖ್ಯೆಯ ಅರ್ಧಭಾಗದಷ್ಟು ಜನ ೨೦೩೦ರ ವೇಳೆಗೆ ಅತಿಯಾದ ನೀರಿನ ಸಂಕಷ್ಟಕ್ಕೆ ಒಳಗಾಗುವ ಪ್ರದೇಶದಲ್ಲಿ ವಾಸಮಾಡಬೇಕಾಗುತ್ತದೆ. ವಿಶ್ವ ರಾಷ್ಟ್ರ ಸಂಸ್ಥೆಯಲ್ಲಿ ಜಾಗತಿಕ ಹವಾಮಾನ ಪರಿಶೀಲನಾ ಸಮಿತಿ ಇದೆ. ಅದರಲ್ಲಿ ೧೩೦ ದೇಶಗಳಿಂದ ಆಯ್ದು ಎರಡೂವರೆ ಸಾವಿರ ವಿಜ್ಞಾನಿಗಳಿದ್ದಾರೆ. ಅವರು ಬಹು ಕಟ್ಟುನಿಟ್ಟಾದ ಎಚ್ಚರಿಕೆಯ ಸೂಚನೆಯನ್ನು ಕೊಟ್ಟಿದ್ದಾರೆ. ಅವರ ವರದಿ ಪ್ರಕಾರ ಉಷ್ಣ ಗಾಳಿ ಬೀಸುವುದು, ಸಮುದ್ರದ ಮಟ್ಟದಲ್ಲಿ ಏರಿಕೆಯಾಗುವುದು ಮತ್ತು ಬರಗಾಲ ಉಂಟಾಗುವುದು; ಕರಗುತ್ತಿರುವ ಹಿಮಗಡ್ಡೆಗಳು ೧೮ ಬಿಲಿಯನ್ ಜನರ ಕುಡಿಯುವ ನೀರು ಇಲ್ಲದಂತೆ ಮಾಡುವುವು. ತನ್ನ ಈಗಿನ ಜೀವನ ಪದ್ಧತಿಯನ್ನು ಸರಿಪಡಿಸಿಕೊಳ್ಳಲು ಜಗತ್ತಿಗೆ ಒಂದು ದಶಕಕ್ಕಿಂತ ಕಡಿಮೆ ಸಮಯವಿದೆ. ಕಳೆದ ೨೦ ವರ್ಷಗಳಲ್ಲಿ ಆರ್ಥಿಕ ಅಸಮಾನತೆ ಮಿತಿಮೀರಿದೆ. ಇಂಥ ಪರಿಸ್ಥಿತಿ ೧೫೦ ದೇಶಗಳಲ್ಲಿ ಇದೆ. ಆ ದೇಶಗಳಲ್ಲಿಯೇ ಜಗತ್ತಿನ ಜನಸಂಖ್ಯೆಯ ಶೇ.೮೦ರಷ್ಟು ಜನ ವಾಸವಾಗಿದ್ದಾರೆ.

ಪ್ರಪಂಚದ ಜನಸಂಖ್ಯೆಯ ಶೇ.೪೫ರಷ್ಟು ಜನ ದಿನಕ್ಕೆ ಎರಡು ಡಾಲರ್‌ಗಳಿಗಿಂತಲೂ ಕಡಿಮೆ ಆದಾಯದಲ್ಲಿ ಜೀವನ ನಡೆಸುತ್ತಿದ್ದಾರೆ. ಮತ್ತು ೮ ಕೋಟಿ ೪೦ ಲಕ್ಷ ಜನರು ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ. ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಿಸಿದ ವಿಶ್ವ ಸಂಸ್ಥೆಯ ಸಮಿತಿ ಪ್ರಕಾರ ಸುಮಾರು ೮ ಕೋಟಿಯಷ್ಟು ಜನ ನಿರಕ್ಷರಸ್ಥರಿದ್ದಾರೆ.

ಈ ಜಗತ್ತನ್ನು ದುರಾಸೆಯಿಂದ ಕಾಣದೆ ವಿವೇಚನಾಯುಕ್ತವಾಗಿ ಪರಿಗಣಿಸಬೇಕಾದ ಕಾಲ ಬಂದಿದೆ. ಜಗತ್ತು ದುರಾಸೆಯ ರೋಗಾಣು ಎಂಬ ಅತ್ಯಂತ ಅಪಾಯಕಾರಿ ಶತ್ರುವನ್ನು ಎದುರಿಸುತ್ತಿದೆ.

(ಅನು : ಸುಕೌ)

* * *

ಗಾಂಧೀ, ಕ್ರಾಂತಿ ಮತ್ತು ಶಾಂತಿಯ ಶಿಲ್ಪಿ

– ಸುರೇಂದ್ರ ಕೌಲಗಿ

ಗಾಂಧೀ ಅಂದರೆ ಕ್ರೀಯಾಶೀಲತೆ ಗಾಂಧೀ ಅಂದರೆ ಪ್ರಸ್ತುತೆ. ಗಾಂಧೀ ಅಂದರೆ ದೂರದರ್ಶಿತ್ವ ಕ್ರೀಯಾಶೀಲತೆ ಇಲ್ಲದವನು ಪ್ರಸ್ತುತನಾಗಾಲಾರ. ಪ್ರಸ್ತುತತೆಯನ್ನು ಅರಿಯದವನು ಕ್ರೀಯಾಶೀಲನಾಗಾಲಾರ. ಏಕಕಾಲದಲ್ಲಿ ವಿಭಿನ್ನ ನೆಲೆಗಳಲ್ಲಿ ನಡೆಯುವ ಪ್ರಕ್ರಿಯೆ. ಬಿಹಾರದ ಚಂಪಾರಣ್ಯ ಜಿಲ್ಲೆಯ ರೈತರು ತಮ್ಮ ಮೇಲೆ ಇಂಗ್ಲೀಷ್ ಜಮೀನದಾರರು ಹಾಕಿದ್ದ ಕಂದಾಯ ತಪ್ಪೆಂದು ಗಾಂಧೀಗೆ ಮನಗಾಣಿಸುತ್ತಾರೆ ತಕ್ಷಣ ಇಂಗ್ಲೀಷ್ ಭೂಮಾಲಿಕರ ವಿರುದ್ಧ ರೈತರನ್ನು ಒಗ್ಗೂಡಿಸಿ ಅಹಿಂಸಾತ್ಮಕ ಸಮರ ಸಾರಿದರು. ಆ ಸಮಯದಲ್ಲಿ ಗಾಂಧೀ ತಮ್ಮ ಪ್ರಸ್ತುತತೆ ಮತ್ತು ಕ್ರೀಯಾಶೀಲತೆಯನ್ನು ಪರಿಣಾಮಕಾರಿಯಾಗಿ ತೋರಿಸಿದರು. ಕಲ್‌ಕತ್ತಾದಲ್ಲಿ ನಡೆದ ಕಾಂಗ್ರೇಸ್ ಅಧಿವೇಶನದಲ್ಲಿ ಗುಮಾಸ್ತನಾಗಿ ಸಂಬಂಧ ಪಟ್ಟವರಿಗೆ ನೆರವಾದದ್ದು, ಸಮ್ಮೇಳನ ಸ್ಥಳದಲ್ಲಿಯ ಶೌಚಾಲಯಗಳನ್ನು ಸ್ವಚ್ಚಮಾಡಿದ್ದು ಕೂಡಾ ಗಾಂಧೀ ಹೇಗೆ ಒಂದು ಸನ್ನಿವೇಶದಲ್ಲಿ ಏಕಾಲಕ್ಕೆ ಪ್ರಸ್ತುತ ಮತ್ತು ಕ್ರೀಯಾಶೀಲರಾಗುತ್ತಾರೆ ಎಂಬುದಕ್ಕೆ ಇದಕ್ಕಿಂತ ಬೇರೊಂದು ರಚನಾತ್ಮಕ ಉದಾಹರಣೆ ಬೇಕಿಲ್ಲ. ತಮ್ಮ ಸಮಯಪ್ರಜ್ಞಾಧಾರಿತ ಪ್ರಸ್ತುತತೆಯನ್ನು ಮತ್ತು ಅದಕ್ಕೆ ತಕ್ಕ ಕ್ರೀಯಾಶೀಲತೆಯನ್ನು ತೋರಿಸುವುದರ ಮೂಲಕ ಗಾಂಧೀಜಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರಲ್ಲದೆ ತಮ್ಮ ಸಹೋದ್ಯೋಗಿಗಳ ಮೇಲೆ ಮತ್ತು ಸಹ ಕಾರ್ಯಕರ್ತರ ಮೇಲೆ ಪ್ರಭಾವವನ್ನು ಬೀರಲು ಸಮರ್ಥರಾದರು ದಕ್ಷಿಣ ಆಫ್ರಿಕಾದಲ್ಲಿ ವಾಣಿಜ್ಯ ಸಂಬಂಧವಾದ ದಾಯಾದಿಗಳ ಕೋರ್ಟ್‌ವ್ಯಾಜ್ಯದಲ್ಲಿ ಏನೂ ಹುರುಳಿಲ್ಲವೆಂದ ಅರಿತ ಗಾಂಧೀ ಆ ದಾಯಾದಿಗಳು ತಮ್ಮ ವಾಣಿಜ್ಯ ಸಂಬಂಧಿ ವೈರತ್ವ ಮರೆತು ಸಹೋದರ ಸಂಬಂಧದ ಸೂತ್ರದಲ್ಲಿ ಬಂಧಿಸಿದ್ದು ಕೂಡ ಗಾಂಧೀ ಒಂದು ನಿರ್ಧಿಷ್ಟ ವಸ್ತು ಸ್ಥಿತಿಯಲ್ಲಿ ತಮ್ಮನ್ನು ತಾವು ಪ್ರಸ್ತುತಗೋಳಿಸುತ್ತಾ, ಕ್ರೀಯಾಶೀಲರಾಗುತ್ತ, ಸುತ್ತಲಿನ ಸಮಾಜದ ಮೇಲೆ ಹೊಸದೊಂದು ಮಾನವೀಯ ಮೌಲ್ಯವನ್ನು ಸ್ಥಾಪಿಸುವ ಅವರ ಶಕ್ತಿ ಅಸಾಧಾರಣವಾದದ್ದು. ಈ ಪ್ರಸ್ತುತತೆ ಮತ್ತು ಕ್ರೀಯಾಶೀಲತೆಯ ಹಿಂದೆ ದೂರದರ್ಶಿತ್ವವೂ ಮೇಳೈಸಿದೆ. ಸಮಾಜದಲ್ಲಿ ಪ್ರಚಲಿತವಿದ್ದ ಸಮಾಜಹಿತ ವಿರೋಧಿ ಮೌಲ್ಯಗಳನ್ನು ಎಂದೂ ಒಪ್ಪದ ಅವರು ಆ ಮೌಲ್ಯಗಳ ಸ್ಥಾನದಲ್ಲಿ ಹೊಸದೊಂದು ಮೌಲ್ಯವನ್ನು ಸ್ಥಾಪಿಸಿ ಸುಂದರವಾದ ಬೇರೊಂದು ಸಮಾಜವನ್ನು ನಿರ್ಮಿಸಬೇಕೆಂಬ ದೂರದರ್ಶಿತ್ವವಿರುತ್ತಿತು. ಗಾಂಧೀ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದು ತಮ್ಮ ದೀರ್ಘ ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿಯೇ ೧೯೪೮ರ ಜನವರಿ ೩೦ರಂದು ಹತ್ಯೆಗೊಳ್ಳುವವರೆಗೆ ಗಾಂಧೀಯವರು ಕೈಗೊಂಡಿದ್ದ ಎಲ್ಲ ಚಟುವಟಿಕೆಗಳ ಹಿಂದೆ ಈ ದೂರದರ್ಶಿತ್ವವೇ ಪ್ರಚೋದಕ ಶಕ್ತಿಯಾಗಿತ್ತು. ಸನಾತನ

ಹಿಂದು ಆಗಿದ್ದ ಅವರು ಭಗವಂತನ ಧರ್ಮದಲ್ಲಿ ಆಸ್ತೆ ಇಟ್ಟು ಮನುಷ್ಯ ನಡೆದರೆ ಎಂದೂ ಆತನಿಂದ ಪ್ರಮಾದ ಸಂಭವಿಸದು, ತಪ್ಪು, ದೋಷ, ಕೇಡು ಆಗದು. ಕಣ್ಣು ಮುಚ್ಚಿ ನಡೆಯಲಿ, ಓಡಲಿ ಯಾವ ರೀತಿಯಿಂದಲೂ ಆತನ ಪತನವಾಗದೆಂಬ ಮಾತನ್ನು ಗಾಂಧೀ ತಮ್ಮ ಕಾರ್ಯಪ್ರಣಾಳಿಕೆಯ ಮೂಲಕ ಸಾರಿ ತೋರಿಸಿದ್ದಾರೆ. ಪ್ರಸ್ತುತತೆ ಮತ್ತು ಕ್ರೀಯಾಶೀಲತೆ ಹಿಂದೆ ನೈತಿಕ ಶಕ್ತಿ ಇರಲೇಬೇಕೆಂಬ ಮಾನ್ಯತೆ ಗಾಂಧೀಯವರದ್ದಾಗಿತ್ತು. ಆದ್ದರಿಂದಲೆ ಅವರು ತಪ್ಪು ಮಾಡಿದಾಗಲೇಲ್ಲಾ ಅವರನ್ನು ಸರಿದಾರಿಗೆ ತಂದಿದ್ದು ಈ ನೈತಿಕ ಶಕ್ತಿಯ ಮಾನ್ಯತೆಯೇ ಕಾರಣ. ಈ ಮಾನ್ಯತೆ ಮುಂದುವರೆದು ದೇವರಸ್ಥಾನದಲ್ಲಿದ್ದ ಸತ್ಯಕ್ಕೆ ದೇವರ ಪಟ್ಟವನ್ನೆ ಕಟ್ಟುವುದರಲ್ಲಿ ನಿಂತಿತು.

ಯಾವ ಹಿಂದುಳಿದ ಜನರನ್ನು ಆ ಕಾಲಕ್ಕೆ ಹರಿಜನರೆಂದು ಗುರುತಿಸಲಾಗುತ್ತಿತೊ ಆ ಜನ ಹೊರಗಿನ ಶಕ್ತಿಗಳ ಕೈವಾಡದಿಂದ ರಾಷ್ಟ್ರಜೀವನದ ಮುಖ್ಯವಾಹಿನಿಯಿಂದ ಬೇರ್ಪಡಿಸಲಾಗುತ್ತಿದೆಯೆಂದು ತಿಳಿದೊಡನೆ ತಮ್ಮ ಪ್ರಾಣವನ್ನು ಪಣಕ್ಕೆ ಒಡ್ಡಿ ತಾವು ಸತ್ಯವೆಂದು ಯಾವುದನ್ನು ತಿಳಿದಿದ್ದರೊ ಅದಕ್ಕಾಗಿ ಆಮರಣ ಉಪವಾಸ ಕೈಗೊಂಡರು ಮತ್ತು ಸಾಮಾಜಿಕವಾಗಿ ಸಮಾಜದ ವಿಭಜನೆಯಾಗುವುದನ್ನು ತಪ್ಪಿಸಿ ಪ್ರಸ್ತುತಗೊಂಡರು. ಅಷ್ಟೆ ಅಲ್ಲದೆ ನಂತರ ಹರಿಜನರನ್ನು ಸಮಾಜದ ಮುಖ್ಯ ವಾಹಿನಿಯೊಂದಿಗೆ ಸೇರಿಸಲು ದೇಶಾದ್ಯಾಂತ ೧೧ ತಿಂಗಳ ಕಾಲ ಸಂಚರಿಸಿ ಹರಿಜನೋದ್ಧಾರದ ಕೆಲಸಕ್ಕಾಗಿ ಕೋಟಿಗೂ ಮೀಗಿಲಾಗಿ ನಿಧಿ ಸಂಗ್ರಹಮಾಡಿದರು. ತಮ್ಮ ಹನ್ನೊಂದು ಅಂಶದ ರಚನಾತ್ಮಕ ಕಾರ್ಯಗಳಲ್ಲಿ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ಕೆ ಮುಖ್ಯ ಸ್ಥಾನವನ್ನು ಕೊಟ್ಟರು. ಮೀಸಲಾತಿಯಂತಹ ಕೃತಕ ಭಾವಾನಾತ್ಮಕ ಪ್ರಕ್ರಿಯೆಯ ಬದಲಾಗಿ ಮೇಲವರ್ಗದ ಜನರ ಹೃದಯ ಪರಿವರ್ತನೆಯ ಮೂಲಕ ಶಾಶ್ವತವಾದ ಮೀಸಲಾತಿ ರಹಿತ ದೇಶವನ್ನು ನಿರ್ಮಿಸಲು ಪ್ರಯತ್ನ ಪಟ್ಟರು. ಅಲ್ಪಸಂಖ್ಯಾತರೆಂದು ಇಂದು ಯಾರನ್ನು ಕರೆಯುತ್ತಾರೊ ಅಂಥವರನ್ನು ಓಲೈಸುವುದುರ ಮೂಲಕ ರಾಜಕೀಯ ಪಕ್ಷಗಳು ದೇಶದ ಮುಖ್ಯ ವಾಹಿನಿಗೆ ಸೇರಿಸಲು ಪ್ರಯತ್ನ ಮಾಡುತ್ತಿವೆ. ಆದರೆ ಗಾಂಧೀಯವರು ಅಲ್ಪಸಂಖ್ಯಾತರ ಮನೋನೋವಿಗೆ ಕಾರಣವಾಗಬಹುದ್ದಾಗಿದ್ದ ಖಿಲಾಫತ್ ಸಮಸ್ಯೆಯನ್ನು ತಮ್ಮ ಕೈಗೆತ್ತಿಕೊಂಡು ಸಾಧ್ಯವಾದಷ್ಟು ಅದನ್ನು ಬಗೆಹರಿಸುವುದರ ಮೂಲಕ ಅಲ್ಪಸಂಖ್ಯಾಂತರನ್ನು ಸದ್ಭಾವನೆಯಿಂದ ದೇಶದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಿದರು. ಖಿಲಾಫತ್ ಮತ್ತು ಗೋರಕ್ಷಣೆ ಪ್ರಶ್ನೆಗಳನ್ನು ಒಟ್ಟಾಗಿ ಬೇರೆಸಬಾರದೆಂದೂ ಎರಡು ಪ್ರಶ್ನೆಗಳ ಸಮಾಲೋಚನೆಯನ್ನು ಯೋಗ್ಯತೆಯ ಮೇಲೆ ಬೇರೆ ಬೇರೆಯಗಿ ಪರಿಗಣಿಸಬೇಕು ಎಂದು ಗಾಂಧೀ ಸೂಚಿಸಿದರು. ಎರಡು ವಿಭಿನ್ನವಾದ ಪ್ರಶ್ನೆಗಳನ್ನು ಸಾಮರಸ್ಯತೆಯ ದೃಷ್ಟಿಯಿಂದ ಬಗೆಹರಿಸಲು ಪ್ರಯತ್ನಿಸಿ ಗಾಂಧೀ ಪ್ರಸ್ತುತವಾದರೆಂಬುದಕ್ಕೆ ಇದೊಂದು ಉದಾಹರಣೆ. ದೇಶ ವಿಭಜನೆಯಾದಾಗ ಗಾಂಧೀ ನೌಖಾಲಿಯಲ್ಲಿ, ಕಲ್ಕತ್ತಾದಲ್ಲಿ ಮತ್ತು ದಿಲ್ಲಿಯಲ್ಲಿ ಕೋಮು ಸೌಹಾರ್ದತೆಗಾಗಿ ಮಾಡಿದಂಥ ಪ್ರಯತ್ನ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಬರೆದಿಡುವಂಥಾದ್ದಾಗಿದೆ.

ಅಹಮದಾಬಾದ್ ನಗರ ಬಟ್ಟೆಮಿಲ್‌ಗಳಿಗಾಗಿ ಪ್ರಸಿದ್ಧ. ಅದು ಮಿಲ್ ಕಾರ್ಮಿಕರಿಂದ ತುಂಬಿದ ನಗರ. ಕಾರ್ಮಿಕರಿಗೂ ಮಿಲ್‌ಮಾಲೀಕರಿಗೂ ಕೂಲಿ ಕೊಡುವ ವಿಷಯದಲ್ಲಿ ವಿವಾದ ಉಂಟಾಯಿತು. ವಿವಾದ ವಿಕೋಪಕ್ಕೆ ಹೋಯಿತು. ಆಗ ಗಾಂಧೀ ಕಾರ್ಮಿಕರ ಪರವಾಗಿ ನಿಂತು ಅವರಿಗೆ ನ್ಯಾಯ ದೊರಕಿಸಿಕೊಡಲು ನೇತೃತ್ವ ವಹಿಸಿಕೊಂಡರು. ಆಗಿನ್ನೂ ಭಾರತದಲ್ಲಿ ಟ್ರೇಡ್‌ಯೂನಿಯನ್ ಚಳುವಳಿ ಪ್ರಾರಂಭವಾಗಿರಲಿಲ್ಲ ಮಿಲ್‌ಮಾಲೀಕರು ಮತ್ತು ಕಾರ್ಮಿಕರ ಮಧ್ಯ ಸಂಧಾನವೇರ್ಪಡಿಸಲು ಪ್ರಯತ್ನಿಸಿದರು. ಮಿಲ್ ಮಾಲೀಕರು ಕಾರ್ಮಿಕರ ಬೇಡಿಕೆಯನ್ನು ಒಪ್ಪದೆ ಇದ್ದಾಗ ಗಾಂಧೀಜಿ ಕಾರ್ಮಿಕರ ಪರವಾಗಿ ಉಪವಾಸ ಪ್ರಾರಂಭಿಸಿದರು. ಸಂಧಾನದ ಸಮಯದಲ್ಲಿ ಗಾಂಧೀಜಿ ಕಾರ್ಮಿಕರ ಮತ್ತು ಮಿಲ್‌ಮಾಲೀಕರ ಸಂಬಂಧ ನೌಕರ ಮತ್ತು ಮಾಲೀಕರ ಸಂಬಂಧಕ್ಕೆ ಬದಲಾಗಿ ತಂದೆ ಮತ್ತು ಮಕ್ಕಳ ಸಂಬಂಧದ ರೀತಿಯಲ್ಲಿ ರೂಪಗೊಳ್ಳುವಂತೆ ಮಾಡಿ ಅವರಿಬ್ಬರನ್ನು ಪ್ರೇಮದ ರೇಷ್ಮೆಯ ದಾರದಿಂದ ಕಟ್ಟಿಹಾಕಿದರು. ಗಾಂಧೀಯವರು ಹೇಗೆ ತಮ್ಮನ್ನು ಪ್ರಸ್ತುತ ಗೊಳಿಸಿಕೊಳ್ಳುತ್ತಾರೆ ಹಾಗೂ ಹೊಸಮೌಲ್ಯಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆ. ಹಿಂಸಾತ್ಮಕ ರೂಪ ಧರಿಸಬಹುದಾಗಿದ್ದ ಪರಿಸ್ಥಿತಿಯನ್ನು ಅಹಿಂಸಾತ್ಮಕವಾಗಿ ನಿಭಾಯಿಸಿ ಕ್ರಾಂತಿಯನ್ನೇ ಉಂಟುಮಾಡಿದರು. ಚಂಪಾರಣ್ಯ ಸತ್ಯಾಗ್ರಹದಿಂದ ಉಪವಾಸ ಪ್ರಾರಂಭಿಸಿ ಉಪ್ಪಿನ ಸತ್ಯಾಗ್ರಹದವರೆಗೆ ಗಾಂಧೀ ಒಟ್ಟು ೨೧ ಬಾರಿ ಉಪವಾಸ ಕೈಗೊಂಡರು. ಅವುಗಳಲ್ಲಿ ನಾಲ್ಕು ಆಮರಣಾಂತ ಉಪವಾಸ ಸತ್ಯಾಗ್ರಹಗಳಾಗಿದ್ದವು.

ಸ್ವಾತಂತ್ರ್ಯದ ಶಿಲ್ಪಿ ಗಾಂಧೀಯಾಗಿದ್ದರು ಕೂಡ ಅವರು ಸರ್ಕಾರದಲ್ಲಿ ಯಾವ ಸ್ಥಾನವನ್ನೂ ಬಯಸದೆ ಜನ ಸಾಮಾನ್ಯರ ನಡುವೆ ಇದುಕೊಂಡೆ ಅವರನ್ನು ಸ್ವತಂತ್ರ ದೇಶದ ಸಮರ್ಥ ಹಾಗೂ ಸುಯೋಗ್ಯ ಪ್ರಜೆಗಳನ್ನಾಗಿ ಮಾಡಲು ಪ್ರಯತ್ನಿಸಿದರು. ಅವರ ಈ ಉದಾಹರಣೆಯ ಪ್ರಭಾವ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಷ್ಟಿತ್ತೆಂದರೆ ಸಮಾಜವಾದಿ ನಾಯಕ ಜಯಪ್ರಕಾಶ ನಾರಯಣರಿಗೆ ಉಪಪ್ರಧಾನಿ ಸ್ಥಾನವನ್ನು ಕೊಡಲು ನೆಹರು ಬಯಸಿದಾಗ ಅದನ್ನು ಅವರು ನಿರಾಕರಿಸಿ ಪ್ರಜಾಪ್ರಭುತ್ವದ ಬಲ ಸಂವರ್ಧನೆಗಾಗಿ ಶ್ರಮಿಸಿದರು, ಅಂಚೆ ಇಲಾಖೆ ಕಾರ್ಮಿಕರ ಹಿತಕ್ಕಾಗಿ ಅರವತ್ತು ದಿನ ಉಪವಾಸಮಾಡಿ ತಮ್ಮ ನಾಯಕತ್ವದಲ್ಲಿಯ ದೋಷನಿವಾರಣೆಗಾಗಿ ಪಶ್ಚಾತ್ತಾಪ ಮಾಡಿಕೊಂಡರು. ಹಿಮಾಲಯ ಪರ್ವತವನ್ನು ಉಳಿಸಲು ಸುಂದರ್‌ಲಾಲ್ ಬಹುಗುಣ ಕೂಡ ಅರವತ್ತು ದಿನಗಳ ಉಪವಾಸ ಮಾಡಿದರು. ಆಚಾರ್ಯ ವಿನೋಬಾ ಭಾವೆ ಗಾಂಧೀ ಪ್ರತಿಪಾದಿಸಿದ್ದ ಪ್ರೇಮ ಮತ್ತು ಕರುಣೆಯ ಸಂದೇಶ ಹೊತ್ತು ಭಾರತಾದ್ಯಂತ ೧೪ವರ್ಷ ಪಾದ ಯಾತ್ರೆ ಮಾಡಿ ಭೂಸಮಸ್ಯೆಯನ್ನು ರಕ್ತರಹಿತ ಕ್ರಾಂತಿಯಿಂದ ಬಗೆ ಹರಿಸಲು ಪ್ರಯತ್ನಿಸಿದರು.

೧೯ನೇ ಶತಮಾನದಲ್ಲಿದ್ದ ಗಾಂಧೀ ೨೧ನೇ ಶತಮಾನಕ್ಕೆ ಪ್ರಸ್ತುತವಾಗುವರೇ ಎಂಬುದು ಜ್ವಲಂತ ಪ್ರಶ್ನೆ. ಈ ಪ್ರಶ್ನೆಗೆ ಎರಡು ಸ್ತರದಲ್ಲಿ ಉತ್ತರವಿದೆ. ಒಂದನೆಯದು ವ್ಯಕ್ತಿಗತ ಸ್ತರದಲ್ಲಿ, ಸಾಮಾಜಿಕ ಸ್ಥರದಲ್ಲಿ. ಎರಡನೆಯದು ರಾಷ್ಟ್ರೀಯ ಸ್ತರದಲ್ಲಿ. ವ್ಯಕ್ತಿಗತ ಸ್ಥರದಲ್ಲಿ ಗಾಂಧೀಯ ವಿಚಾರಗಳನ್ನು ಮುಖ್ಯವಾಗಿ

ಅವರು ಸೂಚಿಸಿದ ಏಕದಳ ವೃತ್ತಿಗಳನ್ನು ನಿಷ್ಠೆಯಿಂದ ಅನ್ವಯಿಸಿಕೊಂಡರೆ ಮುಂದೆ ಜೀವನದ ಎಲ್ಲ ಸ್ತರಗಳಲ್ಲಿಯೂ ಗಾಂಧೀ ಪ್ರಸ್ತುತವಾಗುತ್ತಾರೆ. ಏಕೆಂದರೆ ಗಾಂಧೀ ತಮ್ಮ ಜೀವನದುದ್ದಕ್ಕೂ ಮಾಡಿದ್ದು ಸತ್ಯದೊಂದಿಗೆ ಪ್ರಯೋಗ. ಅವರೇ ಹೇಳುವಂತೆ ಸತ್ಯಶೋಧಕ ಧೂಳು ಕಣಕ್ಕಿಂತ ಹೆಚ್ಚು ನಮ್ರವಾಗಿರಬೇಕು. ಲೋಕವು ಧೂಳಿನ ಕಣವನ್ನು ಕಾಲಕೆಳಗೆ ತುಳಿಯುತ್ತದೆ. ಸತ್ಯ ಶೋಧಕ ಆ ಧೂಳಿನ ಕಣದಿಂದಲೂ ತುಳಿಸಿಕೊಳ್ಳವಷ್ಟು ನಮ್ರನಾಗಬೇಕು. ಅಷ್ಟು ನಮ್ರನಾಗಿ ಸತ್ಯವನ್ನು ಪರಿಪಾಲಿಸುವುದಾದರೆ ಜೀವನದಲ್ಲಿ ಪ್ರತಿ ವ್ಯವಹಾರದಲ್ಲೂ, ಪ್ರತಿವಿಚಾರದಲ್ಲೂ, ಪ್ರತಿಕ್ರಿಯೆಯಲ್ಲೂ ಗಾಂಧೀ ಪ್ರಸ್ತುತ ಎಂಬುದು ಸಹಜ ಸಿದ್ಧವಾಗಿರುವಂತೆ ಅನುಭವಕ್ಕೆ ಬರುತ್ತದೆ. ಆದರೆ ೨೧ನೇ ಶತಮಾನದ ಜನ ಅಸತ್ಯವನ್ನು ಮತ್ತು ಹಿಂಸೆಯನ್ನು ಬೆಂಬಲಿಸಿ ಹೋಗುತ್ತಿರುವಾಗ ಗಾಂಧೀ ಸಧ್ಯದ ರಾಷ್ಟ್ರಜೀವನದಲ್ಲಿ ಪ್ರಸ್ತುತ ಅನಿಸದೆ ಇರುವಲ್ಲಿ ಆಶ್ಚರ್ಯವೆನಿಸಲಾರದು. ಇಂದಿನ ಅಭಿವೃದ್ಧಿ ನೀತಿ ಸತ್ಯ ಮತ್ತು ಅಹಿಂಸೆಯಿಂದ ದೂರಾಗಿರುವುದರಿಂದ ಗಾಂಧೀಯ ಯಾವ ವಿಚಾರವೂ ಪ್ರಸ್ತುತವೆನಿಸದಷ್ಟು ಅವ್ಯವಹಾರಿಕವಾಗುತ್ತದೆ. ಸುಪ್ರಸಿದ್ದ ಅರ್ಥಶಾಸ್ತ್ರಜ್ಞ ಮತ್ತು ಭಾರತರತ್ನ ಅಮರ್ತ್ಯಸೇನ್‌ರವರ ಪ್ರಕಾರ ನಮ್ಮ ದೇಶ ಸಾಧಿಸುತ್ತಿರುವ ಪ್ರಗತಿಗೆ ಯಾವ ಗೊತ್ತುಗುರಿಯಿಲ್ಲ ಮತ್ತು ಅಭಿವೃದ್ಧಿಯ ತಾಂತ್ರಿಕತೆ ಕೂಡ ಗೊತ್ತಿಲ್ಲ. ಕುರುಡು-ಕರುಡಾಗಿ ಇದ್ದು ಕೊಂಡು ದೇಶಾಭಿವೃದ್ಧಿಯ ಪಥದಲ್ಲಿ ಸಾಗಿದೆ. ಪರಿಸ್ಥಿತಿ ಹೀಗಿರುವಾಗ ದೇಶದ ಜನತೆಗೆ ಗಾಂಧೀ ವಿಚಾರ ಇಂದು ಅಪ್ರಸ್ತುತ ಎನಿಸಿದರೆ ಅದು ಸಹಜವೇ. ಇಡೀ ಪ್ರಪಂಚ ಪಾಶ್ಚಿಮಾತ್ಯ ಅರ್ಥನೀತಿ ಅಭಿವೃದ್ಧಿ ನೀತಿ ಮತ್ತು ಸಂಸ್ಕೃತಿಯನ್ನು ತನ್ನದಾಗಿಸಿಕೊಳ್ಳುತಿದೆ. ಆದರೆ ಗಾಂಧೀ ಪಾಶ್ಚಿಮಾತ್ಯ ಅರ್ಥನೀತಿ, ಕೈಗಾರಿಕನೀತಿ ಮತ್ತು ಸಂಸ್ಕೃತಿಯನ್ನು ಪ್ರಬಲವಾಗಿ ವಿರೋಧಿಸಿದ್ದರು. ಪಶ್ಚಿಮದ ಸಂಸ್ಕೃತಿ ಸೈತಾನ ಸಂಸ್ಕೃತಿ ಎಂದು ಬಣ್ಣಿಸಿದರು. ಅಂಥ ಸೈತಾನ ನೀತಿಯನ್ನು ನಮ್ಮ ದೇಶ ಅನುಸರಿಸುತ್ತಿರುವಾಗ ಗಾಂಧೀ ಅಪ್ರಸ್ತುತ ಎನಿಸಿದ್ದಲ್ಲಿ ಆಶ್ಚರ್ಯ ಪಡಬೇಕಾಗಿಲ್ಲ.

ವಿಜ್ಞಾನ ಮತ್ತು ತಂತ್ರಜ್ಞಾನ ಪರಾಕಷ್ಠತೆಯನ್ನು ಮುಟ್ಟುತ್ತಿವೆ. ಅವುಗಳನ್ನು ಜಗತ್ತಿನ ಎಲ್ಲ ರಾಷ್ಟ್ರಗಳು ತಮ್ಮದಾಗಿಸಿಕೊಳ್ಳುತ್ತಿವೆ. ಅದರ ಪರಿಣಾಮವಾಗಿ ಜನರ ಜೀವನದಲ್ಲಿ ಯಂತ್ರಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಯಂತ್ರಗಳಿಲ್ಲದ ಜೀವನವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯವಾಗಿದೆ. ಮನುಷ್ಯ ಯಂತ್ರಗಳ ಗುಲಾಮನಾಗಿದ್ದಾನೆ. ಅವನು ತನ್ನ ಸೂಕ್ಷ್ಮ ಸಂವೇದನಾ ಶೀಲತೆ ಕಳೆದುಕೊಂಡಿದ್ದಾನೆ. ಜೀವನದ ನಿಜವಾದ ಆನಂದವನ್ನು ಕಳೆದುಕೊಂಡಿದ್ದಾನೆ. ಜೀವನ ಬರಡಾಗಿದೆ.

ಶಸ್ತ್ರಾಸ್ತ್ರಗಳ ತಯಾರಿಕೆಯು ಹೆಚ್ಚಾಗಿದೆ. ಎಲ್ಲ ದೇಶಗಳಲ್ಲಿ ಅಣುಬಾಂಬ್‌ಗಳು, ಕ್ಷಿಪಣಿಗಳು, ಜರ್ಲತಾಗಾಮಿಗಳಿವೆ. ಮೂರನೆ ಮಹಾಯುದ್ಧವೇನಾದರೂ ಸಂಭವಿಸಿದ್ದಲ್ಲಿ ಭೂಮಿಯ ಮೇಲಿನ ಜೀವರಾಶಿ ಇಲ್ಲದಂತಾಗುವುದು. ಹೀಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಕಾರಣದಿಂದಾಗಿ ಜಗತ್ತಿನಾದ್ಯಂತ ಹಿಂಸಾಚಾರ, ಭಯೋತ್ಪಾದನೆ ಮುಂತಾದವುಗಳು ಹೆಚ್ಚುತ್ತಿರುವಾಗ ಗಾಂಧೀ ಮತ್ತು ಅವರ ಅಹಿಂಸಾತ್ಮಕ ವಿಚಾರಗಳು ನಮಗೆ ತುಂಬ ಅತ್ಯಗತ್ಯವೆಂದು ಅನಿಸುತ್ತದೆ; ಅನಿವಾರ್ಯವೆಂದೂ ಅನಿಸುತ್ತದೆ.

ಜಾಗತೀಕ ಮಟ್ಟದಲ್ಲಿ ಇಂದು ಯುದ್ಧ ಸಂಭವಿಸುವ ಸಾಧ್ಯತೆ ಕಡಿಮೆಯಿದೆ. ಅದಕ್ಕೆ ಕಾರಣ ಜಗತ್ತು ಯುದ್ಧವನ್ನು ತ್ಯಜಿಸಿದೆಯಂದಲ್ಲ ಯುದ್ಧವೇನಾದರೂ ಸಂಭವಿಸಿದ್ದಲ್ಲಿ ಗೆದ್ದ ಮತ್ತು ಸೋತವ ಎಂಬ ಭೇದವಿಲ್ಲದಂತಾಗಿ ಗೆದ್ದವರೂ ಕೂಡ ಸೋತವರಾಗಿಯೇ ಆಗಿಬಿಡುತ್ತಾರೆ ಎಂಬ ಭೀತಿ ಇದಕ್ಕೆ ಕಾರಣವಾಗಿದೆ. ಜಗತ್ತಿನ ಯಾವ ಸ್ಥಳವೂ ವಿನಾಶದಿಂದ ತಪ್ಪಿಸಿಕೊಳ್ಳುವಷ್ಟು ಸುರಕ್ಷಿತವಾಗಿಲ್ಲ. ಇಂಥ ಭಯಗಳೇ ಯುದ್ಧದ ನಿರಾಕರಣೆಗೆ ಕಾರಣವಾಗುತ್ತಿದೆ. ಆದರೆ ಗಾಂಧೀ ಪ್ರತಿಪಾದಿಸಿದ್ದು ಇಂಥ ನಕರಾತ್ಮಕ ಅಹಿಂಸೆಯೆನ್ನಲ್ಲ. ಸ್ಮಶಾನ ವೈರಾಗ್ಯದ ಅಹಿಂಸೆಯೆನ್ನಲ್ಲ. ಅವರು ಪ್ರತಿಪಾದಿಸಿದ್ದು ಚೈತನ್ಯದಿಂದ ತುಂಬಿದ, ಜೀವನವನ್ನು ಪ್ರೀತಿಸುವ ಮತ್ತು ಗೌರವಿಸುವ ಚೇತೋಹಾರಿಯಾದ ಅಹಿಂಸೆಯನ್ನು. ಜೀವವನ್ನು ಉಳಿಸುವ ಮತ್ತು ಬೆಳೆಸುವ ಸಕಾರಾತ್ಮಕ ಅಹಿಂಸೆಯನ್ನು. ಇಂಥ ಅಹಿಂಸೆಯ ಪ್ರತಿಪಾದಕರಾಗಿ ಗಾಂಧೀ ನಮಗೆ ಇಂದು ಬಹುವಾಗಿ ಪ್ರಸ್ತುತವಾಗುತ್ತಾರೆ. ಗಾಂಧೀಯವರ ಅಹಿಂಸೆಯ ಚಿಂತನದಂಥ ವಿಚಾರಗಳ ಫಲವಾಗಿಯೇ ಮೊದಲನೇ ಮಹಾಯುದ್ಧದ ನಂತರ ಲೀಗ್ ಆಫ್ ನೇಷನ್ಸ್ ಹುಟ್ಟಿಕೊಂಡಿತು. ಎರಡನೇ ಮಹಾಯುದ್ಧದ ನಂತರ ಸಂಯುಕ್ತ ರಾಷ್ಟ್ರಸಂಸ್ಥೆ ಹುಟ್ಟಿಕೊಂಡಿತು. ರಾಸಾಯಿನಿಕ ಅಸ್ತ್ರಗಳ ಉಪಯೋಗ ಸಿರಿಯಾದಲ್ಲಿ ಆದನಂತರ ವಿಶ್ವರಾಷ್ಟ್ರ ಸಂಸ್ಥೆಯ ಅಸ್ತಿತ್ವವು ಪ್ರಶ್ನಾರ್ಹವಾಗಿದೆ. ಹೀಗೆ ಜಾರಿಯಲ್ಲಿರುವ ಕೃತಕ ಅಹಿಂಸೆ ಹೋಗಿ ಗಾಂಧೀ ಪ್ರಣೀತ ಸಕರಾತ್ಮಕ ಅಹಿಂಸೆ ಸ್ಥಾಪಿತವಾಗಬೇಕೆಂಬ ಮಾತು ಆಗಾಗ್ಗೆ ಕೇಳಿ ಬರುತ್ತದೆ. ಗಾಂಧೀ ೨೧ನೇ ಶತಮಾನದ ಮುಂದೆ ಆಚೆಗೂ ಪ್ರಸ್ತುತ.

ಗಾಂಧೀಯವರ ವ್ಯಕ್ತಿತ್ವದ ಬಹುದೊಡ್ಡ ಭಾಗ ಅವರು ಕ್ರಾಂತಿಕಾರರೆಂಬುದು. ಈ ಮಾತು ಸ್ವಲ್ಪ ಆಶ್ಚರ್ಯದಾಯಕವೆನಿಸಬಹುದು. ಏಕೆಂದರೆ ಕ್ರಾಂತಿಯೆಂದರೆ ಹಿಂಸಾಸಾಧನಗಳ ಮೂಲಕ ಬದಲಾವಣೆ ತರುವುದೆಂಬುದು ಸಾಮಾನ್ಯ ಗ್ರಹಿಕೆ. ಆದರೆ ಗಾಂಧೀಯ ಕ್ರಾಂತಿ ತನ್ನನ್ನೆ ತಾನು ಬದಲಾವಣೆಗೆ ಒಳಪಡಿಸುತ್ತಾ, ಪರೀಕ್ಷೆಗೆ ಒಳಪಡಿಸುತ್ತಾ ಬದಲಾವಣೆಯನ್ನು ತರುವುದೇ ಆಗಿದೆ. ಅದನ್ನು ಅವರು ಸತ್ಯಾಗ್ರಹವೆಂದು ಕರೆದರು. ತಲೆ ಕತ್ತರಿಸುವುದರ ಮೂಲಕ ಆಗುವ ಕ್ರಾಂತಿಯ ಪರಿಣಾಮಕ್ಕಿಂತಲೂ ಸತ್ಯಾಗ್ರಹದ ಮೂಲಕ ಆಗುವ ಬದಲಾವಣೆ ಪರಿಣಾಮ ಹೆಚ್ಚು, ಫಲಕಾರಿ ಮತ್ತು ಶಾಶ್ವತ. ಜಗತ್ತಿನಲೆಲ್ಲಾ ನಡೆದ ವಿವಿಧ ಬಗೆಯ ಕ್ರಾಂತಿಗಳಲ್ಲಿ ಉದ್ದೇಶ ಮುಖ್ಯವಾಗಿತ್ತೆ ಹೊರತು ಆ ಉದ್ದೇಶದ ಸಾಧನೆಗಾಗಿ ಹಿಡಿದ ಸಾಧನಗಳ ಬಗ್ಗೆ ಚಿಂತನೆ ಇರಲಿಲ್ಲ. ಎಂಥಹ ಸಾಧನವಾದರೂ ಸರಿಯೇ ಉದ್ದೇಶ್ಯ ನರವೇರಿಬಿಟ್ಟರೆ ಸಾಕು. ಎಂಬ ಚಿಂತನೆ ಅದರಲ್ಲಿ ಪ್ರಮುಖವಾಗಿತ್ತು. ಗಾಂಧೀಯವರ ಕ್ರಾಂತಿಯಲ್ಲಿ ಉದ್ದೇಶ ನೇರವೇರುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಸಾಧನಗಳಾದ್ದಾಗಿತ್ತು. ಸಾಧನೆಗಳು ಶುದ್ಧವಾಗಿಲ್ಲದಿದ್ದರೆ ಉದ್ದೇಶ ಎಷ್ಟೆ ಶುದ್ಧವಾಗಿದರೂ ಅದು ಸಾಧಿತವಾಗುವುದಿಲ್ಲ ಎಂಬ ನಂಬಿಕೆ ಗಾಂಧೀಯಲ್ಲಿ ಬಲವಾಗಿತ್ತು. ಸಾಧನ ಮತ್ತು ಸಾಧ್ಯದ ಸಂಬಂಧ ಕುರಿತಾಗಿ ಗಾಂಧೀ ಒಂದು ಉಪಮೇಯ ಮೂಲಕ ಹೇಳಿದ್ದಾರೆ. ಬೇವಿನ ಬೀಜ ಬಿತ್ತಿ ಮಾವಿನ ಬೆಳೆಯನ್ನು ಹೇಗೆ ಪಡೆಯಲು ಅಸಾಧ್ಯವೋ ಹಾಗೆಯೇ ಅಶುದ್ದವಾದ ಸಾಧನದಿಂದ ಶುದ್ಧವಾದ

ಸಾಧನವನ್ನು ಪಡೆಯಲಾಗುವುದಿಲ್ಲವೆಂದು ಅವರು ಹೇಳಿದ್ದರು. ಈ ಮಾತಿನಲ್ಲಿಯ ಸತ್ಯತೆಯನ್ನು ಅವರು ನಡೆಸಿದ ಉಪ್ಪಿನ ಸತ್ಯಾಗ್ರಹದಿಂದ ತಿಳಿಯಬಹುದು.

ಜಗತ್ತಿನಲ್ಲಿ ಅನೇಕ ಪ್ರಕಾರದ ರಾಜಕೀಯ ಸಿದ್ಧಾಂತಗಳು ಕಾಲಗರ್ಭದಿಂದ ಹೊರಹೊಮ್ಮಿದವು ಅವುಗಳಲ್ಲಿ ಕೆಲವು ಮುಖ್ಯವಾದ ಸಿದ್ಧಾಂತಗಳು: ಫಾಸಿಸಂ, ನಾಸಿಸಂ, ಕಮ್ಯೂನಿಸಂ, ಸೋಶಿಯಲಿಸಂ ಮತ್ತು ಕ್ಯಾಪಿಟಲಿಸಮ್. ಇವುಗಳಲ್ಲಿಯ ಯಾವ ಸಿದ್ಧಾಂತವೂ ಜಗತ್ತಿನ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸಫಲವಾಗಿಲ್ಲ. ಇಂದಿಗೂ ಕೂಡ ಈ ಸಿದ್ಧಾಂತಗಳು ಅಲ್ಲಲ್ಲಿ ಪ್ರಚಲಿತವಾಗಿವೆ. ವಿಜ್ಞಾನ ಮತ್ತು ತಂತ್ರಜ್ಞಾನ ಒಡ್ಡಿರುವ ಸಂಕೀರ್ಣವಾದ ಸವಾಲುಗಳನ್ನು ಎದುರಿಸುವಲ್ಲಿ ಇವು ವಿಫಲವಾಗಿವೆ. ಈ ಸಿದ್ಧಾಂತಗಳನ್ನು ಪ್ರತಿಪಾದಿಸಿದ ದೇಶಗಳಲ್ಲಿಯ ಸರ್ಕಾರಗಳು ಹೇಳ ಹೆಸರಿಲ್ಲದೆ ಹೋದವು. ಬಂಡವಾಳವಾದ ಇದೆಯಾದರೂ ಅದು ಹೆಚ್ಚು ಹೆಚ್ಚು ಸಮಸ್ಯೆಗಳನ್ನು ಸೃಷ್ಟಿಸುವುದರಲ್ಲಿ ಸಫಲವಾಗಿದೆಯೇ ಹೊರತು ಕಡಿಮೆ ಮಾಡುವುದರಲ್ಲಿ ಅಲ್ಲ. ಉಳಿದ ಇಸ್ಲಂಗಳು ತಮ್ಮ ಪ್ರಸ್ತುತತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿವೆ, ಇಲ್ಲವೆ ಅವುಗಳಿಗೆ ಯಾವುದೇ ಭವಿಷ್ಯವಿಲ್ಲವಾಗಿದೆ. ಆದರೆ ಇಡೀ ಜಗತ್ ಅಂಗೀಕರಿಸಬಹುದಾದ ಒಂದು ರಾಜಕೀಯ ಸಿದ್ಧಾಂತದ ಅಗತ್ಯವಂತೂ ಇದ್ದೆ ಇದೆ. ಸಮಾಜ ಜೀವನ ವ್ಯವಸ್ಥಿತವಾಗಿ ನಡೆದುಕೊಂಡು ಹೋಗಲು ಅಂಥ ಸಿದ್ಧಾಂತ ಬೇಕೆ ಬೇಕು. ಅಂಥ ಸಿದ್ಧಾಂತದ ಕೊರತೆಯನ್ನು ಗಾಂಧೀ ತುಂಬಿಕೊಟ್ಟಿದ್ದಾರೆ. ಅದಕ್ಕಾಗಿ ನಾವು ಗಾಂಧೀಯವರಿಗೆ ಕೃತಜ್ಞರಾಗಿರಬೇಕು. ಆ ಸಿದ್ಧಾಂತದ ಹೆಸರು ಸರ್ವೋದಯ ಸಿದ್ಧಾಂತ ಅಂದರೆ ಎಲ್ಲರ ಉದಯದ ಸಿದ್ಧಾಂತ. ಈ ಸಿದ್ಧಾಂತದ ನೈತಿಕ ನೆಲಗಟ್ಟನ್ನು ಅಮೇರಿಕಾದ ಅಧ್ಯಕ್ಷ ಒಬಮಾ ಆಗಲಿ ರಷಿಯಾ ಪ್ರಧಾನಿ ಪುಟಿನ ಆಗಲಿ ಅಲ್‌ಖೈದಾ ಮುಖಂಡನಾಗಲಿ, ಲಷ್ಕರ್ ತೋಬಾ ಇನ್ನುಳಿದ ದೇಶದ ಯಾವುದೆ ರಾಜಕೀಯ ವಿಧ್ವಂಸಕ ಮುಖಂಡರಾಗಲೀ ಪ್ರಶ್ನಿಸಲಾರರು. ಉದ್ದೇಶಿತ ಯುದ್ಧ ಶಸ್ತ್ರಾಸ್ತ್ರಗಳ ಸಂಗ್ರಹದ ಕಾರಣದಿಂದ ಮತ್ತು ಜಾಗತಿಕ ಹಣಕಾಸಿನ ಅವನತಿಯ ಕಾರಣದಿಂದ ಜಾಗತೀಕರಣದಿಂದಾಗಿ ಜೀವನದ ಹಳೆಯ ಮೌಲ್ಯಗಳು ಕಣ್ಮರೆಯಾಗಿ ಅನ್ಯೆತಿಕತೆ ಹೆಚ್ಚಾಗುತ್ತಿರುವಾಗ ಸರ್ವೋದಯ ಸಿದ್ಧಾಂತವನ್ನು ಜಾಗತೀಕ ಮುಖಂಡರು ಒಪ್ಪಬೇಕಾದಂಥ ಅನಿವಾರ್ಯತೆ ಉಂಟಾಗಿದೆ. ಸರ್ವೋದಯ ಸಿದ್ಧಾಂತವನ್ನು ಅಂಗೀಕರಿಸುವಲ್ಲಿ ವಿಶ್ವ ರಾಷ್ಟ್ರಸಂಸ್ಥೆಯೇ ಮೊದಲ ರಾಜಕೀಯ ಸಂಸ್ಥೆಯಾಗುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ವಿಶ್ವರಾಷ್ಟ್ರಸಂಸ್ಥೆ ಗಾಂಧೀಯ ಜನ್ಮದಿನವಾದ ಅಕ್ಟೋಬರ್ ೨ರನ್ನು 'ಅಹಿಂಸಾ ದಿನವನ್ನಾಗಿ' ಆಚರಿಸಲು ತೀರ್ಮಾನಿಸಿದೆ. ಅಹಿಂಸೆಯನ್ನು ಒಪ್ಪಿಕೊಂಡ ವಿಶ್ವರಾಷ್ಟ್ರ ಸಂಸ್ಥೆ ಕ್ರಮೇಣ ಸರ್ವೋದಯ ಸಿದ್ಧಾಂತದ ಇತರ ವಿಚಾರಗಳಾದ ಆರ್ಥಿಕ ಸಮಾನತೆ, ಅಂತ್ಯೋದಯ ಅಸ್ಪೃಶ್ಯತೆ, ಸಂಯಮ ಜೀವನ, ಜೀವನ ಶಿಕ್ಷಣ, ವಿಕೇಂದ್ರಿಕರಣ, ಸ್ತ್ರೀಸಮಾನತೆ ಮುಂತಾದ ಸಾಮಾಜಿಕ ಹಾಗೂ ಆರ್ಥಿಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಕಷ್ಟವಾಗಲಾರದು. ಓರ್ವ ಕ್ರಾಂತಿಕಾರಿಯಾಗಿ ಮತ್ತು ಶಾಂತಿದೂತನಾಗಿ ಮತ್ತು ದೂರದರ್ಶಿ ನಾಯಕನಾಗಿ ೨೧ನೇ ಶತಮಾನಕ್ಕೆ ಅತೀವ ಪ್ರಸ್ತುತವಾಗಿ ಗಾಂಧೀ ಬರುತ್ತಾರೆ.

ಕನ್ನಡದ ಮುನ್ನಡೆಗಾಗಿ 'ತಾಯ್ನುಡಿ ಭಾಗ್ಯ'

– *ಎಸ್.ಜಿ.ಸೀತಾರಾಮ್*

ಅನ್ನಭಾಗ್ಯ, ಕ್ಷೀರ ಭಾಗ್ಯ, ಶಾದಿಭಾಗ್ಯ ಮೊದಲಾದ ಹಲವಾರು ನವನವೋತ್ತಮ "ಭಾಗ್ಯ"ಗಳನ್ನು ಸರಣಿಯಲ್ಲಿ ಕರುಣಿಸುತ್ತಿರುವ ಇಂದಿನ ಕರ್ನಾಟಕ "ದ್ರವ" ಸರ್ಕಾರವು (ಕರುಣಾರಸದಲ್ಲಿನ ಹಾರ್ಮೋನ್ ಒಂದರ ಎಡವಟ್ಟಿನಿಂದಾಗಿ, ಘನ ಸರ್ಕಾರವು ಇಂದು "ದ್ರವತೆ"ವೆತ್ತ ಸರ್ಕಾರವಾಗಿ, ಅದರ ಕರುಣಾದ್ರವ್ಯವು ನಿರ್ದಿಷ್ಟ "ಮತಾಗರ"ಗಳೆಡೆಗೆ ಉಕ್ಕಿ ಹರಿಯುತ್ತಿದೆ), ಬಿರುಸಾಗುತ್ತಿರುವ ಗೋಳೀಕರಣದಿಂದಾಗಿ ಗೋಳಿಗೀಡಾಗಿರುವ ಜನಕನ್ನಡದ ಸುಧಾರಣೆಗಾಗಿ, ಕರ್ನಾಟಕದ ಜನಕೋಟಿಗೇ ಕನ್ನಡವನ್ನು ಕಲಿಸುವ "ತಾಯ್ನುಡಿ ಭಾಗ್ಯ" ಎಂಬ ಯೋಜನೆಯೊಂದನ್ನೂ ಈಗ ಹಾಯಿಬಿಡಬೇಕಿದೆ. ಮಂದಿ ಮುಟ್ಟಲಾಗದ ಕನ್ನಡದಲ್ಲಿ ಬೊಜ್ಜುಹೊತ್ತಿಗೆಗಳನ್ನು ಬಿರಬಿರನೆ ಬರೆದುಹಾಕುತ್ತಿರುವ "ಕಣ್ಮಣಿ ಸಾಹಿತಿ"ಗಳಿಗೆ ಬಗೆಬಗೆಯ ಪ್ರಶಸ್ತಿಗಳ ಮೂಲಕ ದಿನನಿತ್ಯ ಲಕ್ಷಾಂತರ ತೆರಿಗೆರೂಪಾಯಿಗಳ ಕನಕಾಭಿಷೇಕ ಮಾಡುವುದರಿಂದಲಾಗಲೀ, ಅಥವಾ ಕನ್ನಡದ ಹೆಸರಿನಲ್ಲಿ ಪರಿಷತ್ತು–ಪ್ರಾಧಿಕಾರ–ಅಕ್ಯಾಡೆಮಿ–ಮಂಡಳಿ–ಸಮಿತಿ–ವಿದ್ಯಾಲಯ–ಸಮ್ಮೇಳನ–ಜಾತ್ರೆಗಳನ್ನು ಲಂಗುಲಗಾಮಿಲ್ಲದೆ ಹುಟ್ಟುಹಾಕುವುದರಿಂದಲಾಗಲೀ, ಅಥವಾ ಅಮೆರಿಕನ್ನಡವನ್ನು ಮುದ್ದುಮುದ್ದಾಗಿ ಉಲಿಯುವ ಆಮದು ಸಿನಿತಾರೆಗಳನ್ನು ಚುನಾಯಿತರನ್ನಾಗಿಸುವುದರಿಂದಲಾಗಲೀ, ಅಥವಾ ದಪ್ಪದಪ್ಪ ಸಂಸ್ಕೃತ ಶಬ್ದಗಳನ್ನು (ಅಪಧಮನಿ, ಹೃತ್ಕುಕ್ಷಿ, ಕಿರಣಜನ್ಯಸಂಯೋಜನ ಕ್ರಿಯೆ, ಅಭಿಸರಣ ಶ್ರೇಢಿ, "ಆರಕ್ಷಕ ಮಹಾಅಧೀಕ್ಷಕ ಪರಮನಿರೀಕ್ಷಕ ಅತಿಭಕ್ಷಕ ತೀಕ್ಷ್ಣ ತಕ್ಷಕ," ಇತ್ಯಾದಿ) ಶಾಲಾಬಾಲಕರ ಮತ್ತು ಜನಸಾಮಾನ್ಯರ ಮೇಲೆ ಸಿಡಿಸುವುದರಿಂದಲಾಗಲೀ, ಅಥವಾ ಕಡೆಗೆ ಬಾವುಟ–ಭಾಷಣಗಳನ್ನು ಬಲವಾಗಿ ಬಿಗಿಯುವುದರಿಂದಲಾಗಲೀ, ಕನ್ನಡದ ಏಳ್ಗೆಯಾದೀತು ಎಂಬ ವಿಭ್ರಾಂತಿಯನ್ನು ಬಿಟ್ಟು, ಜನಸಾಮಾನ್ಯರ ದಿನಗನ್ನಡಕ್ಕೆ ಹೆಚ್ಚು ಚಾಲಕಬಲವನ್ನು ಕೊಡುವ ಕೆಲಸವು ಇಂದು ಆಗಬೇಕಿದೆ. "ಕುರಿಗಳು ಸಾರ್, ಕುರಿಗಳು!" ಎಂದು ಮೊದಲೇ ಹೆಸರುವಾಸಿಯಾಗಿದ್ದ ಮಂದೆಮಂದಿಯು ಇಂದು "ಮ್ಯಾಕ್‌ಬರ್ಗರ್"ನಲ್ಲಿರುವ ಅಮೆರಿಕುರಿ ಅಂಶದಿಂದಾಗಿ ಬೆಳೆಸಿಕೊಂಡಿರುವ ವಿಚಿತ್ರ "ಆಡು"ಭಾಷೆಯ (ಇದನ್ನೇ "ಗಿಣಿಕನ್ನಡ" ಎಂದು ಲಾಲಿಸಿ, ಇಲ್ಲವೇ "ನಾಯ್ನುಡಿ" ಎಂದು ಲೇವಡಿಸಿ) ಸವಾಲಿಗೆ ಇಂದು ಸಮರ್ಥ ಜವಾಬನ್ನು ನೀಡಬೇಕಾಗಿದೆ.

"ಆಂಗ್ಲಭಾಷಾ ಫಲಕಗಳಿಗೆ ಡಾಂಬರಿನ ಅರ್ಚನೆ ಮಾಡಿದ ಮಾತ್ರಕ್ಕೆ ಕನ್ನಡಮ್ಮನು ಒಲಿದು, ಆ ಫಲಕಗಳನ್ನು ಒಡನೆಯೇ ಸೀಳಿಬಂದು, ಕನ್ನಡಿಗರನ್ನು ಪೊರೆಯುವಳು" ಮತ್ತು "ವಾಹನಗಳ ಮೇಲೆ ಕನ್ನಡ ಅಂಕಿಗಳನ್ನು ಆಡಿಸಿದ ಮಾತ್ರಕ್ಕೆ ಕನ್ನಡ ರಾಜ್ಯೇಶ್ವರಿಯು ಕರ್ನಾಟಕರೆಲ್ಲರ ನಾಲಿಗೆಗಳ ಮೇಲೆ ಕುಣಿಕುಣಿದಾಡುವಳು" ಎಂಬ "ಬೋರ್ಡ್ ಮೆಂಬರು"ಗಳ ನುಡಿಕುರುಡನ್ನೂ, ಅಂತೆಯೇ, "ಕನ್ನಡ 'ವೇ'

(ದಾರಿ) ಸತ್ಯ; ಉಳಿದ 'ವೇ' ಎಲ್ಲ ಮಿಥ್ಯ" ಎಂಬ ಕನ್ನಡಾದ್ವೈತ ಅತಿರೇಕವನ್ನೂ ನಿವಾರಿಸುವುದು ಇದೇ ಸಮಯ ಅಗತ್ಯವಾಗಿದೆ. ಈಗಾಗಲೇ ಭಾಷಾಧಾರಿತ "ದ್ವೀಪಾವಳಿ" ಆಗಿ ಕೂತಿರುವ ಭಾರತದ ಒಕ್ಕೂಟವು ಮತ್ತೆ ಛಪ್ಪನ್ನಾರು ಸೀಳುನಾಡುಗಳ ಯುಗಕ್ಕೆ ಜಾರಿಬೀಳದಂತೆ ಕಾಪಿಟ್ಟುಕೊಳ್ಳಬೇಕಿದೆ.

*** ಷಡ್ಕೋಟಿ ಕನ್ನಡಿಗರೂ ಕ–ನ್ನ–ಡ ಎಂಬ ಮೂರು ಅಕ್ಷರಗಳನ್ನು ಮುಂದಿನ ರಾಜ್ಯೋತ್ಸವದ ಸಮಯಕ್ಕಾದರೂ ತಪ್ಪಿಲ್ಲದೆ ಓದಿಬರೆಯುವಂತಾಗಲಿ! ***

*** ನಾವಾಡುವ ಗಂಧದ ನುಡಿಯು ನಾಡಾಡುವ ಚಂದದ ನುಡಿಯಾಗಲಿ! ***

*** ಹಚ್ಚೇವು ಕನ್ನಡದ ದೀಪ! ಹಂಚೇವು ತಾಯ್ನುಡಿಯ ಇಂಪ!! ***

("ಹಚ್ಚಿದರೆ ಹಚ್ಚೇವು/ಬಿಟ್ಟರೆ ಬಿಟ್ಟೇವು/ಯಾವ ಬತ್ತಿಯನಾದರೂ ಹಚ್ಚೇವು ಯಾ ಇಟ್ಟೇವು/ನಿಮಗೇಕೆ ತವಕ?" ಎಂದೆನ್ನುವವರೂ ಉಂಟು. ಅಂಥವರಿಗೆ ಕನ್ನಡಮ್ಮನೇ ಕನ್ನಡಕ ನೀಡಿ ಮುನ್ನಡೆಸಲಿ!)

ಪಂಡಿತರಿಗೆ ಕೆಲವು ಪ್ರಶ್ನೆಗಳು:

ನವೆಂಬರ್ ೧ ಎನ್ನುವಾಗ "ನವೆಂಬರ್" ಎಂಬುದೇ ಇಂಗ್ಲಿಷ್/ಲ್ಯಾಟಿನ್ ಆಯಿತಲ್ಲ, ಇದಕ್ಕೆ ಕನ್ನಡದಲ್ಲೊಂದು ಶಬ್ದವೇ ಬೇಕಿಲ್ಲವೇ? "ಕಾರ್ತಿಕ" ಎನ್ನುವಿರಾದರೆ, ಅದು ಸಂಸ್ಕೃತವಾಯಿತು. ಅದೂ ಅಲ್ಲದೆ, ರಾಜ್ಯೋತ್ಸವವೇನೂ ಕಾರ್ತಿಕ ಪಾಡ್ಯಮಿಯಂದೇ ಬರಬೇಕೆಂದಿಲ್ಲವಾದ್ದರಿಂದ, "ನವೆಂಬರ್ ೧" ಎನ್ನುವುದನ್ನು ಕನ್ನಡಿಸುವುದಾವರೂ ಹೇಗೆ? ಹಾಗೆ ನೋಡಿದರೆ, "ರಾಜ್ಯೋತ್ಸವ" ಎಂಬುದೂ ಸಂಸ್ಕೃತವೇ! ಇದನ್ನು ಕನ್ನಡದಲ್ಲಿ "ನಾಡ ಹುಟ್ಟುಹಬ್ಬ" ಎನ್ನಬಹುದೇನೋ! ಆದರೆ, ಬಳಕೆಯ ದೃಷ್ಟಿಯಿಂದ ಇದರ ಉದ್ದ ಸಾಧುವೇ?

ಕನ್ನಡ ಮೆರವಣಿಗೆಯ ಬಹುತೇಕ ಎಲ್ಲ ದೀವಟಿಗರೂ ಇಂದು "ಡಾ." ಆಗಿದ್ದಾರೆ. (ಇವರಲ್ಲಿ "ಗೌ. ಡಾ." ಅರ್ಥಾತ್ "ಗೌರವ ಡಾಕ್ಟರೇಟ್" ಗಿಟ್ಟಿಸಿದವರೇ ಬಹಳಷ್ಟಿದ್ದಾರೆಂಬುದು ಬೇರೆ ಮಾತು.) ವ್ಯಾಮೋಹಗಳನ್ನು ಮೀರಿರುವರೆನ್ನಲಾಗುವ ಸ್ವಾಮಿಸನ್ಯಾಸಿಗಳೂ ಇಂದು ಹೆಚ್ಚೆಚ್ಚು "ಡಾ. ಮೋಹ"ಕ್ಕೊಳಗಾಗುತ್ತಿದ್ದಾರೆ. ('ಡಾ.' ಶಬ್ದವು ಎಷ್ಟು ಗೌರವಾನ್ವಿತ ಎಂಬುದು ನಮ್ಮ ಕಲ್ಯಾಣನಗರಿಯ ಕಂಟೋನ್ಮೆಂಟ್ ಕನ್ನಡಿಗರಿಗೆ ಚೆನ್ನಾಗಿ ಗೊತ್ತು.) ಆದರೆ, ಹೀಗೆ "ಡಾ." ಹೊತ್ತು ತಿರುಗಾಡುತ್ತಿರುವ ಕನ್ನಡಾಭಿಮಾನಿಗಳಿಗೆ, "ಡಾ." ಎಂಬುದಕ್ಕೆ ಕನ್ನಡದಲ್ಲಿ ಸಮಾನಶಬ್ದವೊಂದನ್ನು ಟಂಕಿಸಲು ಅಥವಾ ಒಪ್ಪಿಕೊಳ್ಳಲು ಇನ್ನೂ ಆಗಿಲ್ಲವೇ? ("ಡಾ." ಎಂಬುದಕ್ಕೆ ಬದಲಾಗಿ "ಪಂ." ಎಂದರೆ ಪಂಡಿತ, ಅಥವಾ "ವಿ" ಎಂದರೆ ವಿದ್ವಾನ್ ಎಂದೆಲ್ಲ ಎನ್ನಬಹುದೇನೋ! ಆದರೆ, ಇಂಥ "ಬೆಡಗಿಲ್ಲದ ಲೋಕಲ್ ಬಿರುದು"ಗಳನ್ನು ಇಷ್ಟಪಡುವವರೆಷ್ಟು ಮಂದಿ? ಹಾಗೆಯೇ, ಪ್ರೊಫೆಸರ್ ಆದವರು "ಪ್ರೊ॥" ಎಂದಲ್ಲದೆ, "ಪ್ರಾ॥" ಎಂದೆನಿಸಿಕೊಳ್ಳಲು, ಮತ್ತು ದೊಡ್ಡವರೆನಿಸಿಕೊಂಡವರು "ಸಾರ್/ಮೇಡಂ"ಗೆ ಬದಲಾಗಿ "ಸ್ವಾಮಿ/ಅಮ್ಮ" ಎಂದು ಕರೆಸಿಕೊಳ್ಳಲು ಒಪ್ಪುವುದನ್ನು ಎಷ್ಟರ ಮಟ್ಟಿಗೆ ನಿರೀಕ್ಷಿಸಬಹುದು?)

* * *

ಮಿಂಚಿದ ಚಿಂತನೆಗಳ ಗೊಂಚಲು

– ಎಮ್.ರಾಘವೇಂದ್ರ

(ಅಕ್ಟೋಬರ್ ತಿಂಗಳಲ್ಲಿ ಕುಪ್ಪಳಿಯಲ್ಲಿ 'ಇಂದು ನಮಗೆ ಬೇಕಾದ ಗಾಂಧೀ' ವಿಷಯ ಕುರಿತು ನಡೆದ ಅಧ್ಯಯನ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಮಂಡಿಸಲಾದ ವಿಚಾರಗಳ ಸಾರಾಂಶ ಈ ಲೇಖನ. - ಸಂ)

"ಗಾಂಧೀಗೆ ಹತ್ತಿರವಾಗಬೇಕೆಂದರೆ ಶ್ರಮ ಸಂಸ್ಕೃತಿಗೆ ಹತ್ತಿರವಿರುವುದು ಅನಿವಾರ್ಯ. ಆದರೆ, ಇಂದು ನಾವು ಯಂತ್ರ ನಾಗರೀಕತೆಯ ಸೌಲಭ್ಯಗಳಲ್ಲಿ ಸಂಭ್ರಮಿಸುತ್ತಾ ಸುಲಭ ಜೀವನ ಮಾರ್ಗವನ್ನು ಆಯ್ದುಕೊಂಡಿದ್ದೇವೆ. ನಮ್ಮ ಎಲ್ಲ ಸಮಸ್ಯೆಗಳಿಗೆ ರಾಜಕಾರಣಿಗಳೇ ಕಾರಣ ಎಂದು ದೂರುವ ಬದಲು ಸಾಧ್ಯವಾದಷ್ಟು ಮಟ್ಟಿಗೆ ಯಂತ್ರಗಳನ್ನು ಕಳಚುತ್ತಾ ಹೋದರೆ ಸಾಕಾರಗೊಳಿಸಿದಂತೆ."

– ಪ್ರಸನ್ನ

"ಹಣ ಆಧಾರಿತ ಶ್ರೀಮಂತಿಕೆ ಅಭಿವೃದ್ಧಿಯ ಸಂಕೇತವಲ್ಲ. ನೆಮ್ಮದಿಯ, ಸಮಾನತೆಯ ಅಂಶಗಳನ್ನೊಳಗೊಂಡ ವಿಕಾಸದ ಮಾರ್ಗ ನಮ್ಮದಾಗಬೇಕು."

– ಉ.ಜ.ರಾಮ

"ಯಂತ್ರಗಳ ಬಳಕೆಗೆ ಕಡಿವಾಣ ಹಾಕದೇ ಇದ್ದಲ್ಲಿ ಬಹುಪಾಲು ಬಡಜನತೆ ನಗರಗಳೆಂಬ ಹಾಳು ಕೊಂಪೆಗಳಿಗೆ ಹೋಗಬೇಕಾದೀತು."

– ಕಡಿದಾಳು ಶಾಮಣ್ಣ

"ಜಾಗತೀಕರಣದಿಂದ ನಮ್ಮ ಸಾಂಘಿಕ ಬದುಕು ನಾಶವಾಗಿ ಅಸಮಾನತೆ ಸೃಷ್ಟಿಯಾಗುತ್ತಾ ಅದರ ಪರಿಣಾಮವಾಗಿ ಹೊಸ ಹೊಸ ಹಿಂಸೆಯ ರೂಪಗಳು ಕಾಣತೊಡಗಿವೆ. ಆಧುನಿಕ ನಾಗರೀಕತೆಯ ಈ ಚಹರೆಗಳನ್ನು ಮುನ್ನೋಡಿದ ಗಾಂಧೀ ಇದಕ್ಕೆ ಪ್ರತಿಯಾಗಿ ಮಂಡಿಸಿದ್ದ ವಿಚಾರ ಮತ್ತು ನಡೆಸಿದ್ದ ಪ್ರಯೋಗಗಳನ್ನು ಯುವ ಜನತೆಗೆ ಪರಿಚಯಿಸುವುದು ಈ ಶಿಬಿರದ ಉದ್ದೇಶ್ಯವಾಗಿದೆ."

– ಡಿ.ಎಸ್.ನಾಗಭೂಷಣ್

"ಬ್ರಿಟಿಷರು ತಮ್ಮ ಆಧುನಿಕ ದೃಷ್ಟಿಕೋನದ ಭಾಗವಾಗಿ ಭಾರತದ ಉದ್ಧಾರಕ್ಕೆಂದು ಭಾರತದ ಚರಿತ್ರೆಯನ್ನು 'ಉತ್ಪಾದಿಸಿದ' ರೀತಿಯಲ್ಲಿ ರಾಷ್ಟ್ರ ವಿಭಜನೆಯ ಬೀಜಗಳು ಅಡಗಿದ್ದು ಅದನ್ನು ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳಿಬ್ಬರೂ ಸ್ವಾರ್ಥಕ್ಕಾಗಿ ಬಳಸಿಕೊಂಡರು. ಇದನ್ನು ತಪ್ಪಿಸಲು ಯತ್ನಿಸಿದ ಗಾಂಧಿಯೇ ಇದಕ್ಕೆ ಬಲಿಯಾದುದು ಒಂದು ವಿಪರ್ಯಾಸ."

– ಡಾ. ನಿತ್ಯಾನಂದ ಬಿ.ಶೆಟ್ಟಿ

"ಜಾತಿ ವ್ಯವಸ್ಥೆಯ ಕ್ರೌರ್ಯವನ್ನು ಅರ್ಥಮಾಡಿಕೊಳ್ಳಲು ಗಾಂಧೀ ವಿಫಲರಾದದ್ದೇ ಅಂಬೇಡ್ಕರ್ ಸಂಘರ್ಷಕ್ಕೆ ಇಳಿಯಲು ಕಾರಣವಾಯಿತು. ಪೂನಾ

ಒಪ್ಪಂದ ಹಿಂದೂ ಧರ್ಮ ಕುರಿತಾದ ಈ ಇಬ್ಬರ ಮಹಾನ್ ಚಿಂತನೆ ಮತ್ತು ನಿಲುವುಗಳ ನಡುವಣ ಅನಿವಾರ್ಯ ರಾಜಿಯ ರೂಪದಲ್ಲಿ ಕಾಣುತ್ತಿದ್ದು, ಇದರಿಂದಾಗಿ ಇಂದಿಗೂ ದಲಿತ ರಾಜಕಾರಣ ತನ್ನ ನಿಜನೆಲೆಯನ್ನು ಕಂಡುಕೊಳ್ಳಲಾಗುತ್ತಿಲ್ಲ. ಇಂದು ಭಾರತ ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರನ್ನೂ ಒಟ್ಟಿಗೆ ಗ್ರಹಿಸಿ ತನ್ನ ಹೊಸ ರಾಜಕಾರಣವನ್ನು ಕಟ್ಟಿಕೊಳ್ಳುವ ಅಗತ್ಯವಿದೆ."

– ಡಾ. ವಾಸುದೇವ ಬೆಳ್ಳೆ

"ಭಾರತೀಯ ಸಮಾಜದೊಳಗಿನ ಸಾಮಾಜಿಕ ಮತ್ತು ಆರ್ಥಿಕ ವತ್ಯಾಸಗಳನ್ನು ಕಾಂಗ್ರೆಸ್ ಗಮನಿಸುತ್ತಿಲ್ಲ ಎಂದು ಭಾವಿಸಿ ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದು ಬಂದಿದ್ದ ಜೇಪಿಯವರ ನೇತೃತ್ವದಲ್ಲಿ ಕಾಂಗ್ರೆಸ್‌ನೊಳಗೆ ಸಮಾಜವಾದಿ ಪಕ್ಷವೊಂದನ್ನು ಕಟ್ಟಿಕೊಂಡ ಕೆಲವರು ನಂತರ ಗಾಂಧೀಯೊಂದಿಗೆ ಸಂವಾದಿಸುತ್ತಾ ಮಾರ್ಕ್ಸ್‌ವಾದಿ ಸಮಾಜವಾದದ ನೆಲೆಯಿಂದ ದೂರ ಸರಿದು ಭಾರತೀಯ ಸಮಾಜವಾದದ ವಿವಿಧ ಆವೃತ್ತಿಗಳನ್ನು ರೂಪಿಸಿದರು. ಮುಖ್ಯವಾಗಿ ಆಚಾರ್ಯ ನರೇಂದ್ರದೇವ, ಜೇಪಿ ಮತ್ತು ಲೋಹಿಯಾರವರು ನಡೆಸಿದ ಭಾರತೀಯ ಸಮಾಜವಾದಿ ಚಳುವಳಿ ಗಾಂಧೀಗಿಂತ ಮುಖ್ಯವಾಗಿ ರಾಜಕೀಯ ನೈತಿಕತೆಯ ಆಯಾಮ ಪಡೆದು ತನ್ನದೇ ತಂತ್ರಜ್ಞಾನ ಮತ್ತು ವಿಕೇಂದ್ರೀಕರಣ ತತ್ವಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು."

– ಡಾ. ರಾಜಾರಾಂ ತೋಳ್ಪಾಡಿ

"ಗಾಂಧೀಜಿ ಮೊದಲಬಾರಿಗೆ ಮಂಗಳೂರಿಗೆ ಬಂದಾಗಲೇ ತಳವರ್ಗದ ಮಹಿಳೆಯರಿಗೆ ಹೊರಜಗತ್ತಿನ ಪ್ರವೇಶ ಸಿಕ್ಕಿದ್ದು; ಇಂತಹ ಹಲವು ಸಾಮಾಜಿಕ ಬದಲಾವಣೆ ಹಾಗೂ ಸಂಚಲನಗಳಿಗೆ ಗಾಂಧೀ ಕಾರಣವಾದದ್ದನ್ನು ಇಂದಿನ ತಲೆಮಾರಿಗೆ ದಾಟಿಸುವ ಉದ್ದೇಶ 'ಗಾಂಧೀ ಬಂದ' ಕಾದಂಬರಿಯದ್ದಾಗಿದೆ."

– ಡಾ. ಎಚ್.ನಾಗವೇಣಿ

"ನಿರ್ದಿಷ್ಟವಾದ ಚರಿತ್ರೆಯ ಸಂದರ್ಭದಲ್ಲಿ ಪ್ರತಿಕ್ರಿಯೆ ರೂಪದಲ್ಲಿ ಹುಟ್ಟಿದ ಗಾಂಧೀವಾದವನ್ನು ಗ್ರಹೀತದ ಗಡಿರೇಖೆಗಳನ್ನು ನೋಡಿದರೆ ಹಾದಿ ತಪ್ಪುತ್ತೇವೆ. ಕೈಗಾರೀಕರಣದ ಪ್ರಕ್ರಿಯೆಯ ಭಾಗವಾಗಿ ಹುಟ್ಟಿದ ಬಂಡವಾಳಶಾಹಿಯು ತನ್ನ ಮಾರುಕಟ್ಟೆಯ ಅನ್ವೇಷಣೆಯಲ್ಲಿ ಸಾಮ್ರಾಜ್ಯಶಾಹಿಯ ರೂಪತಾಳಿತು. ಈ ಶೋಷಕ ರಾಜಕಾರಣವನ್ನು ಪಾಶ್ಚಾತ್ಯ ಆಧುನಿಕತೆಯ ಯಂತ್ರ ಸಾಧನಗಳಲ್ಲಿ ಗುರುತಿಸಿ ಭಾರತ ಪಶ್ಚಿಮಕ್ಕೆ ಮರುಳಾಗಿದ್ದೇ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಕಾರಣವಾಯಿತು. ಗಾಂಧೀಯ 'ಹಿಂದ್ ಸ್ವರಾಜ್'ದ ಸ್ಫೂರ್ತಿಯಲ್ಲೇ ಇಂದು ನಮ್ಮನ್ನು ನವಸಾಮ್ರಾಜ್ಯಶಾಹಿಯಾಗಿ ಆವರಿಸಿರುವ ಜಾಗತೀಕರಣವನ್ನು ಎದುರಿಸಬೇಕಾಗಿದೆ."

– ಡಾ.ರಾಜೇಂದ್ರ ಚೆನ್ನಿ

"ವಸ್ತು ಮತ್ತು ಸಂಪತ್ತಿನ ಸಂಗ್ರಹಣೆಯೇ ಸಮೃದ್ಧಿಯ ಸಂಕೇತ ಎಂದು ಭಾವಿಸುವ ನಾಗರೀಕತೆಗಿಂತ ಮಾನವ ಕೇಂದ್ರಿತ ಸಹಬಾಳ್ವೆಯ ನಾಗರೀಕತೆ ನಮ್ಮದಾಗಬೇಕು."

– ಡಾ. ಎ.ಎನ್.ನಾಗರಾಜ್

(ಸಾಭಾರ : ಹೊಸ ಮನುಷ್ಯ)

ಭೂಮಿ ಮತ್ತು ಹಸಿವಿನ ಸವಾಲು

- ಡಾ.ಟಿ.ಎಸ್.ಚನ್ನೇಶ್

ಭೂಮಿಯನ್ನೂ ಕಾಪಾಡಿ, ಜಗತ್ತಿಗೆ ಉಣಿಸಲು ಆದೀತೆ? ಇಂತಹದ್ದೊಂದು ಪ್ರಶ್ನೆಯನ್ನು ಜಗತ್ತಿನಾದ್ಯಂತ ಪ್ರಾಜ್ಞರು ಕೇಳುತ್ತಿದ್ದಾರೆ. ಮಾತ್ರವಲ್ಲ, ನಮ್ಮಲ್ಲೂ ಹಿರಿಯ ವಿಜ್ಞಾನಿಗಳೂ, ವಿದ್ವಾಂಸರೂ, ಕೃಷಿ ಚಿಂತಕರೂ, ಅವರ ಜೊತೆ ಕೈಜೋಡಿಸಲು ಇಲ್ಲಿನ ಜನಪರ ವಿಜ್ಞಾನಿಗಳು ಕರೆಯಿತ್ತಿದ್ದಾರೆ. ಕಾರಣ ಇಷ್ಟೇ. ನಮ್ಮೆಲ್ಲಾ ಅಭಿವೃದ್ಧಿ ನಿರ್ವಹಣೆಗಳೂ ಪರಿಸರವನ್ನು ಕಡೆಗಾಣಿಸುತ್ತಾ ಕೇವಲ ಇಂದಿನ ಲಾಭವನ್ನೇ ಪ್ರಮುಖವಾಗಿ ನೋಡುತ್ತವೆ. ಹಾಗಾಗಿ ಇನ್ನು ಮುಂದಿನ ದಿನಗಳಲ್ಲಿ ಅದರಲ್ಲೂ ಮುಖ್ಯವಾಗಿ ೨೦೫೦ರ ವೇಳೆಗೆ ಜಾಗತಿಕ ಕೃಷಿಕರಿಂದ ಈಗಿರುವುದಕ್ಕಿಂತಲೂ ಕನಿಷ್ಠ ೨೦೦ ಕೋಟಿ ಹೆಚ್ಚು ಜನರಿಗೆ ಊಟವನ್ನು ಇರುವಷ್ಟೇ ನೆಲದಿಂದ ಹೊಂಚಬೇಕಿದೆ. ಅದರ ಜೊತೆಗೇ ನಮ್ಮ ನೆಲವನ್ನೂ ಮುಂದಿನ ಪೀಳಿಗೆಗೆ ಇರುವಂತೆಯೇ ಕೊಡಬೇಕಿದೆ. ಇಂತಹದ್ದೊಂದು ಪ್ರಶ್ನೆ ಎತ್ತಿ ನಮ್ಮ ರೈತರನ್ನು ದಂಗು ಬಡಿಸುವ ಉದ್ದೇಶವಲ್ಲ, ಬದಲಿಗೆ ಇರುವಷ್ಟೇ ಸಂಪನ್ಮೂಲದಿಂದ ಇದನ್ನು ನಿಭಾಯಿಸುವುದು ಹೇಗೆ –ಎಂಬ ಉತ್ತರಗಳ ಹುಡುಕಾಟದಲ್ಲಿ ತೊಡಗುವುದಾಗಿದೆ. ಈಗಲೇ ಪ್ರಪಂಚದಲ್ಲಿ ಏನಿಲ್ಲವೆಂದರೂ ಸುಮಾರು ೧೦೦ ಕೋಟಿ ಜನ ಹಸಿವಿನಿಂದ ಕಂಗಾಲಾಗುತ್ತಿದ್ದಾರೆ. ಅದಕ್ಕೆ ಇನ್ನೂ ಎರಡರಷ್ಟು ಮಂದಿ ಸೇರುವುದು ಇನ್ನು ಕೇವಲ ನಲವತ್ತೇ ವರ್ಷದಲ್ಲಿ ಎಂಬ ಆತಂಕದಿಂದ, ಇಂತಹ ಪ್ರಶ್ನೆಯು ಬಹುಪಾಲು ಜನಪರ, ಜೀವಪರ ಕೃಷಿವಿಜ್ಞಾನಿಗಳ ಕಾಡುತ್ತಿದೆ.

ಕೃಷಿಯೋಗ್ಯ ಭೂಮಿಯ ಸಂಪೂರ್ಣ ಬಳಕೆ ಈಗಾಗಲೇ ಆಗಿರುವುದು ಈ ಆತಂಕದ ಪ್ರಮುಖ ಮೂಲ. ಇನ್ನು ಹೆಚ್ಚಿಸಲಾಗದು. ನೆಮ್ಮದಿಯ ನಾಳೆಗಳಿಗೆ ಇಂದೇ ಒಂದಷ್ಟು ತಯಾರಿ ಬೇಕೇ ಬೇಕು ಎಂಬುದು ವಿಜ್ಞಾನಿಗಳ ಲೆಕ್ಕಾಚಾರ. ನಮ್ಮ ಎಲ್ಲಾ ನಗರಗಳೂ, ಕೃಷಿ ನೆಲವನ್ನು ನುಂಗಿಯೇ ಬೆಳೆಯುತ್ತಿರುವುದರಿಂದ, ಮತ್ತು ಅಂತಹ ನೀತಿಗಳನ್ನೇ ನಮ್ಮ ಆಡಳಿತವೂ ಬೆಂಬಲಿಸುತ್ತಿರುವುದರಿಂದ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಕೃಷಿಯಿಂದ ಇಂದು ನಾವು ಗೋಡೆಗಳ ಮುಟ್ಟಲಾಗುತ್ತಿದೆಯೇ ವಿನಾಃ ಸೂರನ್ನು ತಲುಪಲಾಗುತ್ತಿಲ್ಲ ಎಂಬುದು ವಾಸ್ತವ. ನಮ್ಮ ನೆಲಕ್ಕೆ ನೀರುಣಿಸುವ ಭರದಲ್ಲಿರುವ ಅಣೆಕಟ್ಟೆಗಳ ಕಟ್ಟುವ ಉತ್ಸಾಹ, ಅವುಗಳಿಗೆ ನೀರುಣಿಸುವ ನದಿಗಳ ಜಲಾನಯನ ಪ್ರದೇಶದ ಅಭಿವೃದ್ಧಿಗೆ ಇಲ್ಲದಿರುವ ಕುರಿತು ಆಲೋಚಿಸಬೇಕಾಗಿದೆ. ಹೆಚ್ಚಿನ ಇಳುವರಿಗೆಂದು ನಾವು ಬಳಸುವ ರಸಗೊಬ್ಬರಗಳಲ್ಲಿ ಅರ್ಧಕ್ಕಿಂತ ಹೆಚ್ಚು ಸಸ್ಯಗಳ ಬೆಳವಣಿಗೆಗೆ ಸಿಗುತ್ತಿಲ್ಲ. ಬದಲಿಗೆ ಹಾನಿ ಮಾಡುವ ರಸಾಯನಿಕಗಳಾಗಿ ನೀರು–ನೆಲವನ್ನು ಸೇರುತ್ತಿದೆ. ಇವುಗಳಿಂದ ಒಂದಷ್ಟು ಮಲಿನತೆ ಭೂಮಿಯನ್ನು ಕಾಡುತ್ತಿದೆ. ನಾವು ಬೆಳೆದ ಆಹಾರ ಜನರ ಕೈಸೇರಿದರೆ ಅವರನ್ನು ಉಣಿಸುವುದು ಕಷ್ಟವೇನಲ್ಲ. ಬೆಳೆದ ಬೆಳೆಯ ೬೦% ಮಾತ್ರವೇ ಜನರ ಆಹಾರವಾಗಿದೆ. ಪ್ರಾಣಿಗಳ ಆಹಾರಕ್ಕೆಂದು ಶೇ೩೫ರಷ್ಟು ಖರ್ಚಾದರೇ, ಶೇ೫ರಷ್ಟು ಜೈವಿಕ ಇಂಧನಕ್ಕಾಗಿ ಬಳಕೆಯಾಗುತ್ತಿದೆ. ಪ್ರಾನಿ ಸಾಕಣಿಕೆಗೆ ಸಾಕಷ್ಟು ಆಹಾರ ಧಾನ್ಯಗಳನ್ನೂ ಬಳಸುವುದು ನಮ್ಮ ಆಹಾರ ಉತ್ಪಾದನೆಯ ಮೇಲೆ ಸಾಕಷ್ಟು ಹೊರೆ ಬೀಳುತ್ತದೆ. ಇವನ್ನೆಲ್ಲಾ ನಿಭಾಯಿಸಿಕೊಂಡು ಜಗತ್ತಿನ ಮೂರು ಮುಖ್ಯ ಆಹಾರದ ಸಮಸ್ಯೆಯನ್ನು ಏಕಕಾಲದಲ್ಲಿಯೇ ನಿವಾರಿಸಬೇಕಿದೆ.

ಅವೆಂದರೆ ಹಸಿವನ್ನು ಕೊನೆಗಾಣಿಸುವುದು, ೨೦೫೦ರವೇಳೆಗೆ ಆಹಾರದ ಉತ್ಪಾದನೆಯನ್ನು ಎರಡುಪಟ್ಟು ಮಾಡುವುದು ಮತ್ತು ಕೃಷಿಯಿಂದಾಗುವ ಪರಿಸರನಾಶವನ್ನು ಗಣನೀಯವಾಗಿ ಕಡಿಮೆಮಾಡುವುದು.

ಆದುನಿಕ ಕೃಷಿಯು ಅತ್ಯಂತ ಪ್ರಬಲವಾದ ಅಭಿವೃದ್ಧಿ ಅಸ್ತ್ರವಾಗಿದ್ದು ಇನ್ನು ಮುಂದೆ ಅದೆಂದೂ ಅದೇ ಸ್ವರೂಪದಲ್ಲಿ ಸಹಾಯವಾಗಲಾರದು. ಕೃಷಿ ನೆಲದ ವಿಸ್ತರಣೆಯಿಂದ ಇನ್ನು ಮುಂದೆ ಇಳುವರಿ ಹೆಚ್ಚಿಸಲಾಗದು. ನಗರಾಭಿವೃದ್ದಿಯ ನೆಪದಲ್ಲಿ ಕಳೆದುಕೊಳ್ಳುತ್ತಿರುವ ಉಳುಮೆಯ ನೆಲವನ್ನು ಕಡ್ಡಾಯವಾಗಿ ಸಂರಕ್ಷಿಸಬೇಕಿದೆ. ಆಧುನಿಕ ಅಭಿವೃದ್ಧಿಯ ಪ್ರಮುಖ ಜಾಲವಾದ ಭೂಕಬಳಿಕೆ ಮತ್ತು ಭೂಪರಿವರ್ತನೆಗಿನ್ನು ತಡೆಯೊಡ್ಡಲೇಬೇಕು. ಕೃಷಿಪರ ಕೆಲಸಮಾಡುವ ಸಂಸ್ಥೆಗಳೂ, ಚಿಂತಕರೂ, ವಿದ್ಯಾಲಯಗಳೂ ಕೃಷಿಅಭಿವೃದ್ಧಿ ಮಾನದಂಡಗಳನ್ನು ಬದಲಿಸಿಕೊಳ್ಳದೆ ಬೇರೆ ಪರಿಹಾರವಿಲ್ಲ. ಜನಸಂಖ್ಯೆಯ ಏರೊತ್ತಡ ಅನುಭವಿಸುವ ದೇಶಗಳಲ್ಲಿ ಭಾರತವು ಮುಂಚೂಣಿಯಲ್ಲಿದೆ. ಇವುಗಳನ್ನೆಲ್ಲಾ ನೀತಿರೂಪಿಸುವ ಆಡಳಿತವರ್ಗ, ರಾಜಕೀಯ ವ್ಯಕ್ತಿಗಳು ನಿಜವಾದ ಅರ್ಥದಲ್ಲಿ ಇವನ್ನು ಜಾರಿಗೆ ತರಬೇಕಿದೆ. ಇಂತಹ ಆರೋಗ್ಯಕರವಾದ ವೈಜ್ಞಾನಿಕ ವಿಶ್ಲೇಷಣೆಯಿರುವ ಮಾಹಿತಿಗಳ ಕ್ರೋಢಿಕರಿಸಿದ ಕೆಲವು ಮುಖ್ಯ ವಾದಗಳು ಜಗತ್ತಿನ ಮುಂದಿವೆ. ಅಮೆರಿಕೆಯ ಮಿನಸೋಟಾ ವಿಶ್ವವಿದ್ಯಾಲಯದ ಜೋನಾಥನ್ ಫೋಲೀ ಎಂಬ ಜನಪರ ವಿಜ್ಞಾನಿಯ ನೇತೃತ್ವದಲ್ಲಿ ಜಗತ್ತಿನ ಶ್ರೇಷ್ಠ ಸಸ್ಯಜೀವವಿಜ್ಞಾನಿಗಳು ಒಂದುಗೂಡಿ ಕೆಲವೊಂದು ಸದಾಶಯದ ಉತ್ತರಗಳನ್ನೂ ಕೊಟ್ಟಿದ್ದಾರೆ. ಅವುಗಳನ್ನು ಪಂಚಸೂತ್ರಗಳೆಂದು ಕರೆದು ಎಲ್ಲರ ಗಮನ ಸೆಳೆವ ಚರ್ಚೆಯನ್ನು ಆರಂಭಿಸಿದ್ದಾರೆ. ಆದರೆ ನಿಭಾಯಿಸುವ ಜವಾಬ್ದಾರಿಯೆಲ್ಲಾ ಎಲ್ಲರದೂ ಎಂಬುದು ಗಮನಾರ್ಹ.

ಪಂಚ ಸೂತ್ರಗಳು:

ಐದು ಸೂತ್ರಗಳಾಗಿರುವ ಈ ವಿಚಾರಗಳ ಕುರಿತು ಓದುಗರೊಡನೆ ಹಂಚಿಕೊಳ್ಳುವುದೇ ಅಲ್ಲದೆ, ನಮ್ಮ ಜವಾಬ್ದಾರಿಗಳತ್ತ ಆಲೋಚನೆ ತೊಡಗುವುದೇ ಇಲ್ಲಿನ ಉದ್ದೇಶ. ಈ ಅಂಶಗಳೆಂದರೆ

೧. ಕೃಷಿನೆಲದ ವಿಸ್ತರಣೆಗೆ ತಡೆ: ಕೃಷಿ ನೆಲವನ್ನು ಹೆಚ್ಚಿಸುವ ತಡೆಗೆ ಉಷ್ಣವಲಯದಲ್ಲಿ ಉತ್ತಮ ಪರಿಣಾಮವನ್ನು ಕಾಣಬಹುದು. ಏಕೆಂದರೆ ಇಲ್ಲಿನ ಕಾಡುಗಳ ವಿನಾಶವನ್ನು ಇದರಿಂದ ತಡೆಯಲು ಸಾಧ್ಯವಾಗುತ್ತದೆ. ನಮ್ಮ ಪರಿಸರದ ಸರಿಯಾದ ರಕ್ಷಣೆಯಿಂದ ಆಹಾರ ಉತ್ಪಾದನೆಯ ಕುಂಠಿತ ಮಾಡದೆ, ಇತರೇ ಆಯಾಮಗಳ ಸರಿಯಾದ ಚಾಲನೆಯಿಂದ ಆಹಾರೋತ್ಪಾದನೆ ಹೆಚ್ಚಿಸುವುದು ಇಂದಿನ ಅಗತ್ಯ. ಈಗಾಗಲೇ ಸಾಕಷ್ಟೇ ನೆಲದ ಬಳಕೆಯಿಂದ ಹೆಚ್ಚುವರಿ ಕೃಷಿ ಮಾಡಲಾಗಿದೆ. ಕಾಡನ್ನೂ ಕಳೆದುಕೊಂಡೂ ಆಗಿದೆ. ಜೊತೆಗೆ ನಗರಗಳು ಬೆಳೆಯುತ್ತಿರುವ ಹಾಗೆಯೂ ಸುತ್ತಮುತ್ತಲಿನ ಕೃಷಿ ಭೂಮಿಯನ್ನು ನುಂಗಿಯೇ ಬೆಳೆಯುತ್ತಿವೆ. ಇವೆಲ್ಲಾ ನಿಲ್ಲ ಬೇಕಿದೆ.

೨. ಇಳುವರಿ ಅಂತರವನ್ನು ಕಡಿಮೆಮಾಡುವುದು: ನಮ್ಮ ರೈತರು ರಾಗಿಯಲ್ಲಿಯೇ ಎಕರೆಗೆ ೬ರಿಂದ ೧೬ ಕ್ವಿಂಟಾಲ್ ವರೆಗೂ ಪಡೆಯುತ್ತಿದ್ದಾರೆ. ಅಂದರೆ ಅಷ್ಟೊಂದು ಇಳುವರಿ ಅಂತರ ಕಾಣುತ್ತಿದ್ದೇವೆ. ಅದರಂತೆ ಇತರೆ ಎಲ್ಲಾ ಬೆಳೆಯಲ್ಲಿಯೂ ಇಂತಹ ವ್ಯತ್ಯಯಗಳನ್ನು ಕಡಿಮೆಮಾಡುವ ಬಗೆಗೆ ಸರಿಯಾದ ಕ್ರಮದ ತಂತ್ರಜ್ಞಾನಗಳ ರೂಪಿಸುವ ಜವಾಬ್ದಾರಿ ಕೃಷಿವಿಜ್ಞಾನಿಗಳದು. ನಮ್ಮ ಪ್ರಮುಖ ಆಹಾರದ ಬೆಳೆಗಳಾದ ರಾಗಿ, ಜೋಳ, ಬತ್ತ, ಗೋಧಿಯಲ್ಲಿ ಇಳುವರಿ ಅಂತರಗಳನ್ನು ಕಡಿಮೆಮಾಡಿದರೆ ಸುಮಾರು ೫೦-೬೦% ಇಳುವರಿ ಹೆಚ್ಚಿಸಲು ಸಾದ್ಯವಿದೆ. ಅದರಂತೆ ಎಲ್ಲಾ ಬೆಳೆಗಳ ಕಡೆಗೂ ಗಮನ ಹರಿಸಲು

ಸಾಧ್ಯವಿದೆ.

೩. ಸಂಪನ್ಮೂಲಗಳ ವ್ಯವಸ್ಥಿತ ನಿರ್ವಹಣೆ: ಜನರಿಗೆ ನೈಸರ್ಗಿಕ ಸಂಪನ್ಮೂಲಗಳ ಬಗೆಗೆ ಅದೇನೋ ಅಸಡ್ಡೆ. ನೀರು, ನೆಲ, ಗೊಬ್ಬರ ಹಾಗೂ ಶಕ್ತಿ ಮೂಲಗಳ ಅರ್ಥವತ್ತಾದ ನಿರ್ವಹಣೆ ಮತ್ತು ತಿಳಿವಳಿಕೆಯಿಂದ ಮತ್ತಷ್ಟು ಜವಾಬ್ದಾರಿಯಿಂದ ವರ್ತಿಸುವಂತೆ ಅಧ್ಯಯನಗಳು ತಿಳಿಸುತ್ತವೆ. ಮುಖ್ಯವಾಗಿ ನೀರು ಮತ್ತು ಗೊಬ್ಬರಗಳ ವ್ಯವಸ್ಥಿತ ಬಳಕೆಯ ತಿಳಿವಳಿಕೆಯು ಇನ್ನೂ ನಮ್ಮ ರೈತ ಸಮುದಾಯದ ಸಾಮಾನ್ಯ ಜ್ಞಾನವಾಗದಿರುವ ಬಗೆಗೆ ಅವಲೋಕಿಸಲಾಗಿದೆ. ರಸಗೊಬ್ಬರಗಳ ಬಳಕೆಯನ್ನು ಕೇವಲ ಮಾರಾಟದ ತಂತ್ರಜ್ಞಾನವಾಗಿಸದೆ ರೈತೋಪಕಾರಿ ಮಾಡುವ ಬಗೆಗೆ ಜರೂರು ಇದೆ. ಒಟ್ಟಾರೆ ನೆಲ, ನೀರು, ಜೈವಿಕ ಸಂಪನ್ಮೂಲವನ್ನು ವ್ಯವಸ್ಥಿತವಾಗಿ ಬಳಸುವ, ನಿರ್ವಹಿಸುವ ಅಗತ್ಯ ಹಿಂದೆಂದಿಗಿಂತಲೂ ಇನ್ನು ಮುಂದೆ ಹೆಚ್ಚಲಿದೆ.

೪. ಸಸ್ಯಹಾರಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದು: ಇದೊಂದು ಸೂಕ್ಷ್ಮ ವಿಚಾರವಾಗಿದ್ದು ಪ್ರಬಲವಾದ ಮಾಹಿತಿಯಾಗಿದೆ. ಆಹಾರದ ಉತ್ಪಾದನೆಯ ಹೆಚ್ಚಳ ಮತ್ತು ಪರಿಸರದ ರಕ್ಷಣೆ ಎರಡನ್ನೂ ಒಂದೇ ಅಸ್ತ್ರದಿಂದ ಸಾಧಿಸಬಹುದಾದ ವಿಚಾರವಾಗಿದೆ. ನಾವು ಸುಮಾರು ೨೦೦೦ಕ್ಕೂ ಹೆಚ್ಚಿನ ಸಸ್ಯಗಳನ್ನು ತಿಂದು ಬದುಕಲು ಸಾಧ್ಯವಿದೆ. ಆದರೂ ೨೦೦ನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಅದರಲ್ಲೂ ೨೦ ಸಸ್ಯಗಳನ್ನು ಲಾಭದ ಹಿನ್ನೆಲೆಯಲ್ಲಿಯೇ ಬೆಳೆಯುತ್ತಿದ್ದೇವೆ. ಆದಾಗ್ಯೂ ಕೇವಲ ೨ ನಮ್ಮ ಪ್ರತಿನಿತ್ಯದ ಆಹಾರದ ಮುಕ್ಕಾಲು ಪಾಲನ್ನು ಆವರಿಸಿವೆ! ಹಾಗಾಗಿ ಇರುವಂತಹ ಸಸ್ಯ ವೈವಿಧ್ಯತೆಯನ್ನು ನಮ್ಮ ಆಹಾರ ಮೂಲದಲ್ಲಿ ಸಾಕಷ್ಟು ಬಳಸುವ ಸಣ್ಣ ಬದಲಾವಣೆಯಿಂದ ಗಣನೀಯವಾದ ಆಹಾರ ಸಮಸ್ಯೆಯನ್ನು ಪರಿಹರಿಸಬಹುದು.

೫. ಆಹಾರ ಪೋಲಾಗುವುದನ್ನು ತಡೆಯುವುದು: ಉತ್ಪಾದನೆಯಿಂದ ಬಳಕೆಯವರೆಗಿನ ಆಹಾರ ಪೋಲಾಗುವ ಕುರಿತು ಕೇವಲ ಇತ್ತೀಚೆಗಿನ ಚಿಂತನೆ. ಹೆಚ್ಚೂ ಕಡಿಮೆ ೩೦% ಆಹಾರ ಪೋಲಾಗುವ ಬಗೆಗೆ ಅಧ್ಯಯನಗಳು ತಿಳಿಸುತ್ತವೆ. ಕೊಯ್ಲಿನಿಂದ ಊಟದ ತಾಟಿನವರೆಗೂ ಆಹಾರ ಪೋಲಾಗುವುದನ್ನು ತಡೆಯದೇ ಬೇರೆ ಮಾರ್ಗವಿಲ್ಲಾ!. ಆಗಲಾದರೂ ಭೂಮಿಯನ್ನೂ ಕಾಪಾಡಿ ಹೊಟ್ಟೆಯನ್ನೂ ನಿಭಾಯಿಸಬಹುದೇನೋ? ನಮ್ಮ ಸಂಪ್ರದಾಯದಲ್ಲಿ ಬಹಳ ಒಳ್ಳೆಯ ಪರಿಪಾಠವಿತ್ತು. ಊಟದ ತಟ್ಟೆಯಲ್ಲಿ ಏನನ್ನೂ ಬಿಡುವುದನ್ನು ಅದು ಪ್ರೋತ್ಸಾಹಿಸುತ್ತಿರಲಿಲ್ಲ. ಅನ್ನಬ್ರಹ್ಮ ಅದನ್ನು ಹಾಗೆಲ್ಲಾ ಚೆಲ್ಲಾಬಾರದೆಂಬ ಊಟದ ನಿಯಮವಿತ್ತು. ತಮಿಳು ದಾರ್ಶನಿಕ ಕವಿ ತಿರುವಳ್ಳುವಾರ್ ಊಟಕ್ಕೆ ಕುಳಿತಾಗ ಯಾವಾಗಲೂ ಪಕ್ಕದಲ್ಲಿ ಒಂದು ಸೂಜಿ ಮತ್ತು ಗಿಂಡಿಯಲ್ಲಿ ನೀರನ್ನೂ ಇಟ್ಟುಕೊಂಡಿರುತ್ತಿದ್ದರಂತೆ. ಒಮ್ಮೆ ಅವರ ಪತ್ನಿ ಏಕೇ ಹೀಗೆ ಎಂದು ಕೇಳಿದರಂತೆ. ಅದಕ್ಕೆ ತಿರುವಳ್ಳುವಾರ್ ಅರವ ಉತ್ತರ ಹೀಗಿತ್ತು. "ನೀನೇನಾದರೂ ಊಟ ಬಡಿಸಿವಾಗ ಒಂದೆರಡು ಅನ್ನದ ಅಗುಳನ್ನು ಅಕಸ್ಮಾತ್ ಚೆಲ್ಲಿದರೂ, ಅವನ್ನೆತ್ತಿಕೊಳ್ಳಲು ಸೂಜಿ ಮತ್ತು ತೊಳೆದು ತಟ್ಟೆಗೆ ಬಡಿಸಿಕೊಳ್ಳಲು ಗಿಂಡಿಯ ನೀರು, ಇಟ್ಟಿಕೊಂಡಿರುವೆ. ಆದರೆ ಈವರೆಗೂ ಅವನ್ನು ಬಳಸಲು ಆಗಲಿಲ್ಲ. ನೀನಷ್ಟು ಜೋಪಾನವಾಗಿ ಬಡಿಸುತ್ತೀಯಾ" ಎಂದರಂತೆ. ಇಲ್ಲಿ ಗಮನಿಸಬೇಕಾದ್ದು ಎಬ್ಬರಲ್ಲೂ ಇರುವ ಅನ್ನದ ಬಗೆಗಿನ ಗೌರವ. ಇಂದು ಮದುವೆ, ಹೋಟೆಲಿನ ಊಟದ ತಾಟುಗಳಲ್ಲಿ ಆಗುವ ಪೋಲನ್ನು ಗಮನಿಸಿದರೆ ಯಾರಗೂ ಬೇಸರವಾಗದೆ ಇರದು. ಅಷ್ಟೊಂದು ಕಣ್ಣ ಮುಂದೆಯೇ ಅನ್ನ ಬೀದಿ ಪಾಲಾಗುತ್ತದೆ. ಮುಂದಿನ ದಿನಗಳ ನೆನೆದು ಇವನ್ನೆಲ್ಲಾ ಗಮನದಲ್ಲಿಟ್ಟು ಆಹಾರದ ಸಂರಕ್ಷಣೆಗೆ ಮುಂದಾಗಬೇಕಿದೆ.

* * *

ಸಾನ್ಯಾನ್ಯರಿಂದ...

ಕೈಮಗ್ಗ ಕ್ಷೇತ್ರದಲ್ಲಿ ಅಭೂತಪೂರ್ವ ಸೇವೆ ಸಲ್ಲಿಸಿದವರಿಗೆ ಹೆಗ್ಗೋಡಿನ ದೇಸಿ ಸಂಸ್ಥೆಯು ನೀಡುವ ೨೦೧೧-೧೨ನೇ ಸಾಲಿನ 'ದೇಸೀ ಕೈಮಗ್ಗ ರಾಷ್ಟ್ರೀಯ ಪ್ರಶಸ್ತಿ'ಗೆ ನೀವು ಆಯ್ಕೆಯಾಗಿರುವುದು ಸಂತೋಷದ ಸಂಗತಿ.

ಸ್ವದೇಶಿ ಆಂದೋಲನದಲ್ಲಿ ಕಳೆದ ಹಲವಾರು ದಶಕಗಳಿಂದ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ನಿಮ್ಮ ಸಾಧನೆಗೆ ಈ ಪ್ರಶಸ್ತಿ ಸಹಜವಾಗಿ ಒಲಿದು ಬಂದಿದೆ. ದೇಶಿ ವಸ್ತುಗಳ ಉತ್ಪಾದನೆ, ಬಳಕೆ, ಪ್ರೋತ್ಸಾಹವೇ ನಿಜವಾದ ಆರ್ಥಿಕತೆಯ ಬೆನ್ನೆಲುಬು ಎಂಬ ನಿಮ್ಮ ಗಾಂಧೀವಾದದ ನಿಲುವು ನಿಜಕ್ಕೂ ಅನುಕರಣೀಯವಾದುದು.

ಮುಂದಿನ ದಿನಗಳಲ್ಲಿಯೂ ನಿಮ್ಮಿಂದ ಇಂಥದೇ ಸಮಾಜಮುಖಿ ಚಟುವಟಿಕೆಗಳು ನಡೆಯಲಿ, ಆ ಮೂಲಕ ಜನರ ನಿಲುವುಗಳು ಧನಾತ್ಮಕ ದಿಕ್ಕಿಗೆ ಬದಲಾಗಲೆಂದು ಆಶಿಸುತ್ತಾ ಹಾಗೆ ನಿರಂತರ ಮಾಡಲು ಭಗವಂತನು ನಿಮಗೆ ಆಯುರಾರೋಗ್ಯಗಳನ್ನು ಕರುಣಿಸಲೆಂದು ಹಾರೈಸುತ್ತೇವೆ.

ಶುಭಾಶಯಗಳೊಂದಿಗೆ,

ಇಂತು ಭಗವತ್ಸೇವೆಯಲ್ಲಿ,

– ***ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ,*** ಸುತ್ತೂರು

ಜನಪದ ವಿಚಾರ ತಪ್ಪದೇ ಬರುತ್ತದೆ. ಬಂದೊಡನೆಯೆ ಓದಿ ಮುಗಿಸಿಬಿಡುತ್ತೇವೆ. ಇದು ಗ್ರಾಮೀಣ ಪ್ರದೇಶಗಳಿಗೆ, ಶಾಲೆಗಳಿಗೆ ತಲಪಬೇಕಾಗಿತ್ತು. ಕರ್ನಾಟಕ ಸರ್ಕಾರ ಶಾಲೆಗಳಿಗೂ, ಪಂಚಾಯ್ತಿಗಳಿಗೂ ಕಳುಹಿಸಬಹುದಿತ್ತು. ಅದು ಸಾಧ್ಯವಾಗಿದ್ದಲ್ಲಿ ಪತ್ರಿಕೆಯನ್ನು ಅಲ್ಲಿಯ ಅಗತ್ಯಕ್ಕೆ ತಕ್ಕಂತೆ ರೂಪಿಸಲೂ ಬಹುದು. ಸದ್ಯಕ್ಕಂತೂ ಪ್ರಗತಿಪರ ಚಂತನೆ, ಗಾಂಧೀಮಾರ್ಗ, ಜನಪರ ಚಿಂತನೆಯುಳ್ಳವರಿಗೆ ಇದು ವ್ಯಾಪಕವಾಗಿ ತಲುಪಬೇಕು.

– ***ಕ.ಪಾರ್ಥಸಾರಥಿ,*** ಬೆಂಗಳೂರು

ತಾವು ಪ್ರಕಟಿಸುತ್ತಿರುವ ನಿಯತಕಾಲಿಕ 'ಜನಪದ ವಿಚಾರ' ತುಂಬ ಸೊಗಸಾಗಿ ಮೂಡಿ ಬರುತ್ತಿದೆ. ಕನ್ನಡದಲ್ಲಿ ವೈಚಾರಿಕ ಲೇಖನಗಳಿಗಾಗಿ ಮೀಸಲಾದ ನಿಯತಕಾಲಿಕೆಯನ್ನು ಪ್ರಕಾಶಿಸುತ್ತಿರುವುದು ನಿಜಕ್ಕೂ ಅಭಿನಂದನೀಯ ಸಾಹಸ. ಒಂದು ಮೌಲ್ಯಾಧಾರಿತ ತತ್ವದ ಜಾಡಿನಡಿಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ವಿಚಾರ ಪ್ರಚೋದಕ ವಾಗಿರುತ್ತವೆ. ಅನುವಾದಕ್ಕೆ ಆಯ್ಕೆಯಾದ ಲೇಖನಗಳು ಕೂಡ ತುಂಬ ಚೆನ್ನಾಗಿರುತ್ತವೆ. 'ಜನಪದ ವಿಚಾರ' ತಾತ್ವಿಕ ಚಿಂತನೆಯಲ್ಲೂ, ಲೇಖನ

ಬಾಹುಳ್ಯದಲ್ಲೂ ಹಾಗೂ ವೈವಿಧಯತೆಯಲ್ಲೂ ಇನ್ನೂ ಹೆಚ್ಚು ಸಮೃದ್ಧವಾಗಿ ಬೆಳೆಯಲಿ ಎಂದು ಹಾರೈಸುತ್ತಾ ನಾನು ನನ್ನ ಸಣ್ಣ ಅಳಿಲು ಸೇವೆಯನ್ನು ಐದು ನೂರು ರೂಪಾಯಿಗಳ ಚಂದಾಹಣದ ಮೂಲಕ ಸಲ್ಲಿಸುತ್ತಿದ್ದೇನೆ.

ಇತಿ ತಮ್ಮ,

– ***ಎ.ಆರ್. ಶೆಟ್ಟಿ,*** ಬೆಂಗಳೂರು

'ಜನಪದ ವಿಚಾರ'ವು ಎಂದಿನಂತೆ ವೈಚಾರಿಕ ಲೇಖನಗಳನ್ನು ಹೊತ್ತು ಬರುತ್ತಿದೆ. ಡಾ॥ ಗಿರಿಜಾಶಾಸ್ತ್ರಿ ಮುಂಬಯಿಯವರ 'ಪ್ರಗತಿಶೀಲ ರಾಜ್ಯದಲ್ಲಿ ಪ್ರಗತಿ ಪಥಿಕನ ಕಗ್ಗೊಲೆ' ಲೇಖನವು ಮನಸ್ಸನ್ನು ತೀರಾ ಕಸಿವಿಸಿಗೊಳಿಸಿತು. ಅಂಧಶ್ರದ್ಧೆಯನ್ನು ನಿರ್ಮೂಲನೆ ಮಾಡಲು ಸಾಂಸ್ಕೃತಿಕ ನೈರ್ಮಲ್ಯವನ್ನು ಕಾಪಾಡಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಡಾ. ನರೇಂದ್ರ ಅಚ್ಯುತ ದಾಭೋಲ್ಕರ್‌ರವರನ್ನು ಅಮಾನವೀಯವಾಗಿ ಹತ್ಯೆ ಮಾಡಿದ್ದು ಅತ್ಯಂತ ವಿಷಾದನೀಯ. ಹೀಗೆಯೇ ಆಗುತ್ತಿದ್ದರೆ ನಮ್ಮ ದೇಶವು ಪ್ರಗತಿಪಥದತ್ತ ಸಾಗುವುದು ಎಂದು?

– ***ಜೆ.ವೈದೇಹಿ,*** ಮೈಸೂರು

೮ನೇ ಆಗಸ್ಟ್ ೧೯೪೨ ರಂದು ಸ್ವಾತಂತ್ರ್ಯ ಆಂದೋಲನದ ಭಾಗವಾಗಿ ೮ನೇ ಆಗಸ್ಟ್ ೧೯೪೨ರಂದು 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಕರೆಯನ್ನು ನೀಡಲಾಗಿತ್ತು. ಭಾರತವನ್ನು ಭಾರತೀಯರ ವಶಕ್ಕೆ ಬಿಡುವಂತೆ ಆಗ್ರಹಿಸುವುದು, ಗ್ರಾಮ ಸ್ವರಾಜ್ಯ ಸ್ಥಾಪಿಸುವುದು, ಸರ್ವರ ಹಿತ ಬಯಸಿ ಆಡಳಿತ ನಡೆಸುವುದು, ಸ್ವಾವಲಂಬನೆ ಸಾಧಿಸುವುದು, ಎಲ್ಲಾ ಭಾರತೀಯರಲ್ಲಿ ಸಮಾನತೆ ಭಾವನೆ ಮೂಡಿಸುವುದು, ಅನಕ್ಷರತೆ–ಹಸಿವು–ಅನ್ಯಾಯ–ಅಕ್ರಮಗಳನ್ನು ನಿರ್ಮೂಲನೆ ಮಾಡುವುದು.... ಇತ್ಯಾದಿಗಳು 'ಆಗಸ್ಟ್ ಕ್ರಾಂತಿ'ಯ ಕರೆಯಾಗಿತ್ತು.

ಇದು ನಡೆದು ಎಪ್ಪತ್ತೊಂದು ವರ್ಷಗಳು ಕಳೆದಿವೆ. ಭಾರತದ ಪರಿಸ್ಥಿತಿ ಹೆಚ್ಚೇನೂ ಬದಲಾಗಿಲ್ಲ. ಅನಕ್ಷರತೆ–ಹಸಿವು–ಅನ್ಯಾಯ–ಅಕ್ರಮಗಳು ಹಾಗೇ ಉಳಿದಿವೆ. ಗ್ರಾಮ ಸ್ವರಾಜ್ಯ ಕಾಗದದ ಮೇಲೆ ಮಾತ್ರ ಇದೆ; ಪರಾವಲಂಬನೆಯಲ್ಲೇ ಭಾರತ ನರಳುತ್ತಿದೆ. ಕೆಲವೇ ಕೆಲವು ವ್ಯಕ್ತಿ, ಕುಟುಂಬಗಳ ಹಿತ ಪ್ರಧಾನವಾಗಿದೆ. ಸಾಮಾಜಿಕ, ಆರ್ಥಿಕ ಅಸಮಾನತೆ ಹೆಚ್ಚಾಗಿದೆ; ಇದನ್ನು ತಡೆಗಟ್ಟುವಲ್ಲಿ ರಾಜಕೀಯ ಪೂರ್ಣವಾಗಿ ವಿಫಲವಾಗಿದೆ. ಭಾರತೀಯರಲ್ಲಿ ಬಡವರ ಸಂಖ್ಯೆ ಏರುತ್ತಿದ್ದ ಹಾಗೆಯೆ ಸಂಸತ್ ಸದಸ್ಯರಲ್ಲಿ ಮತ್ತು ವಿಧಾನಸಭೆ/ಪರಿಷತ್‌ನಲ್ಲಿ ಕೋಟ್ಯಾಧೀಶರ ಸಂಖ್ಯೆಯೂ ಏರುತ್ತಿದೆ! ಇದು ನಮ್ಮ ಸಂಸದೀಯ ಪ್ರಜಾಪ್ರಭುತ್ವದ ನಿರ್ಲಜ್ಜ ಸೋಲು! ಒಂದೆಡೆ ಅಧಿಕಾರದಾಹಿ ರಾಜಕೀಯ ಪಕ್ಷಗಳು ಸರ್ವಾಧಿಕಾರಿ ಮನೋಭಾವ ತಾಳುತ್ತಿದ್ದಾರೆ, ಭ್ರಷ್ಟಾಚಾರದ ವಿರುದ್ಧ ನಿಲ್ಲುವ ಜನರು ಮತ್ತು ಐ.ಎ.ಎಸ್ ಇತ್ಯಾದಿ ಅಧಿಕಾರಿಗಳು ಹತ್ತಿಕ್ಕಲ್ಪಡುತ್ತಿದ್ದಾರೆ. ಜಾತಿವಾದಿ, ಕೋಮುವಾದಿ ಶಕ್ತಿಗಳು ತಲೆಯೆತ್ತುತ್ತಿವೆ. ನಾಗರೀಕ

ಸಮಾಜ ಅಸಂಘಟಿತವಾಗಿದೆ. ವಿದ್ಯಾರ್ಥಿ ಯುವ ಜನರು ಕೆರಿಯರಿಸಂ ಸೆಳತಕ್ಕೆ ಸಿಕ್ಕಿದ್ದಾರೆ.

ಈ ಸಂದರ್ಭದಲ್ಲಿ ಅತಿ ಕಠಿಣ ಎನಿಸುವ ಕ್ರಮಕ್ಕೆ ಮುಂದಾಗುವುದು ಅನಿವಾರ್ಯವಾಗಿದೆ. ಗಾಂಧಿಯ 'ದರಿದ್ರ ನಾರಾಯಣ'ನಿಗೆ ಶಕ್ತಿ ದೊರಕಬೇಕಿದೆ. ಭಗತ್ ಸಿಂಗ್- ಸುಭಾಷ್ ಚಂದ್ರ ಬೋಸ್ ಕಂಡ ಕನಸು ನನಸಾಗಬೇಕಿದೆ. ಸ್ವತಂತ್ರ ಭಾರತಕ್ಕೆ ಸಂವಿಧಾನ ಸಿದ್ಧಪಡಿಸಿ ನೀಡಿದ ಅಂಬೇಡ್ಕರ್ ಆಶಯ 'ಸ್ವಾತಂತ್ರ್ಯ-ಸಮಾನತೆ-ಬಂಧುತ್ವ' ಈಡೇರಬೇಕಿದೆ.

ಇದನ್ನು ಸಾಧಿಸಲು ಸಾಧ್ಯವಿರುವುದು ಇಂದಿನ ವಿದ್ಯಾರ್ಥಿ ಯುವ ಜನರಿಂದಲೇ. ಸರ್ವೋದಯ ಎಂಬ ಯುಗ ಮಂತ್ರವನ್ನು ಕಾರ್ಯಗತಗೊಳಿಸಲು ಅವರೀಗ ಮುಂದಾಗಬೇಕಿದೆ.

ಇಚ್ಛಾಶಕ್ತಿಯನ್ನು ಅಭಿವ್ಯಕ್ತಗೊಳಿಸಿದರೆ ಎಲ್ಲವೂ ಸಾಧ್ಯ.

– ***ನವೀನ್ ಕುಮಾರ್,*** ಬೆಂಗಳೂರು

ಅಮೂಲ್ಯ ವಿಚಾರಧಾರೆಗಳನ್ನು ಹೊತ್ತು 'ಜನಪದ ವಿಚಾರ' ಪತ್ರಿಕೆಯು ಕಾಲಕಾಲಕ್ಕೆ ನಮ್ಮಲ್ಲಿಗೆ ಬರುತ್ತಿದೆ. ಅಕ್ಟೋಬರ್ ತಿಂಗಳಿನ ಪತ್ರಿಕೆಯು ಮೊನ್ನೆ ಕೈಸೇರಿದೆ. ಆದರೆ ಅದನ್ನು ಬಹಳ ಮೆಚ್ಚಿಕೊಂಡು ಓದಿ ತನ್ನ ಅಭಿಪ್ರಾಯಗಳನ್ನು ನಿಮಗೆ ತಪ್ಪದೇ ತಿಳಿಸುತ್ತಿದ್ದ ವ್ಯಕ್ತಿಯೇ ಈಗ ಕಾಲಗರ್ಭದಲ್ಲಿ ಲೀನವಾಗಿಬಿಟ್ಟಿದ್ದಾರೆ. ನನ್ನ ತಾಯಿ, ಶ್ರೀಮತಿ ಶಾರದಾ ಜಡೆಯವರು ಇದೇ ತಿಂಗಳ ಎಂಟನೇ ತಾರೀಖು ಕೊನೆಯ ಉಸಿರನ್ನೆಳೆದರೆಂದು ತಿಳಿಸಲು ವಿಷಾದವಾಗುತ್ತದೆ. ೯೨ ವರ್ಷಗಳನ್ನು ದಾಟಿದ ಅವರು ಕೊನೆಯ ಆರು ತಿಂಗಳು ಅತಿವ ನರಳಾಟದಲ್ಲಿ ಓದು ಬರಹಗಳ ತಮ್ಮ ಅತ್ಯಂತ ಪ್ರಿಯ ಚಟುವಟಿಕೆಗೆ ಪೂರ್ಣ ವಿರಾಮ ಹಾಕಿದ್ದರು. ಆದ್ದರಿಂದಲೇ ನಿಮ್ಮೊಂದಿಗೆ ಸಂಪರ್ಕವನ್ನು ಕಳೆದುಕೊಂಡಿದ್ದರು.

ಅವರ 'ಮಂಕಮ್ಮನ ಮಗ್ಗ'ವನ್ನು ಮೆಚ್ಚಿಕೊಂಡ ನೀವು ಅದರ ಇನ್ನೂ ಹಲವಾರು ಪ್ರತಿಗಳನ್ನು ಕೊಂಡು ಇತರರಿಗೂ ಅದರ ಪರಿಚಯ ಮಾಡಿಸಿದ್ದು ನನ್ನ ತಾಯಿಗೆ ತುಂಬಾ ಆನಂದವನ್ನು ಕೊಟ್ಟಿತ್ತು.

ಸರ್ವೋದಯದ ಮೂಲಭೂತ ವಿಚಾರಗಳನ್ನು ಸದಾ ಬೆಂಬಲಿಸುತ್ತಿದ್ದ ಅವರಿಗೆ ನಿಮ್ಮ ಪತ್ರಿಕೆಯು ಬಹಳ ಮೆಚ್ಚುಗೆಯಾಗಿತ್ತು. ನಿಮ್ಮ ಅನಾರೋಗ್ಯದ ಬಳಲಿಕೆಯಲ್ಲೂ ನೀವು ಪತ್ರಿಕೆ ಹಾಗೂ ಇತರ ಸಮಾಜ ಸೇವಾ ಕಾರ್ಯಗಳನ್ನು ಮುಂದುವರೆಸುತ್ತಿರುವುದು ಪ್ರಶಂಸನೀಯ. ಇದು ಹೀಗೆಯೇ ಸಾಗಲಿ. ಆ ಅಗೋಚರ ಮಹಾನ್ ಶಕ್ತಿ ನಿಮ್ಮ ಆರೋಗ್ಯಭಾಗ್ಯವನ್ನು ಕಾಪಾಡಲಿ ಎಂದೆಂದಿಗೂ. ಇದು ನಮ್ಮೆಲ್ಲರ ಹೃತ್ಪೂರ್ವಕ ಹಾರೈಕೆ ಹಾಗೂ ಪರಮಾತ್ಮನಲ್ಲಿ ಬೇಡಿಕೆ.

– ***ಶೈಲಜಾ ತಿಳವಳ್ಳಿ,*** ಸಾಂಗ್ಲಿ

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ದತ್ತು ಕೇಂದ್ರಕ್ಕೆ ಒಂದು ನವಜಾತ ಹೆಣ್ಣು ಶಿಶುವೊಂದು ಪ್ರಾರಂಭಿಕ ಪೋಷಣೆಗಾಗಿ ಪ್ರವೇಶಪಡೆಯಿತು. ಮಗು ತುಂಬ ದುರ್ಬಲ ಮತ್ತು ಕಡಿಮೆ ತೂಕದ್ದಾಗಿದ್ದರಿಂದ ಸನಿಹದ ಆಸ್ಪತ್ರೆಯೊಂದರಲ್ಲಿ ಮಕ್ಕಳ ವಿಭಾಗಕ್ಕೆ ಸೇರಿಸಲಾಯಿತು. ಮಗುವಿನ ಆರೋಗ್ಯದಲ್ಲಿ ಸುಧಾರಣೆಯಾಗುತ್ತಲೇ ದತ್ತು ಕೇಂದ್ರಕ್ಕೆ ಮರಳಿ ತರಲಾಗುವುದು. ಇನ್ನೊಂದು ಮಗುವಿಗೆ ಕೆಲ ದೈಹಿಕ ತೊಂದರೆ ಇದ್ದುದ್ದರಿಂದ ಮೈಸೂರಿನ ಪ್ರತಿಷ್ಠಿತ ಆಸ್ಪತ್ರೆಯೊಂದರಲ್ಲಿ ಸೇರಿಸಲಾಗಿತ್ತು. ಅಲ್ಲಿ ಮಗುವಿಗೆ ಅಗತ್ಯವಾಗಿದ್ದ ಶಸ್ತ್ರ ಚಿಕಿತ್ಸೆ ಮತ್ತು ಇತರ ವೈದ್ಯಕೀಯ ಚಿಕಿತ್ಸೆಯ ನಂತರ ಮಗು ಗುಣಮುಖವಾದುದರಿಂದ ಹಿಂದಿರುಗಿ ಕೇಂದ್ರಕ್ಕೆ ತರಲಾಯಿತು. ಮೈಸೂರಿನ ರೋಟರಿ ಕ್ಲಬ್(ಪಶ್ಚಿಮ)ದವರು ಆಸ್ಪತ್ರೆಯ ಖರ್ಚನ್ನು ನಿರ್ವಹಿಸಲು ಸಹಾಯ ಮಾಡಿದರು. ಟ್ರಸ್ಟ್ ಅವರಿಗೆ ಆಭಾರಿಯಾಗಿದೆ.

ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ರಾಷ್ಟ್ರೀಯ ಸೇವಾ ಸಂಸ್ಥೆಯ ೩೦ ಜನ ಅಧಿಕಾರಿ ಉಪನ್ಯಾಸಕರು ಪ್ರೊ॥ ಚಂದ್ರಶೇಖರಗೌಡರವರ ನೇತೃತ್ವದಲ್ಲಿ ಯೋಜನೆಯ ಕ್ಷೇತ್ರೀಯ ಭೇಟಿಗಾಗಿ ಜನಪದ ಸೇವಾ ಟ್ರಸ್ಟ್‌ಗೆ ಭೇಟಿಕೊಟ್ಟರು ಮತ್ತು ಟ್ರಸ್ಟಿನ ಸೇವಾ ಚಟುವಟಿಕೆ ಬಗ್ಗೆ ಪರಿಚಯ ಮಾಡಿಕೊಂಡರು.

ಬೆಂಗಳೂರಿನ ಎರಡು ಸಂಸ್ಥೆಗಳವರು ಗಣನೀಯ ಪ್ರಮಾಣದಲ್ಲಿ ಜನಪದ ಖಾದಿಯನ್ನು ಖರೀದಿಸಿದರು ಮತ್ತು ಇನ್ನೊಂದು ಸಂಸ್ಥೆಯವರು ಸಾವಯವ ಹತ್ತಿಯಿಂದ ತಯಾರಿಸಿದ ಖಾದಿ ನೂಲನ್ನು ನೇಯ್ಗೆ ಮಾಡಿಸಿಕೊಡಲು ಕೊಟ್ಟರು. ಈಗ ಎಂಟು ಕೈಮಗ್ಗಗಳು ಹೊಸ ಜೀವನ ದಾರಿ ಕೇಂದ್ರದಲ್ಲಿ ಕೆಲಸಮಾಡುತ್ತಿವೆ.

ಹೆಗ್ಗೋಡಿನ ಎನ್.ಎಮ್.ಕುಲಕರ್ಣಿ ಮತ್ತು ಕುಟುಂಬದವರು, ಮೈಸೂರಿನ ಎಸ್.ಜಿ.ಸೀತಾರಾಮ್ ಮತ್ತು ಸ್ನೇಹಿತರು, ಮುಂಬೈಯಲ್ಲಿರುವ ಡಾ.ಗಿರಿಜಾ ಶಾಸ್ತ್ರಿ, ಚಿತ್ರದುರ್ಗದ ಟ್ರಸ್ಟಿನ ಅಭಿಮಾನಿ ಭೀಮಸಿಂಗ್ ಗೋಗಿ ಮತ್ತು ಕುಟುಂಬದವರು, ಬೆಂಗಳೂರಿನಿಂದ ಡಾ.ತ್ರಿಶೂಲಾ ದಾಬಡೆ ಮತ್ತು ಪ್ರಕಾಶ್ ದಾಬಡೆ, ಮೈಸೂರಿನ ನಿರಂತರ ಸಂಸ್ಥೆಯ ಶ್ರೀನಿವಾಸ್, ಹರಿ, ಲಿಂಗರಾಜ್ ಟ್ರಸ್ಟಿಗೆ ಭೇಟಿಕೊಟ್ಟರು.

ಜನಪದ ನಿಲಯದ ಅಂತರಂಗದಲ್ಲಿ.. ೧೧೮

– ಸುರೇಂದ್ರ ಕೌಲಗಿ



ಎಪ್ಪತ್ತು ವರ್ಷದ ಸೇವಾ ಅವಧಿಯಲ್ಲಿ ಎಂದೂ ಸ್ವಂತ ವಿಷಯದ ವ್ಯವಹಾರದಲ್ಲಿ ನೂರು ರೂಪಾಯಿ ನೋಟನ್ನು ನೋಡದ ವ್ಯಕ್ತಿಗೆ ಜೀವನದ ಸಂಧ್ಯಾಕಾಲದಲ್ಲಿ ಐವತ್ತು ಸಾವಿರ ರೂಪಾಯಿಗಳಷ್ಟು ಮೌಲ್ಯದ ರಾಷ್ಟ್ರೀಯ ಪ್ರಶಸ್ತಿಯೊಂದು ಆಕಸ್ಮಿಕವಾಗಿ ಸಿಕ್ಕಾಗ ನಿದ್ರೆಯಿಲ್ಲದ ಅನೇಕ ರಾತ್ರಿಗಳನ್ನು ಕಳೆಯಬೇಕಾಯಿತು. ಬಹುಮಾನದ ಹಣದ ಉಪಯೋಗ ಹೇಗೆ ಆಗಬೇಕೆಂಬುದರ ಚಿಂತೆಗಿಂತ ಹೆಚ್ಚಾಗಿ ಸನ್ಮಾನವನ್ನು ಸ್ವೀಕರಿಸಿದ್ದು ಸರಿಯೇ ಅಥವಾ ತಪ್ಪೇ ಎಂಬ ಸೈದ್ಧಾಂತಿಕ ನಿಲುವಿನ ಘರ್ಷಣೆ ಹೆಚ್ಚಾಗಿತ್ತು. ಗಾಂಧೀಯಿಂದ ಹಿಡಿದು ಜಯಪ್ರಕಾಶ ನಾರಾಯಣ ಮತ್ತು ವಿನೋಬಾ ಭಾವೆವರೆಗೆ ಮತ್ತು ಗಂಗಾಧರರಾವ್ ದೇಶಪಾಂಡೆ, ಮಹದೇವ ದೇಸಾಯಿ, ಭಗವಾನ್ ದಾಸ್, ನಭಕೃಷ್ಣ ಚೌಧರಿ, ಸಿದ್ದರಾಜ ಡಡ್ಡ, ಠಾಕೂರ್‌ದಾಸ್ ಬಂಗ್, ಯಶೋಧರಮ್ಮ ದಾಸಪ್ಪ, ಸತ್ಯವ್ರತ, ಕೆ.ಎಸ್.ನಾರಾಯಣಸ್ವಾಮಿ ಅದಕ್ಕೂ ಇತ್ತೀಚಿಗಿನ ಅನೇಕ ನಿಸ್ಪೃಹ ಸಮಾಜಸೇವಕರ ಜೀವನದೊಡನೆ ಹೋಲಿಸಿಕೊಂಡಾಗ ಈ ಪ್ರಶಸ್ತಿಯನ್ನು ಸ್ವೀಕರಿಸಿದ್ದು ನಿಷ್ಕಾಮ ಸೇವೆಯ ಸೈದ್ಧಾಂತಿಕ ನೆಲೆಗಟ್ಟಿನ ಒರೆಗಲ್ಲಿಗೆ ಉಜ್ಜಿನೋಡಿದಾಗ ಅಪರಾಧದ ಮನೋಭಾವನೆ ಮನದಲ್ಲಿ ಮೂಡಿತು.

ಇಟ್ಟುಕೊಂಡಿರುವ ವಿಚಾರ ಮತ್ತು ಆಚಾರಗಳಿಗೆ ವಿರುದ್ಧವಾಗಿರುವ ಸಂಸ್ಥೆಯೊಂದರಿಂದ ಪ್ರಶಸ್ತಿಯ ಸ್ವೀಕಾರವನ್ನು ಸಾರಾಸಗಟಾಗಿ ಮತ್ತು ಯಾವ ಯೋಚನೆಯಿಲ್ಲದೆ ತಿರಸ್ಕರಿಸಬಹುದು. ಅಂಥ ಒಂದು ಅನುಭವ ಈ ಮೊದಲೇ ನಡೆದುದ್ದಾಗಿತ್ತು. ರಾಜ್ಯ ಸರ್ಕಾರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಡಲು ಮುಂದೆ ಬಂದಾಗ ಅದನ್ನು ನಿರಾಕರಿಸಿಯಾಗಿತ್ತು. ಆ ನಿರಾಕರಣೆಯಲ್ಲಿ ಸೈದ್ಧಾಂತಿಕ ಗೆಲುವಿತ್ತು ಮತ್ತು ನಿಷ್ಕಾಮ ಸೇವೆಯ ಗೌರವವಿತ್ತು. ಇತ್ತೀಚೆಗೆ ಬಂದ ದೇಸೀ ಸಂಸ್ಥೆಯ 'ದಾಸೀಮಯ್ಯ' ಪ್ರಶಸ್ತಿಯ ಸಂದರ್ಭ ಹಾಗಿರಲಿಲ್ಲ. ದೇಸೀ ಸಂಸ್ಥೆಯ ಉದ್ದೇಶ ಮತ್ತು ಅದರ ಕಾರ್ಯಕಲಾಪಗಳು ಜನಪದ ಸೇವಾ ಟ್ರಸ್ಟಿನ ಉದ್ದೇಶ ಮತ್ತು ಕಾರ್ಯಕಲಾಪಗಳಿಗಿಂತ ಭಿನ್ನವಾಗಿರಲಿಲ್ಲ. ಒಂದರ್ಥದಲ್ಲಿ ದೇಸೀ ಸಂಸ್ಥೆ ಗಾಂಧೀಯವರು ಬಯಸಿದ್ದ ಗ್ರಾಮೋದ್ಯೋಗಗಳ ಏಳಿಗೆಯ ಮತ್ತು ತನ್ಮೂಲಕ ಗ್ರಾಮೀಣ ಪ್ರದೇಶದ ಜನರಿಗೆ ವಿಕೇಂದ್ರೀಕೃತ ಅರ್ಥವ್ಯವಸ್ಥೆಯಲ್ಲಿ ಉದ್ಯೋಗ ಕಲ್ಪಿಸಿಕೊಡುವ ಕಾರ್ಯದಲ್ಲಿ ಮಹಾನ್ ಸಾಧನೆ ಮಾಡಿದೆ. ಆ ಸಂಸ್ಥೆಯ ಪ್ರವರ್ತಕರಾದ ಪ್ರಸ್ನರವರು ಸಾಮ್ಯವಾದದ ವಿಚಾರ ಬಿಟ್ಟು ಗಾಂಧೀ ವಿಚಾರವನ್ನು ಮೈಗೂಡಿಸಿಕೊಂಡವರು ಮತ್ತು ಅದರಂತೆ ನಡೆಯುವುದರಲ್ಲಿ ಶ್ರದ್ಧೆ

ಇಟ್ಟುಕೊಂಡವರು. ಶ್ರಮಜೀವಿ ಆಶ್ರಮ ಸ್ಥಾಪಿಸಿ ಅಲ್ಲಿಯೇ ನೆಲಸಿ ಹಿಂದಿನ ಕಾಲದಂತೆ ಸ್ವತಃ ಸೌದೆ ಒಲೆಯ ಮೇಲೆ ಅಡುಗೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಸಾಧ್ಯವಾದಷ್ಟೂ ಯಂತ್ರ ನಾಗರೀಕತೆಯಿಂದ ದೂರವಿರಬೇಕೆಂದು ಗಾಂಧೀ ಹೇಳಿದ ವಿಚಾರಕ್ಕೆ ಪ್ರಸನ್ನರವರು 'ಯಂತ್ರಗಳನ್ನು ಕಳಚೋಣ ಬನ್ನಿ' ಎಂಬ ಪುಸ್ತಕ ಬರೆದು ಸಮಕಾಲೀನ ಸ್ಥಿತಿಗೆ ಅಳವಡಿಸಿಕೊಳ್ಳಬಹುದಾದಂಥ ಸ್ಥಿತಿಯಲ್ಲಿ ಪುಸ್ತಕ ಬರೆದಿದ್ದಾರೆ. ಇವೆಲ್ಲ ಕಾರಣಗಳಿಂದ 'ದಾಸೀಮಯ್ಯ ಪ್ರಶಸ್ತಿ'ಯನ್ನು ಸ್ವೀಕರಿಸಲು ಯಾವುದೆ ಕಾರಣಗಳಿಂದ ಸಂಕೋಚವೆನಿಸಲಿಲ್ಲ. ಅಷ್ಟರ ಮಟ್ಟಿಗೆ ಮನಸ್ಸಿನಲ್ಲಿ ಸಮಾಧಾನವಿತ್ತು. ಆದರೆ ನಿಜವಾದ ಚಿಂತೆಯುಂಟಾದದ್ದು ಪ್ರಶಸ್ತಿಯ ಮೊತ್ತದ ಉಪಯೋಗದ ಬಗ್ಗೆ. ಇಂದಿನ ಕಾಲದ ಸಾರ್ವತ್ರಿಕ ಆರ್ಥಿಕ ಪರಿಸ್ಥಿತಿಯಲ್ಲಿ ಐವತ್ತು ಸಾವಿರದ ಮೊತ್ತ ಬಹಳ ದೊಡ್ಡದೇನಲ್ಲ. ಆದರೆ ಓರ್ವ ಸಾಮಾನ್ಯ ಸಮಾಜ ಸೇವಕನ ಜೀವನದಲ್ಲಿ ಯಾರು ಯಾವುದೇ ಸ್ವಂತ ಆದಾಯದ ಮೂಲವನ್ನು ಹೊಂದಿಲ್ಲವೊ ಅಂಥ ಸಮಾಜ ಸೇವಕನ ಜೀವನದಲ್ಲಿ ಅದೊಂದು ದೊಡ್ಡ ಮೊತ್ತವೇ ಆಗಿ ಪರಿಣಮಿಸುತ್ತದೆ. ಆಗ ಆತನನ್ನು ನೆಚ್ಚಿಕೊಂಡ ಯಾವುದೇ ಪ್ರಕಾರದ ಆದಾಯವಿಲ್ಲದ ಗಂಡನೊಡನೆ ೭೫ ವಸಂತಗಳನ್ನು ಕಳೆದ ಹೆಂಡತಿ, ಜನ್ಮ ಪಡೆದ ಮಕ್ಕಳೂ, ಮನೆ ಮನ ತುಂಬಿದ ಸೊಸೆಯಂದಿರ ಭವಿಷ್ಯ, ಮೊಮ್ಮಕ್ಕಳ ವಿದ್ಯಾಭ್ಯಾಸ ಮತ್ತು ಸ್ವಂತ ಆರೋಗ್ಯದ ವಿಚಾರ ಇತ್ಯಾದಿ ಇತ್ಯಾದಿ ವಿಚಾರಗಳು ಕಾಡಲಾರಂಭಿಸುತ್ತವೆ. ಇಷ್ಟೆಲ್ಲ ಸಾಂಸಾರಿಕ ಜೀವನದ ಸಮಸ್ಯೆಗಳ ಮುಂದೆ ಆ ಮೊತ್ತ ನಗಣ್ಯ. ಆದರೆ ಸಾಧಾರಣ ಮನುಷ್ಯನ ಸಾಂಸಾರಿಕ ಮೋಹ ಹಣದ ಸಮೇತ ಬಂದ ಪ್ರಶಸ್ತಿಯನ್ನು ನಿರಾಕರಿಸುವ ಧೈರ್ಯ ಮೂಡಿಸುವುದಿಲ್ಲ. ಮುಳುಗುವ ಮನುಷ್ಯ ಹುಲ್ಲು ಕಡ್ಡಿ ಹಿಡಿದು ಬದುಕುವ ಪ್ರಯತ್ನ ಮಾಡುವ ಹಾಗೆ ಮನೋಸ್ಥಿತಿ ಉಂಟಾಗುತ್ತದೆ. ಜೀವನದಲ್ಲಿ ಆರ್ಥಿಕ ಸುಭದ್ರತೆ ಹೊಂದಿದ ಎಷ್ಟೋ ಸೇವಕರು, ಸಾಹಿತಿಗಳು, ಸಂಸ್ಥೆಗಳ ಸಂಯೋಜಕರು ಪ್ರಶಸ್ತಿ ಪಡೆದಲ್ಲಿ, ಆ ಪ್ರಶಸ್ತಿ ಎಷ್ಟೇ ದೊಡ್ಡದಾಗಿದ್ದರೂ ಅದನ್ನು ಸ್ವೀಕರಿಸದೆ ಮತ್ತೆ ಅದನ್ನು ಸಮಾಜ ಸೇವೆಗೆ ಹಿಂದಿರುಗಿಸುತ್ತಾರೆ. ಅದೇ ರೀತಿ ಪ್ರಶಸ್ತಿಯ ಈ ಮೊಬಲಗನ್ನು ಸಮಾಜ ಕಾರ್ಯಕ್ಕೇನೇ ಹಿಂದಿರುಗಿಸಬಹುದಾಗಿತ್ತಲ್ಲ ಎಂಬ ವಿಚಾರವೂ ಸತಾಯಿಸದೇ ಇರಲಿಲ್ಲ. ಕೊನೆಗೆ ಮೇಲ್ಕಾಣಿಸಿದ ಸಂಸಾರಿಕ ತಾಪತ್ರಯಗಳನ್ನು ಅನುಲಕ್ಷಿಸಿ ವ್ಯಯಿಸುವ ತೀರ್ಮಾನವನ್ನು ಮಾಡಬೇಕಾಯಿತು. ಆ ತೀರ್ಮಾನದ ಪ್ರಕಾರ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ವೊಂದರಲ್ಲಿ ಕಾಲಬದ್ಧತೆಯೊಂದಿಗೆ ಠೇವಣಿ ಇಟ್ಟು ಇನ್ನೂ ಕಿಶೋರಾವಸ್ಥೆಯಲ್ಲಿರುವ ಇಬ್ಬರು ಮೊಮ್ಮಕ್ಕಳ ಉಪಯೋಗಕ್ಕೆ ಹಣ ಬರುವಂತೆ ಮಾಡಿ ಠೇವಣಿಗೆ ಆ ಮಕ್ಕಳ ತಾಯಿಯಾದ ಸೊಸೆಯನ್ನೇ ಉತ್ತರಾಧಿಕಾರಿಯನ್ನಾಗಿ ಮಾಡುವುದೆಂದು ಕುಟುಂಬದ ಸದಸ್ಯರೆಲ್ಲರೂ ಸರ್ವಾನುಮತದಿಂದ ತೀರ್ಮಾನಿಸಿದರು. ಹೀಗೆ ಪ್ರಶಸ್ತಿ ರೂಪದಲ್ಲಿ ಬಂದ ವಿತ್ತಮೋಹದಿಂದ ಬಿಡುಗಡೆಗೊಂಡದ್ದಾಯಿತು. ಈ ತೀರ್ಮಾನ ಸರಿಯೇ ತಪ್ಪೇ ಎಂಬುದು ಗೊತ್ತಿಲ್ಲ. ಸರಿಯೆಂದೆ ಭಾವಿಸಿ ಒಬ್ಬ ವ್ಯಕ್ತಿ ಇಂಥ ತೀರ್ಮಾನ ಕೈಗೊಳ್ಳುತ್ತಾನೆ. ಆದರೆ ಅಂತಿಮ ತೀರ್ಮಾನ ಕೊಡುವುದು ಹಾಗೂ ಅಭಿಪ್ರಾಯಕ್ಕೆ ಬರುವುದು ಸಮಾಜವೆಂಬ ಕಾರಣ ಪುರುಷ.

ಖಾದಿ ವಿಚಾರ

ಕರ್ನಾಟಕದ ಪ್ರತಿಷ್ಠಿತ ಖಾದಿ ಉತ್ಪಾದನೆ ಮತ್ತು ಮಾರಾಟದ ಸಂಸ್ಥೆಗಳಲ್ಲಿ ಧಾರವಾಡ ತಾಲ್ಲೂಕ್ ಸೇವಾ ಸಂಘ ಒಂದು. ೧೯೫೬ರ ರಲ್ಲಿ ಈ ಖಾದಿ ಸಂಘ ಪ್ರಾರಂಭವಾಯಿತು. ಈ ಸಂಘದ ಸ್ಥಾಪನೆಗೆ ಕಾರಣರಾದವರು ರಾಮರಾವ್ ಹುಕ್ಕೇರಿಕರ್ ಮತ್ತು ನಾರಾಯಣರಾವ್ ಕಬ್ಬೂರ್. ಸಂಘವು ಧಾರವಾಡ ತಾಲ್ಲೂಕಿನ ಗರಗ, ಹೆಬ್ಬಳ್ಳಿ ಮತ್ತು ಅಮೀನಭಾವಿಗಳಲ್ಲಿ ಖಾದಿ ಉತ್ಪತ್ತಿ ಕೇಂದ್ರಗಳನ್ನು ಸ್ಥಾಪಿಸಿತು. ಸುಮಾರು ೩೦೦೦ ಜನರಿಗೆ ಉದ್ಯೋಗ ಅವಕಾಶವನ್ನು ಒದಗಿಸಿ ಕೊಟ್ಟಿದೆ.

ಖಾದಿ ಕೆಲಸವನ್ನು ವಿಕೇಂದ್ರೀಕರಣಗೊಳಿಸಿ ಗರಗ, ಹೆಬ್ಬಳ್ಳಿ ಮತ್ತು ಅಮೀನಭಾವಿ ಉಪಕೇಂದ್ರಗಳಿಗೆ ಸ್ವಾಯತ್ತತೆ ಕೊಟ್ಟಿತು. ಧಾರವಾಡ ನೂಲುವ ಕೇಂದ್ರದಲ್ಲಿ ನೂರು ಮಹಿಳೆಯರಿಗೆ ಹಾಗು ರಾಮದುರ್ಗದಲ್ಲಿ ೫೦ ಜನ ನೇಕಾರರಿಗೆ ಉದ್ಯೋಗ ಕೊಟ್ಟಿದೆ. ೨೦೧೨-೧೩ರಲ್ಲಿ ೪೮ಲಕ್ಷ ರೂಪಾಯಿ ಮೌಲ್ಯದ ಖಾದಿ ಬಟ್ಟೆ ಉತ್ಪಾದನೆ ಮಾಡಿದೆ. ೫೩ಲಕ್ಷದಷ್ಟು ವ್ಯಾಪಾರ ಮಾಡಿದೆ. ೧೮ಲಕ್ಷದಷ್ಟು ಮಜೂರಿಯನ್ನು ಕೊಡಲಾಗಿದೆ.

೫೭ವರ್ಷ ಖಾದಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಧಾರವಾಡ ತಾಲ್ಲೂಕ್ ಸೇವಾ ಸಂಘ ಕಳೆದ ಅಕ್ಟೋಬರ್ ೨೦ರಂದು ಹೊಸ ನೂಲು ಉತ್ಪಾದನಾ ಘಟಕವನ್ನು ಪ್ರಾರಂಭಿಸಿತು. ಈ ಘಟಕಕ್ಕೆ 'ಸೇವಾ ಸದನ' ಎಂದು ನಾಮಕರಣ ಮಾಡಲಾಗಿದೆ. ಈ ಕಟ್ಟಡದ ಉದ್ಘಾಟನೆಯನ್ನು ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರಾದ ಶ್ರೀ ದೇವೇಂದ್ರ ಭಾಯಿ ದೇಸಾಯಿಯವರು ನೆರವೇರಿಸಿಕೊಟ್ಟರು. ನಾಡೋಜ ಡಾ॥ಪಾಟೀಲ ಪುಟ್ಟಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಪ್ರತಿಷ್ಠಿತ ಖಾದಿ ಸಂಘ ಶ್ರೀ ಸಾಂಬ್ ಜೋಶಿಯವರ ಅಧ್ಯಕ್ಷತೆಯಲ್ಲಿ ಖಾದಿ ಉತ್ಪಾದನೆ ಮತ್ತು ಮಾರಾಟದ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲನ್ನು ಸಾಧಿಸುವತ್ತ ಮುನ್ನಡೆದಿದೆ.

* * *

ಕಳೆದ ಸೆಪ್ಟಂಬರ್ ತಿಂಗಳಲ್ಲಿ ಸಾಬರಮತಿ ಆಶ್ರಮದಲ್ಲಿ ಖಾದಿ ಮಿಷನ್ನಿನ ಸಂಯೋಜಕ ಶ್ರೀ ಬಾಲವಿಜಯ್‌ರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಆ ಸಭೆಯಲ್ಲಿ ದೇಶದ ಅನೇಕ ಖಾದಿ-ಗ್ರಾಮೋದ್ಯೋಗ ಸಂಸ್ಥೆಗಳ ಕಾರ್ಯಕರ್ತರು ಸೇರಿದ್ದರು. ಆ ಸಭೆಯು ಈ ಪ್ರಕಾರ ಸರ್ವಾನುಮತದಿಂದ ಕೆಳಗೆ ಕಾಣಿಸಿದ ಠರಾವನ್ನು ಸ್ವೀಕರಿಸಿತು.

"ಮಹಾತ್ಮ ಗಾಂಧೀ ಪ್ರಣೀತ ಖಾದಿ-ಗ್ರಾಮೋದ್ಯೋಗ ಕಾರ್ಯಕ್ರಮಗಳ ವಿಕಾಸ ನೂಲುಗಾರರ, ನೇಕಾರರ, ಕಾರ್ಯಕರ್ತರ ಉದ್ಯೋಗ ಮತ್ತು ಹಿತದ ರಕ್ಷಣೆಗಾಗಿ ಹಾಗೂ ಸಂಸ್ಥೆಗಳನ್ನು ಸಮರ್ಥವನ್ನಾಗಿ ಮಾಡುವ ದೃಷ್ಟಿಯಿಂದ ಖಾದಿ ಸಂಸ್ಥೆಗಳು ಹಿಂದಿನ ಕಾಲದಲ್ಲಿ ಇದ್ದಂತೆ ಸ್ವಾಯತ್ತ ಮತ್ತು ಸ್ವತಂತ್ರವಾಗುವುದು ಅನಿವಾರ್ಯ".

ಸರ್ವೋದಯ ಆಂದೋಲನದ ಮುನ್ನಡೆ

ಇತ್ತೀಚೆಗೆ ಬಿಹಾರ್‌ನ ಮುಜಫರ್ ನಗರ ಜಿಲ್ಲೆಯಲ್ಲಿ ಕೋಮು ಗಲಭೆಯಿಂದ ಹಿಂಸೆ ತಾಂಡವವಾಡಿತು. ಆ ಪ್ರದೇಶದಲ್ಲಿ ಶಾಂತಿ ಮತ್ತು ಸದ್ಭಾವನೆ ಸ್ಥಾಪಿಸುವ ಉದ್ದೇಶದಿಂದ ಮುಜಫರ್ ನಗರ ಮತ್ತು ಅದರ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಸರ್ವೋದಯ ಕಾರ್ಯಕರ್ತರು ಬಹುವಾಗಿ ಕೆಲಸಮಾಡಿದರು. ೨೦೧೩ ಸೆಪ್ಟಂಬರ್ ೧೩ರಿಂದ೧೭ನೇ ತಾರೀಖಿನ ವರೆಗೆ ಹಿರಿಯ ಸರ್ವೋದಯ ಕಾರ್ಯಕರ್ತರಾದ ಅಮರನಾಥ್ ಭಾಯಿ, ಮಧುಸೂದನ ಉಪಾಧ್ಯಾಯ, ಅಶೋಕ್ ಭಾರತ್, ಸತ್ಯಪ್ರಕಾಶ್ ಭಾರತ್ ಮತ್ತು ಪೂನಂ ಉಜ್ವಲ್‌ರವರು ವಿಭಿನ್ನ ಸಮುದಾಯಗಳ ಜನರನ್ನು ಭೇಟಿ ಮಾಡಿದರು. ಸರ್ವ ಪಂಥ ಮತ್ತು ಸರ್ವ ಸಮುದಾಯ ಸಭೆಯಲ್ಲಿ ಭಾಗವಹಿಸಿ ಜನರು ಒಂದಾಗಬೇಕೆಂದು ಹಿಂಸೆಯನ್ನು ಬಿಡಬೇಕೆಂದು ಹಾಗು ಶಾಂತಿಯನ್ನು ಕಾಪಾಡಬೇಕೆಂದು ಪ್ರಾರ್ಥಿಸಿದರು. ಅಖಿಲ ಭಾರತ ಸರ್ವೋದಯ ಮಂಡಲದ ಅಧ್ಯಕ್ಷರಾದ ರಾಧಾಭಟ್ ಮತ್ತು ಡಾ.ಎಸ್.ಎನ್.ಸುಬ್ಬರಾವ್ ಮುಜಫರ್ ನಗರದಲ್ಲಿ ಸರ್ವಧರ್ಮ ಪ್ರಾರ್ಥನಾ ಸಭೆ ನಡೆಸಿದರು. ನಂತರ ಶ್ರೀರಾಮ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಹಾಗು ನಗರದ ಬುದ್ಧಿಜೀವಿಗಳ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಇತ್ತೀಚೆಗೆ ಪಾಟ್ನಾದಲ್ಲಿ ನಡೆದ ಅಖಿಲ ಭಾರತ ಸರ್ವೋದಯ ಮಂಡಲಿಯ ಅರ್ಧವಾರ್ಷಿಕ ಅಧಿವೇಶನದಲ್ಲಿ ದೇಶದ ವಿಭಿನ್ನ ಸಘನಕಾರ್ಯಕ್ಷೇತ್ರಗಳಲ್ಲಿ ನಡೆದ ಕೆಲಸದ ವರದಿಯನ್ನು ಮಂಡಿಸಿದರು. ನಂತರ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ರಾಧಾಭಟ್ ಈ ರೀತಿ ಅಭಿಪ್ರಾಯಪಟ್ಟರು: "ನಾನು ಕೇಳಿದ ಕಾರ್ಯ ವಿವರಣೆ ಗ್ರಾಮಸ್ವರಾಜ್ಯದ ಕೆಲಸವಲ್ಲ, ಇಂಥ ಕೆಲಸಗಳನ್ನು ನಾವು ಮಾಡುತ್ತಲೇ ಇದ್ದೇವೆ. ಮುಖ್ಯ ಕೆಲಸ ಹಳ್ಳಿ ಹಳ್ಳಿಗಳಲ್ಲಿ ಗ್ರಾಮ ಸ್ವರಾಜ್ಯದ, ಗ್ರಾಮಸಭೆಯ ಸಂಘಟನೆಯಾಗಿದೆ. ಕೇವಲ ಗ್ರಾಮ ಸಮಸ್ಯೆಗಳ ಮೇಲೆ ವಿಚಾರ ಮಾಡುವುದಷ್ಟೇ ಅಲ್ಲ. ಅವುಗಳಲ್ಲಿ ಇರುವ ಗ್ರಾಮಸೇವೆಯ ಅವಕಾಶಗಳ ಬಗ್ಗೆಯೂ ವಿಚಾರ ಮಾಡಬೇಕು. ನಾವು ಲೋಕಶಕ್ತಿಯನ್ನು ನಿರ್ಮಾಣಮಾಡಬೇಕಿದೆ. ಲೋಕಸತ್ತೆಯಿಂದ ಲೋಕಶಕ್ತಿ ಪ್ರಾಪ್ತವಾಗುತ್ತದೆ. ಲೋಕ ಸತ್ತೆಗಾಗಿ ಹಳ್ಳಿಗಳಲ್ಲಿ ಗ್ರಾಮಸ್ವರಾಜ್ಯ ಮತ್ತು ಗ್ರಾಮಸಭೆಯ ಸಂಘಟನೆ ಅವಶ್ಯಕ. ಆದ್ದರಿಂದ ಲೋಕಶಕ್ತಿಯನ್ನು ವಿಕಾಸಗೊಳಿಸುವುದರ ಮೇಲೆ ನಮ್ಮ ಗಮನ ಕೇಂದ್ರಿತವಾಗಬೇಕು."

ಜೂನ್ ೧೧ರಿಂದ೨೯ರ ವರೆಗೆ ಕುಮಾಯು ಕ್ಷೇತ್ರದಲ್ಲಿ ನೀರು-ಕಾಡು-ಭೂಮಿಗಳ ಮೇಲೆ ಹಳ್ಳಿಗರು ಅಧಿಕಾರ ಎಂಬ ವಿಷಯದೊಂದಿಗೆ ಯಾತ್ರೆ ನಡೆಯಿತು. ನಂತರ ಮೂರು ದಿನದ ಶಿಬಿರ ನಡೆಯಿತು. ಈ ಶಿಬಿರದಲ್ಲಿ ೧೫-೨೦ ಯುವಕ-ಯುವತಿಯರು ಭಾಗವಹಿಸಿದ್ದರು. ಗ್ರಾಮ ಸ್ವರಾಜ್ಯಕ್ಕಾಗಿ ಒಳ್ಳೆಯ ಯುವ ಸಮೂಹ ಸಂಘಟಿತವಾಯಿತು.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ವಿ.ಆರ್.ಕಟ್ಟಿ – ಬೆಂಗಳೂರು
ಶ್ರೀ ಕೆ.ಟಿ.ವೆಂಕಟೇಶ್ – ಮಂಡ್ಯ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಸುಧೀಂದ್ರ ಬರೆಗಾರ್ – ಬೆಂಗಳೂರು
ಶ್ರೀ ಎಂ.ಎನ್.ಕುಲಕರ್ಣಿ – ಹೆಗ್ಗೋಡು
ಶ್ರೀಮತಿ ಗಿರಿಜಾ ಶಾಸ್ತ್ರಿ – ಥಾಣೆ
ಶ್ರೀಮತಿ ನೇತ್ರಾವತಿ – ಹುಣಸೇಕೊಪ್ಪ
ಪ್ರೊ॥ ಪಿ.ವೈ.ಕರಮಡಿ – ಹುಚ್ಚಿರೇಶ್ವರನಗರ
ಪಿ.ಸೋಮಶೇಖರ್ – ಹೆಬ್ಬೇರಿ
ಶ್ರೀ ಗುರುನಾಥ ಮುಲ್ಲೆ – ಬೀದರ್
ಶ್ರೀ ಮಹದೇವಪ್ಪ – ರಾಯಚೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.